

ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ

ಯಕ್ಷಗಾನ ಪ್ರಸಂಗಸಂಪುಟ

(ಭಾಗ ಎರಡು)

ಶಿರೂರು ಫಣಿಯಪ್ಪಯ್ಯ ವಿರಚಿತ
ಶ್ರೀ ಕೃಷ್ಣ ಗಾರುಡಿ
ಮಹೇಂದ್ರ ವಿಜಯ





ಹಟ್ಟಿಯಂಗಡಿ ರಾಮಭಟ್ಟ ವಿರಚಿತ
ಬಿಲ್ಲಹಬ್ಬ ಕಂಸವಧೆ
ರತ್ನಪುರದ ರಾಮ ವಿರಚಿತ
ಮೂಲಕಾಸುರ ಕಾಳಗ

ಸಂಪಾದಕರು:
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್

ಪ್ರಕಾಶಕರು:
ಫಣಿಗಿರಿ ಪ್ರತಿಷ್ಠಾನ ಶಿರೂರು

ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ

ಫಣಿಗಿರಿ ಯಕ್ಷಸಂಪುಟ

ಸಂಪಾದಕರು

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಪ್ರಕಾಶಕರು

ಫಣಿಗಿರಿ ಪ್ರತಿಷ್ಠಾನ

ಶಿರೂರು, ಬೈಂದೂರು ತಾಲೂಕು

ಉಡುಪಿ ಜಿಲ್ಲೆ– 576228

'Phanigiri Yaksha Samputa'

(Yakshagana Prasangas composed and collected
by Late Shiroor Phaniyappayya and
Edited by Dr. Kabbinale Vasantha Bharadwaj,
and
Published by Phanigiri Pratishtana, Shiroor,
Udupi Dist. Karnataka-576228.
(Mob: 94483 53910).

Year of Publication: 2023

Pages: 313

Price: Rs. : 300/-

Paper Used : 70 gsm Maplitho

Printed at :
Techfiz Inc.,
60/46/2, 10th B Main,
First Block, Jayanagar, Bengaluru-560011

ಸಂಪಾದಕೀಯ

ಯಕ್ಷಗಾನ ಪ್ರಸಂಗಗಳನ್ನು ಮುದ್ರಿಸುವ ಬಗೆಗೆ ಮೊದಲು ಆಲೋಚಿಸಿದವರು ಮಂಗಳೂರಿನ ಬಾಸೆಲ್ ಮಿಷನ್ನಿನವರು. ಗೇರುಸೊಪ್ಪೆ ಶಾಂತಪ್ಪಯ್ಯನವರ 'ರಾವಣದಿಗ್ವಿಜಯ' ಅವರಿಂದ 1848ರಲ್ಲಿ ಕಲ್ಲಚ್ಚಿನಲ್ಲಿ ಮುದ್ರಿತವಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಬೆಂಗಳೂರಿನ ಕೆಲವು ಪ್ರಕಾಶಕರು ಯಕ್ಷಗಾನಪ್ರಸಂಗಗಳ 'ಬಾಜಾರುಪ್ರತಿ'ಗಳನ್ನು ಮುದ್ರಿಸಿದರೆಂದು ತಿಳಿದುಬರುತ್ತದೆ. ಉಡುಪಿಯ ಪಾವಂಜೆ ಗುರುರಾವ್ ಅವರು 'ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ'ದ ಮೂಲಕ (1927–2002) ನೂರಾರು ಪ್ರಸಂಗಗಳನ್ನು ಪ್ರಕಟಿಸಿದ್ದಾರೆ. ದಾಸಸಾಹಿತ್ಯದ ಸಂಗ್ರಹಕಾರ್ಯದ ಜೊತೆಜೊತೆಗೇ ಅವರು ಯಕ್ಷಗಾನ ಪ್ರಸಂಗಗಳ ಹಸ್ತಪ್ರತಿಯನ್ನು ಸಂಪಾದಿಸಿ ಮುದ್ರಿಸುವ ಬಹುದೊಡ್ಡ ಅಭಿಯಾನವನ್ನು ಆರಂಭಿಸಿದವರು. ಅವರ ಈ ಮಹತ್ಕಾರ್ಯಕ್ಕೆ ಕಡಂದಲೆ ರಾಮರಾಯರಂತಹ ಕೆಲವು ಮಹನೀಯರು ನೆರವಾದರೆಂಬುದೂ ಗಮನಾರ್ಹ. ಈ ಐತಿಹಾಸಿಕ ಪ್ರಯತ್ನಗಳಿಂದಲೇ ಇಂದು ನಮ್ಮ ನಡುವೆ ನೂರಾರು ಪ್ರಸಂಗಗಳು ಉಳಿದುಕೊಂಡಿವೆ ಎಂಬುದನ್ನು ಮರೆಯಬಾರದು. ಕುಕ್ಕಿಲ ಕೃಷ್ಣಭಟ್ಟರು ಸಂಪಾದಿಸಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ 'ಪಾರ್ತಿಸುಬ್ಬನ ಯಕ್ಷಗಾನಗಳು' (1975) ಆಧುನಿಕ ಸಂಪಾದನವಿಧಾನದಿಂದ ಮೂಡಿಬಂದ ಇನ್ನೊಂದು ಮಹತ್ತರ ಹೆಜ್ಜೆ. ಅನಂತರದಲ್ಲಿ ಮಂಗಳೂರು ವಿ.ವಿ, ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿ, ಉಡುಪಿಯ ಯಕ್ಷಗಾನ ಕೇಂದ್ರ, ಮಣೂರಿನ ಸಂಯಮಂ ಪ್ರಕಾಶನ ಮುಂತಾದ ಸಂಸ್ಥೆಗಳು ಮಹತ್ವದ ಪ್ರಸಂಗಗಳನ್ನು ಪ್ರಕಟಿಸಿವೆ. ಇತ್ತೀಚೆಗೆ ದಿ|| ಶಿರೂರು ಫಣಿಯಪ್ಪಯ್ಯನವರ ಸ್ಮರಣಾರ್ಥ ಸಂಸ್ಥಾಪಿತವಾದ 'ಫಣಿಗಿರಿ ಪ್ರತಿಷ್ಠಾನ'ವೂ ಪ್ರಮುಖ ಯಕ್ಷಗಾನಕೃತಿಗಳನ್ನು ಪ್ರಕಟಿಸುವ ಸ್ತುತ್ಯರ್ಹಪ್ರಯತ್ನವನ್ನು ಆರಂಭಿಸಿದೆ. ಈಗಾಗಲೇ 'ಮಾನಸಚರಿತ್ರೆ'ಯಂತಹ ಸಾಂಸ್ಕೃತಿಕಮೌಲ್ಯದ ಕೃತಿಯನ್ನು ಪ್ರಕಟಿಸಿ, ಶಿರೂರು ಫಣಿಯಪ್ಪಯ್ಯ ವಿರಚಿತ ಪ್ರಸಂಗಗಳ ಒಂದು ಸಂಪುಟವನ್ನೂ ಹೊರತಂದಿದೆ. ಇದೀಗ ಶಿರೂರು ಫಣಿಯುಪ್ಪಯ್ಯ ವಿರಚಿತ ಮತ್ತು ಅವರ ಸಂಗ್ರಹದ ತಾಡವಾಲೆ/ ಹಸ್ತಪ್ರತಿಗಳಲ್ಲಿರುವ ನಾಲ್ಕು ಪ್ರಸಂಗಗಳನ್ನು ಇನ್ನೊಂದು ಸಂಪುಟ ರೂಪದಲ್ಲಿ

ಪ್ರಕಟಿಸುವ ಸಾಹಸಕ್ಕೆ ಕೈಹಾಕಿರುವುದು ಪ್ರಶಂಸನೀಯವಾದ ವಿಚಾರ. ಈ ಸಂಪುಟದಲ್ಲಿ ಶಿರೂರು ಫಣಿಯಪ್ಪಯ್ಯನವರು ರಚಿಸಿದ 'ಶ್ರೀಕೃಷ್ಣಗಾರುಡಿ' ಮತ್ತು 'ಮಹೇಂದ್ರವಿಜಯ' ಹಾಗೂ ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ-ಕಂಸವಧೆ' ಮತ್ತು ರತ್ನಪುರದ ರಾಮ ವಿರಚಿತ 'ಮೂಲಕಾಸುರ ಕಾಳಗ' ಎಂಬ ಒಟ್ಟು ನಾಲ್ಕು ಯಕ್ಷಗಾನ ಪ್ರಸಂಗಗಳು ಸಂಪಾದಿತವಾಗಿವೆ.

ಶ್ರೀಕೃಷ್ಣಗಾರುಡಿ :

ಶಿರೂರು ಫಣಿಯಪ್ಪಯ್ಯ (1918–2004) ಯಕ್ಷಗಾನ ಕವಿಯಾಗಿ, ಭಾಗವತರಾಗಿ, ಮೇಳದ ಸಂಚಾಲಕರಾಗಿ ಪ್ರಸಿದ್ಧರು. ಅದಕ್ಕಿಂತಲೂ ಮಿಗಿಲಾಗಿ ಅವರು ಯಕ್ಷಗಾನ ಪ್ರಸಂಗಗಳ ತಾಡವಾಲೆ ಮತ್ತು ಹಸ್ತಪ್ರತಿಗಳ ಸಂಗ್ರಾಹಕರಾಗಿ ಬಹುದೊಡ್ಡ ಸೇವೆಯನ್ನು ಮಾಡಿದವರು. ಯಕ್ಷಗಾನ ವಲಯದಲ್ಲಿ ಬಹುಚರ್ಚಿತವಾದ 'ಮಾನಸಚರಿತ್ರೆ' ಎಂಬ ಮೂಲಿಕೆ ವೆಂಕಣ್ಣಕವಿಯ ಅಮೂಲ್ಯಪ್ರಸಂಗದ ತಾಡವಾಲೆ ಅವರ ಸಂಗ್ರಹದಲ್ಲೇ ಲಭಿಸಿರುವುದು ನಾಡಿನ ಭಾಗ್ಯ. ಅವರು ರಚಿಸಿದ ಹದಿನೈದು ಪ್ರಸಂಗಗಳಲ್ಲಿ 'ಶ್ರೀಕೃಷ್ಣಗಾರುಡಿ' 1963ರಲ್ಲೇ ಪ್ರಕಟಗೊಂಡು ರಂಗಪ್ರದರ್ಶನ ಕಂಡಿದೆ. ಚಲನಚಿತ್ರದ ಕಥೆಯನ್ನು ಆಧರಿಸಿ ರಚನೆಗೊಂಡ ಈ ಪ್ರಸಂಗವು ಯಕ್ಷಗಾನ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮುಖ್ಯವಾದುದು. ಪೌರಾಣಿಕ ಪಾತ್ರಗಳನ್ನು ಬಳಸಿಕೊಂಡು ಕಲ್ಪಿತವಾದ ಆಖ್ಯಾನಗಳ ಸರಣಿಯಲ್ಲಿ ಇದಕ್ಕೆ ಮುಖ್ಯವಾದ ಸ್ಥಾನವಿದೆ.

'ಶ್ರೀಕೃಷ್ಣ ಗಾರುಡಿ' ಒಟ್ಟು 203 ಪದ್ಯಗಳಿರುವ ಪ್ರತಿಭಾಪೂರ್ಣ ಪ್ರಸಂಗ. ವಿನೂತನ ಕಥಾಹಂದರ, ಸನ್ನಿವೇಶರಮ್ಯತೆ, ರಸವೈವಿಧ್ಯ, ಸಾಹಿತ್ಯಸೌಂದರ್ಯ, ಸುಲಲಿತವಾದ ಪದ್ಯಬಂಧಗಳು ಈ ಪ್ರಸಂಗದ ಹಿರಿಮೆ.

ಕವಿಯು ಸ್ವಯಂ ಭಾಗವತರಾದುದರಿಂದ ಪದ್ಯಗಳ ರಚನೆಯಲ್ಲಿ ಸಂಗೀತ-ಸಾಹಿತ್ಯಗಳ ಸಮಾಮೇಲನ ಸಮುಚಿತವಾಗಿ ಮೂಡಿಬಂದಿದೆ. ಒಂದೆರಡು ಉದಾ:

ಯಾರೇ ಭಾಮಿನಿ ಸುಂದರಾಂಗಿ । ಗಜಗಮನೆ ಲತಾಂಗಿ ।
ತೋರೇ ನಿನ್ನಾನನ ಕೋಮಲಾಂಗಿ ॥
ಘೋರ ವಿಪಿನವಿದ । ಸಾರಿದ ಬಗೆಯೇ ।
ನೂರೆಲ್ಲಿದೆ ಮದ । ವಾರಣಗಾಮಿನಿ ॥ ಯಾರೇ ॥ (140)

ಸುಮಕೋಮಲಾಂಗಿ ನಿನ್ನ ನೋಡಿ । ಭ್ರಮೆಗೊಂಡೆನು ಜೋಡಿ ।
ಸುಮಶರನೆನ್ನೊಳ್ ನಿರ್ದಯ ಮಾಡಿ ॥
ಸುಮಬಾಣವನೆದೆ । ಗಮರಿಸಿ ಬಿಡುತಿಹ ।
ನಮಮ ಸಹಿಸೆ ನೀ । ಶಮಿಸೆಲೆ ಮೋದದಿ ॥ ಯಾರೇ ॥ (141)

ಶೃಂಗಾರರಸವನ್ನು ಸುರಿಸುವ ಸುಂದರ ಪದ್ಯಬಂಧವಿದು. ಆದ್ಯಂತಪ್ರಾಸಗಳ ಹೆಣಿಗೆ ಆಪಾತಮಧುರವಾಗಿದೆ.

ವಡಿಯ ಕೈಮುಗಿವೆ ಪರಾಕು । ಧರ್ಮ ।
ದೊಡಿಯರೆನ್ನಯ ನುಡಿಯವಧರಿಸ್ಬೇಕು ॥ ವಡಿಯ ॥ ಪ ॥

ಊರೆಮಗಾಯ್ತು ಬೌ ದೂರ । ನಮ್ಮ ।
ಊರಾಗಾಯ್ಕಂಡ್ ಕಂಡ್ರೆ ಸುತ್ಲು ಸಮ್ದೂರ ॥
ಯಾರೂ ಫಕ್ಕನೆ ಬಪ್ಕೆಯಡಿಯ । ಅಂಥ ।
ಊರಿಂದ ಪೊರಟಿಲ್ಲಿ ಬಂದೆವ್ನಮ್ಮೊಡಿಯಾ ॥ (110)

ಇದೊಂದು ದೇಸಿಯ ಸೊಗಡಿನ ಪದ್ಯ. ಕುಂದಗನ್ನಡದ ಸಹಜಸುಂದರ ವಿಲಾಸವಿಲ್ಲಿದೆ. ವಡಿಯ (ಒಡೆಯ), ಬೌ (ಬಹು), ಆಯ್ಕಂಡ್ (ಇದ್ದುಕೊಂಡು), ಸಮ್ದೂರ (ಸಮುದ್ರ), ಬಪ್ಕೆ (ಬರುವುದಕ್ಕೆ), ಯಡಿಯ (ಅಸಾಧ್ಯ) ಮುಂತಾದ ಪದಸಂಪತ್ತಿಯಿಂದ ಈ ಪದ್ಯ ಮನಸೆಳೆಯುತ್ತದೆ. ಇದರೊಂದಿಗೆ ಅಲ್ಲಲ್ಲಿ ಬರುವ 'ನೀರು ಪಾಲೆರಕವಾಗಿ ಇರ್ಪಂದದಿ', 'ಶಿರಕೆರೆದಿಹ ನೀರು ಚರಣಕಿಳಿಯದುಂಟೆ' ಮುಂತಾದ ಜನಪದ ನುಡಿರೂಪಗಳೂ ಮುದನೀಡುತ್ತವೆ.

ಯಕ್ಷಗಾನ ಕವಿಗಳಲ್ಲಿ ಕಂಡುಬರುವ ಚಿತ್ರಕವಿತಾಪ್ರಸಕ್ತಿಗೆ ದೀರ್ಘ ಪರಂಪರೆಯೇ ಇದೆ. ದೇವಿದಾಸ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮ ಭಟ್ಟ, ಮುದ್ದಣ, ಚವರ್ಕಾಡು ಶಂಭುಜೋಯಿಸ, ಕಲ್ಯಾಣಿ ಭೀಮರಾಯ, ಬವುಲಾಡಿ ಹಿರಿಯಣ್ಣ ಹೆಬ್ಬಾರ ಮುಂತಾದ ಕವಿಗಳ ಒಗಟಿನಂತಹ ರಚನೆಗಳು

ಯಕ್ಷಗಾನಕಾವ್ಯವನ್ನು ಪಂಡಿತಮಾನ್ಯಗೊಳಿಸಿವೆ. ಈ ಪ್ರಸಂಗದ ಒಂದು ಭಾಮಿನಿಷಟ್ಪದಿಯ ರಚನೆಯೂ 'ಪಾರಿಹಾರಿಕಿ' ಎಂಬ ಚಿತ್ರಕವಿತಾ ಪ್ರಭೇದವಾಗಿದೆ ಎಂಬುದು ಗಮನಾರ್ಹ.

[ಜ]ನಕಭೂಪತಿಯಣುಗನಾತ್ಮಜ ।
ನನು ರಣದಿ ಕೆಡಹಿದನ ದರ್ಪವ ।
ಘನದಿ ಮುರಿದವನರಸಿಯಯ್ಯನ ಪೆಸರಹುದು ನಿನಗೆ ॥
ಜನಿಸುವರ್ಭಕರಿಂದ ಮುಂದವ ।
ರನು ಸಲಹಿ ತನ್ನಿಚ್ಛೆಯಂದದಿ ।
ನಿನಗೆ ನಡೆಯಲಸಾಧ್ಯ ಬಿಡು ಸಾರಿದೆನು ಪಿಂತೆರಳು ॥ (152)

"ಜನಕಭೂಪತಿ ಎಂಬುದು ಕೃತವೀರ್ಯರಾಜನ ತಂದೆಯ ಹೆಸರು. (ಮೂಲದಲ್ಲಿ 'ಸನಕಭೂಪತಿ' ಎಂಬ ಪ್ರಯೋಗವಿದ್ದು ಅರ್ಥದೂರವಾದುದರಿಂದ ಇಲ್ಲಿ ಬದಲಾಯಿಸಲಾಗಿದೆ. ಪುರಾಣಭಾರತಕೋಶದಲ್ಲಿ 'ಜನಕ'ನೆಂದೂ, ಪುರಾಣನಾಮಚೂಡಾಮಣಿಯಲ್ಲಿ 'ಧನಕ'ನೆಂದೂ ಉಲ್ಲೇಖವಿದೆ.) ಜನಕರಾಜನ ಮಗನಾದ ಕೃತವೀರ್ಯನ ಸುಪುತ್ರನೇ ಕಾರ್ತವೀರ್ಯಾರ್ಜುನ. ಅವನನ್ನು ಯುದ್ಧದಲ್ಲಿ ಸೋಲಿಸಿದವನು ಪರಶುರಾಮ. ಆ ಪರಶುರಾಮನನ್ನು ಪರಾಭವಗೊಳಿಸಿದವನು ಶ್ರೀರಾಮಚಂದ್ರ. ಅವನ ಮಡದಿಯೇ ಸೀತಾದೇವಿ. ಆ ಸೀತೆಯ ತಂದೆಯೇ ಜನಕರಾಜ! ನನ್ನನ್ನು ಮದುವೆಯಾಗುವ ನೀನು ಮುಂದೆ 'ಮಕ್ಕಳಿಗೆ ಜನಕ'ನೆನಿಸುವೆ! ಆ ಮಕ್ಕಳನ್ನು ನನ್ನ ವಾಂಛೆಯಂತೆ ಸಾಕಿಸಲಹುವುದು ನಿನ್ನಿಂದಾಗದು, ಹಿಂದೆ ಹೋಗು" ಎಂದು ಅರ್ಜುನನಿಗೆ ಹೇಳುವ ಮಾಯಾಮೋಹಿನಿಯ ಮಾತಿದು. 'ನೀನು ಅಪ್ಪನಾಗುವೆ' ಎಂಬುದನ್ನು ಬಳಸುಮಾತಿನಿಂದ ಹೇಳಿರುವುದು ಇಲ್ಲಿಯ ನುಡಿಬೆಡಗು!

ಹರಿ ಮುರಾಂತಕ ಮುಕುಂದ । ಬಂಧನ ಪರಿ ।
ಹರಿಸೋ ನಂಬಿದೆ ಗೋವಿಂದ ॥
ಹರಿಣಲೋಚನೆಗಾಗಿ ನರ ತರ ।
ಹರಿಸುತಿಹ ಬಂದೀಗ ಭಯ ಪರಿ ।
ಹರಿಸಿ ನಮ್ಮನು ಸಲಹಿ ಕರುಣವ ।
ಹರಿಸು ನಿತ್ಯಾನಂದ ಮಹಿಮನೆ ॥ ಪಾಹಿ ॥ (182)

ಇಲ್ಲಿ 'ಹರಿ' ಶಬ್ದದ ಪುನರಾವೃತ್ತಿಯಿದೆ. ಅವುಗಳು ವಿಭಿನ್ನಾರ್ಥವನ್ನು ನೀಡುವಂತಿರುವುದು ಗಮನಾರ್ಹ.

ಮಹೇಂದ್ರವಿಜಯ :

ಇದೇ ಕವಿಯ ಇನ್ನೊಂದು ಕೃತಿಯಿದು. ಜನಪದಲೋಕದ ಸಂಕೀರ್ಣಕಥಾ ವರ್ಗಕ್ಕೆ ಸೇರುವ ಈ ಕಥೆಯೂ ಹೊಸಮಾದರಿಯ ಪ್ರಸಂಗಗಳ ಕಕ್ಷೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯಕೃತಿ. ಮಲತಾಯಿಯ ಕಾಮವಾಂಛೆ, ಕಟುಕರಿಂದ ಜೀವದಾನ, ಕಾಳಿಕಾಂಬೆಗೆ ನರಬಲಿ, ರಾಕ್ಷಸಿಯು ಅಜ್ಜಿಯ ರೂಪತಾಳುವುದು, ಭೂತದ ನೆರವು, ಕಲ್ಲುಗಳನ್ನು ಮಂತ್ರಿಸಿಕೊಡುವುದು, ಶಿಲಾವಿಗ್ರಹವು ಮಾತಾಡುವುದು, ಸರ್ಪವು ಮಾನವನಾಗುವುದು, ಶಾಪದಿಂದ ಕಲ್ಲಾಗುವುದು ಮತ್ತು ನಾಯಿಯಾಗುವುದು, ಮಂತ್ರದಿಂದ ಪೂರ್ವರೂಪಧಾರಣೆ ಇವೇ ಮೊದಲಾದ ಆಶಯಗಳು ಜನಪದಕಥೆಗಳ ಮುಖ್ಯಲಕ್ಷಣವಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಇಂತಹ ರಮ್ಯಕಥಾವಸ್ತುಗಳು ಯಕ್ಷಗಾನ ರಂಗಕ್ಕೆ ಬಂದ ಕಾಲಘಟ್ಟದ ಪ್ರಾತಿನಿಧಿಕ ಕೃತಿಯಾಗಿ ಈ ಪ್ರಸಂಗವನ್ನು ಗಮನಿಸಬಹುದು.

ಪೂರ್ವಕವಿಗಳ ಪದ್ಯಬಂಧಗಳನ್ನೇ ಹೋಲುವ ಸುಂದರ ರಚನೆಗಳನ್ನು ಹೆಣೆಯುವಲ್ಲಿ ಈ ಕವಿಗೆ ವಿಶೇಷ ಒಲವಿದ್ದಂತೆ ತೋರುತ್ತದೆ. ಹಟ್ಟಿಯಂಗಡಿ ರಾಮಭಟ್ಟ, ಮುದ್ದಣ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮೂಲ್ಕಿ ರಾಮಕೃಷ್ಣಯ್ಯ ಮುಂತಾದವರ ಪ್ರಭಾವ ಪ್ರೇರಣೆಗಳು ಅಲ್ಲಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾ:

ಬಾರೊ ಬಾರೋ ನವಮೋಹನಾಂಗ ।
ದೂರದಿ ದಣಿದಂತಿರುವುದು ನಿನ್ನಂಗ ।
ವಿ–ಶ್ರಮಿಸಂತರಂಗ ।
ಪೇ–ಳುವೆನು ಶುಭಾಂಗ ॥ (59)

ನೋಡದೆ ನಿನ್ನನು ಬಲುದಿನವಾಯ್ತು ।
ನೋಡಿದೆನೀಗದಕಾನಂದವಾಯ್ತು ।
ಬೇ–ಸರವೆಲ್ಲ ಹೋಯ್ತು ।
ಮ–ನ್ಮನದಿಚ್ಛೆಯಾಯ್ತು ॥ (61)

ಈ ಪದ್ಯಗಳ ಉತ್ತರಾರ್ಧದಲ್ಲಿ ಕಂಡುಬರುವ ವರಣಸಂಯೋಜನೆ ಆಹ್ಲಾದಕಾರಿಯಾದುದು. ಇದು ಮುದ್ದಣನ 'ಕುಮಾರವಿಜಯ'ದ "ಮಾತನಾಡೋ ಮಮ ಪ್ರಾಣನಾಥ" ಎಂಬ ಪದ್ಯಬಂಧವನ್ನು ಹೋಲುತ್ತದೆ.

ನೀರೆ ಸುಗುಣೆ ಗಂ । ಭೀರೆ ಸುಧಾಕರ । ಮೋರೆ ಕುಮುದನೇತ್ರೆ ॥
ಮಾರನ ಗಿಣಿವ್ಯೆ । ಯ್ಯಾರ ಬೆಡಗುನಗೆ । ಬೀರೆ ವಿಮಲಗಾತ್ರೆ ॥
ಯಾರೆಂದರಿಯೆ ವಿ । ಚಾರಿಪೆ ತವಮನ ।
ಕೋರಿಕೆ ಸಲಿಸುವೆ । ಸೂರೆ ನಿನಗೆ ನಾ । ನೀರೆ ॥ (159)

ಬಾ । ಬಾರೆ ಸುಗುಣ । ಪಾರೆ ಮೊಗವ । ದೋರೆ ಭಾಮಿನಿ ॥
ದೂರವಿರಿಸು ಭಯವನಿತ್ತ । ಸೇರೆಕಾಮಿನಿ ॥
ನಿ । ನ್ನಂಗವರಸಿ । ಭಂಗಬಡುತ । ನಂಗಬಾಣದಿ ॥
ತುಂಗಕುಚೆ ಕು । ರಂಗನಯನೆ । ಯಂಗಗಾಣದಿ ॥ (340–341)

ಈ ಪದ್ಯಗಳಲ್ಲಿಯೂ ಮುದ್ದಣನ 'ಕುಮಾರವಿಜಯ' ಪ್ರಸಂಗದ "ಕುಂದರದನೆ ಪೂರ್ಣೇಂದುವದನೆ" ಮತ್ತು "ಆನಂದಮುಖೀ ಸುಂದರಾಂಗಿ" ಪದ್ಯಗಳ ಧಾಟಿಯನ್ನು ನೋಡಬಹುದು. ಯಕ್ಷಗಾನ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅರಿಸಮಾಸಗಳು ಈ ಕವಿಯ ರಚನೆಗಳಲ್ಲೂ ಕಂಡು ಬರುವುದುಂಟು. ಉದಾ: ಕಡಲಂಬರೇಶ (ಸಮುದ್ರವಸನೆಯಾದ ಭೂಮಿಯ ಅಧಿಪತಿ–ರಾಜ), ಎಲರಶನ (ಗಾಳಿಯೇ ಆಹಾರವಾಗಿ ಉಳ್ಳ ಹಾವು) ಇತ್ಯಾದಿ. ಹಳು (ಚ್ಯುತಿ), ತಾಳ (ಕೀಲು), ಕುಕ್ಕರ (ನಾಯಿ), ಬಟ್ಟೆ (ದಾರಿ), ಸವನಿಸು (ಒದಗು), ಹೊಲಬು (ದಾರಿ), ಮೊರೆ (ಆಶ್ರಯ) ಇತ್ಯಾದಿ ನಡುಗನ್ನಡಕ್ಕೆ ಒಪ್ಪುವ ಪದಪ್ರಯೋಗಗಳೂ ಇಲ್ಲಿ ಗಮನಾರ್ಹ. ಜೊತೆಗೆ ಸಂಸ್ಕೃತ ಭೂಯಿಷ್ಠವಾದ ಸಮಾಸಪದಗಳನ್ನೂ ಕವಿ ಬಳಸಿರುವುದುಂಟು. ಉದಾ: ಶ್ರೀಲಕ್ಷ್ಮೀವದನಾರವಿಂದಮಿಹಿರ, ವಾಸವಮುಖ್ಯದಿವೌಕಸಪೋಷ, ಮತ್ಕುಲಕೀರ್ತಿವೃಕ್ಷ ಕುಠಾರ, ವಿಕ್ರಮಾಂಕಿತ ಗುಣಶರಧಿಗಂಭೀರ ಇತ್ಯಾದಿ.

ಯಕ್ಷಗಾನದ ಆಹಾರ್ಯವೈಭವವನ್ನು ಸಾಕ್ಷಾತ್ಕರಿಸಲು ಈ ಪ್ರಸಂಗ ಅತ್ಯಂತ ಪ್ರಶಸ್ತವಾಗಿದೆ. ರಾಜ, ರಾಣಿ, ರಾಜಕುಮಾರ, ರಾಜಕುಮಾರಿ, ಅಡಗೂಳಜ್ಜಿ, ಯಕ್ಷ, ಗಂಧರ್ವ, ರಾಕ್ಷಸ, ರಾಕ್ಷಸಿ, ಭೂತ, ದೇವತೆಗಳು,

ಜೋಯಿಸ, ಚಾರಕರು, ವನಪಾಲಕರು, ಕಟುಕರು ಮುಂತಾದ ವೇಷವೈವಿಧ್ಯಗಳು ಭವ್ಯಲೋಕವನ್ನು ಸೃಷ್ಟಿಸಲು ಸಹಕಾರಿಯಾಗಿವೆ. ಇಡೀರಾತ್ರಿಯ ಪ್ರದರ್ಶನಕ್ಕೆ ಇದು ಸೂಕ್ತವಾಗಿದೆ.

ಬಿಲ್ಲಹಬ್ಬ–ಕಂಸವಧೆ:

ಹಟ್ಟಿಯಂಗಡಿ ರಾಮಭಟ್ಟ (ಕ್ರಿ. ಶ. 1794–1854) ಕುಂದಾಪುರದ ಸಮೀಪದ ಹಟ್ಟಿಯಂಗಡಿಯವರು. ಅಲ್ಲಿರುವ ಲೋಕನಾಥೇಶ್ವರ ದೇಗುಲದ ಅರ್ಚಕ ಸೂರಭಟ್ಟರ ಮಗ. ಅವಧೂತನಂತಿದ್ದ ಆಶುಕವಿ. ಅತಿಕಾಯ ಕಾಳಗ, ಧ್ರುವಚರಿತ್ರೆ, ಲವಕುಶರ ಕಾಳಗ, ದ್ರೌಪದಿಸ್ವಯಂವರ, ಸುಭದ್ರಾಕಲ್ಯಾಣ, ರತಿಕಲ್ಯಾಣ ಮುಂತಾದ (17) ಪ್ರಸಂಗಗಳನ್ನು ರಚಿಸಿದವರು. ಇವರ 'ಬಿಲ್ಲಹಬ್ಬ–ಕಂಸವಧೆ' ಭಾಗವತ ಪುರಾಣವನ್ನು ಆಧರಿಸಿದ ಅತ್ಯುತ್ತಮ ಪ್ರಸಂಗ. ಭಾಷಾಶೈಲಿ, ಛಂದೋಬಂಧ, ಕಾವ್ಯಮೌಲ್ಯಗಳ ದೃಷ್ಟಿಯಿಂದ ಇದನ್ನು ಕವಿಯ ಉತ್ಕೃಷ್ಟ ರಚನೆ ಎನ್ನಬೇಕು.

ಶಬ್ದಾಲಂಕಾರದ ಸೊಬಗು:

ಮಕರಕುಂಡಲ ಭೂಷ ಮಾಧುರ್ಯತರಭಾಷ ।
ಶಕಟದಾನವಭಂಗ ಶ್ಯಾಮಳ ಘನಾಂಗ ॥
ಸಕಲ ಜಗದಾಧಾರ ಸಿಂಧುಸಮ ಗಂಭೀರ ।
ಮುಕುರಸಮ ಸುಕಪೋಲ ವರಪೀತ ಚೇಲ (3)

ಥರವಿಡಿದು ಬರುವ ಸುತರಂಗದಿಂ ಸಾಂಗದಿಂ ।
ಚರಿಸುತಿಹ ಮತ್ಸ್ಯಸಂದೋಹದಿಂ ಗ್ರಾಹದಿಂ ।
ಪರಿಪೂತೆ ತಾನೆಂಬ ಪೆಂಪಿನಿಂ ತಂಪಿನಿಂ ವಿವಿಧಜಲಚರಗಳಿಂದ ॥
ಪರಿಮಳಿತ ಕುಸುಮ ಫಲಭಾರದಿಂ ಕೀರದಿಂ ।
ಮೆರೆವ ನಾನಾವಿಧದ ತರುಗಳಿಂ ಹರಿಗಳಿಂ ।
ಪರಿಶೋಭಿಪುಭಯಪ್ರತೀರದಿಂ ಸ್ವೈರದಿಂದಿಹ ರವಿಜೆಯಂ ಕಂಡರು (172)

ಇಲ್ಲಿಯ ಒಳಪ್ರಾಸಗಳ ಚೆಲುವು ಗಮನಾರ್ಹ. ಲಾಟಾನುಪ್ರಾಸಗಳಿರುವ ಇಂತಹ ವಾರ್ಧಕಷಟ್ಪದಿಗಳು ಲಕ್ಷ್ಮೀಶನ ಜೈಮಿನಿ ಭಾರತವನ್ನು ನೆನಪಿಸುತ್ತವೆ.

ವರ್ಣನೆಗಳು :

ಭಯದಿ ಕಂಸಂಗಖಿಳ ಜಗ ಹರಿ ।
ಮಯವೆನಿಸಿ ತೋರಿತ್ತು ಮೇಣ್ ಸರ ।
ಸಿಯಲಿ ಪಂಕಜವರಳ್ದುದಳಿಮಕರಂದ ವಾರಿಯಲಿ ॥
ಪ್ರಿಯದೊಳಘಮರುಷಣವ ಗೈದುದು ।
ನಯಸರದಿ ಕೋಗಿಲೆಗಳುಲಿದುದು ।
ನಯನಗೋಚರನಾದನಿನನವನೀಶ ಕೇಳೆಂದ ॥ (310)

ಇದೊಂದು ಸುಂದರ ಸೂರ್ಯೋದಯದ ವರ್ಣನೆ. "ಸರೋವರದಲ್ಲಿ ತಾವರೆಗಳು ಅರಳಿದವು. ದುಂಬಿಗಳು ಮಕರಂದದ ನೀರಿನಲ್ಲಿ ಅಘಮರ್ಷಣವನ್ನು ಮಾಡಿದವು. ಕೋಗಿಲೆಗಳು ಇಂಪಾಗಿ ಕೂಗಿದವು. ಆಗ ಸೂರ್ಯನು ಮೂಡಿದನು." ಇಲ್ಲಿ 'ಅಘಮರ್ಷಣ'ವೆಂದರೆ ಪಾಪಪರಿಮಾರ್ಜನೆಯ ಮಂತ್ರವಿಧಿ. ದುಂಬಿಗಳ ಝೇಂಕಾರವನ್ನು ಮಂತ್ರಘೋಷದೊಂದಿಗೆ ಸಮೀಕರಿಸಿದುದು ಒಂದು ಸೌಂದರ್ಯವಾದರೆ, ಕಂಸನ ದುಷ್ಕೃತ್ಯಗಳಿಗೆ ಪರಿಸಮಾಪ್ತಿ ಒದಗಿಬಂದಿದೆ ಎಂಬ ಕಾವ್ಯಧ್ವನಿಯೂ ಇಲ್ಲಿದೆ!

ಸೂರ್ಯಾಸ್ತವನ್ನು ವಿಭಿನ್ನವಾಗಿ ವರ್ಣಿಸುವ ಪರಿಯೊಂದು ಹೀಗಿದೆ:

ಮನೆಗೆ ಪೋಗಲ್ಕನ್ನೆಗಂ ಮಿಸುನಿವೆಟ್ಟಮಂ ।
ತನಗೆ ನಿಚ್ಚಂ ಸುತ್ತುವೀ ದುಃಖ ತೀರದೆಂ ।
ದೆನುತ ಮುನಿಸಂದಳೆದು ಪಶ್ಚಿಮಾಚಲದಿಂದಲಿನನಿಳಿದನಂಬುನಿಧಿಗೆ (72)

"ಮೇರುಪರ್ವತವನ್ನು ಪ್ರತಿನಿತ್ಯ ತನಗೆ ಪ್ರದಕ್ಷಿಣೆಗೈಯುವ ಸಂಕಷ್ಟ ಬೇಡವೆಂದು ಸಿಟ್ಟುಗೊಂಡ ಸೂರ್ಯ ಪಡುವಣಬೆಟ್ಟದಿಂದ ಸಮುದ್ರಕ್ಕೆ ಇಳಿದ"ನೆಂಬ ಮಾತು ಮನೋಹರವಾದುದು. (ಕನಕದಾಸರ ಮೋಹನತರಂಗಿಣಿಯಲ್ಲಿ ಇಂತಹ ಮಾತಿದೆ. "ಮೇರುಪರ್ವತವ ಸುತ್ತುವ ಭಾರ ತನಗಿರ್ದು ತೀರುವುದಿಲ್ಲೆಂದು ಸೂರ್ಯ; ವಾರುವರಥಗೂಡಿ ಪಡುವೆಟ್ಟ ಶಿಖರದಿ ನೀರೊಟ್ಟಿಲೊಳು ಬಿದ್ದ ಮುದದಿ" – 18–3).

ಕಾಲಂದುಗೆಯನು ಕರದೊಳ್ । ಕೆಲ ।
ರೋಲೆಯ ಬೆರಳ್ಗಳೊಳ್ ಕಡಗವ ಕಿವಿಯೊಳ್ ॥
ಲೀಲೆಯೊಳಿಟ್ಟು ಚಚ್ಚರದೊಳ್ । ಶ್ರೀ ।
ಲೋಲನ ಮುಖಕಮಲವ ಕಾಂಬ ಭರದೊಳ್ ॥ (221)

ಮಥುರಾನಗರಿಯಲ್ಲಿ ಶ್ರೀಕೃಷ್ಣನನ್ನು ನೋಡಲೆಳಸಿದ ಹೆಂಗಸರ ಗಡಿಬಿಡಿಯಿಲ್ಲಿದೆ! "ಕಾಲಿಗೆ ಧರಿಸುವ ಗೆಜ್ಜೆಯನ್ನು ಕೈಗೆ ಇಟ್ಟರಂತೆ! ಓಲೆಗಳನ್ನು ಬೆರಳಿಗೆ ಹಾಕಿಕೊಂಡರಂತೆ! ಕೈಬಳೆಗಳನ್ನು ಕಿವಿಗಳಿಗೆ ಸಿಕ್ಕಿಸಿಕೊಂಡರಂತೆ!" ಇದೇ ತೆರನಾದ ವರ್ಣನೆ ಮುದ್ದಣಕವಿಯ ಶ್ರೀರಾಮಪಟ್ಟಾಭಿಷೇಕದಲ್ಲೂ ("ಪಸುರೆಲೆಯ ಬೆಲ್ಲವತ್ತಂಗೆತ್ತು: 4–13) ಬರುತ್ತದೆ.

ಭ್ರಮರ ಬಾಲಹಿಮಾಂಶು ಕಾರ್ಮುಕ ಕುಮುದ ಸ್ಫುಟ ತಿಲಕುಸುಮವೋ ॥
ಪ್ರಮದೆಯಳ ಕುಂತಳ ಲಲಾಟ ಭ್ರೂ ನಯನ ನಾಸಿಕವೊ ಮೇಣ್ ।
ಕಮಲ ಕಾಂಚನಕಲಶ ಪುಳಿನವೊ ಮುಖ ಪಯೋಧರ ಜಘನವೋ ।
ಭ್ರಮೆಯಗೊಳಿಪುದಿದೆಂಬಿನಿಂ ಕಣ್ಗೆಸೆದಳಾ ಸೀಮಂತಿನಿ ॥ (264)

ಶ್ರೀಕೃಷ್ಣನ ಕೃಪಾಕಟಾಕ್ಷದಿಂದ ತ್ರಿವಕ್ರೆಯಾಗಿದ್ದ ಕುಬ್ಜೆಯು ಅಪೂರ್ವ ಸುಂದರಿಯಾಗಿ ಕಂಗೊಳಿಸಿರುವುದನ್ನು ಇದು ಬಣ್ಣಿಸುತ್ತದೆ. "ಕುಬ್ಜೆಯ ಮುಂಗುರುಳು, ಹಣೆ, ಹುಬ್ಬು, ಕಣ್ಣು, ಮೂಗುಗಳು ದುಂಬಿಯೋ, ಚಂದ್ರನೋ, ಬಿಲ್ಲೋ, ನೈದಿಲೆಯೋ, ತಿಲಪುಷ್ಪವೋ ಎಂಬಂತೆ ಭಾಸವಾದವು! ಅವಳ ಮುಖ, ಸ್ತನ, ಜಘನಗಳು ತಾವರೆ, ಬಂಗಾರದ ಕಲಶ, ಮರಳದಿನ್ನೆಗಳೋ ಎಂಬ ಭ್ರಮೆಯನ್ನು ಉಂಟುಮಾಡಿದವು!" ಯಕ್ಷಗಾನ ಕಾವ್ಯಪ್ರಪಂಚದಲ್ಲೇ ಇದೊಂದು ಅನನ್ಯಚಿತ್ರ. ಇಲ್ಲಿ ಉಪಮಾನ ಮತ್ತು ಉಪಮೇಯಗಳನ್ನು ಬೇರೆಬೇರೆಯಾಗಿ ಹೇಳಿದರೂ, ಅವುಗಳನ್ನು ಕ್ರಮಾನುಗತಿಯಲ್ಲಿ ಜೋಡಿಸಿದ ಕವಿಪ್ರತಿಭೆ ಗಮನಾರ್ಹವಾದುದು.

ದೃಷ್ಟಾಂತಗಳನ್ನು ನೀಡುವಲ್ಲಿ ದೇಸಿಯ ಸೊಬಗನ್ನು ನೋಡಬಹುದು. ಉದಾ: 'ಚಂದ್ರನ ಕಿರಣಕ್ಕೆ ಮುಸುಡು ಕಂದುವುದೆ', 'ಕಳಿಲೆಯುಗುರಿಂದ ಮುರಿದಂತೆ ಲಳಿಗೆಯಾದ ಮೇಲಂಜುವದೆ', 'ಎಳೆಯ ನಾಗನ ವಿಷವು ನೋಡಲೆಳತಾಗುವದೆ', 'ಸಿಂಗವಾನೆಗೆ ಬೆದರಿನಡೆವುದೆ ಸಾರಂಗಕಂಜಿ ಪೆರ್ಬುಲಿಯು ಬಿಡುವುದೆ' ಇತ್ಯಾದಿ. 'ಬಳಿಕ ಫಲದಾಸೆಯೊಳು ಸುಮವ

ಮೀರ್ವಂತೆ', 'ಜಗತಿಯೆಂಬಂಗನೆಯ ನಗೆಮೋಗವಿದೆಂಬಂತೆ', 'ಗಾಳಿ ಬೆಂಬಲವಾದ ಶಿಖಿಯವೋಲ್', 'ಸಂದ ಪುಣ್ಯದ ತಾರೆಗಳು ನಭದಿಂದ ಬೀಳ್ವಂತೆ', 'ವಾರಿನಿಧಿ ದೆಸೆದಪ್ಪಿಯೊಂದೇ ಬಾರಿ ಬಹುದೆಂಬಂತೆ' ಮುಂತಾದ ಉಪಮೆಗಳೂ ಮನನೀಯ.

ಕಂಗಳೊಳಂ ಕಮಲಾಂಬಕ ।
ನಂಗಸುಧಾರಸವನೀಂಟುತಂ ಜನರಾಗಳ್ ॥
ಹಿಂಗದೆ ತೀವಿದ ಹರುಷದಿ ।
ಹೊಂಗುತ ಸುಖವಾರ್ಧಿಯೊಳಗೆ ಮುಳುಗುತ ನುಡಿದರ್ ॥ (341)

ಶ್ರೀಕೃಷ್ಣನ 'ಅಂಗಸುಧಾರಸ'ವನ್ನು ಜನರು ಕಣ್ಣುಗಳಲ್ಲೇ ಕುಡಿದರಂತೆ! ಅದು ಸಾಲದೆಂಬಂತೆ ಸಂತೋಷದಲ್ಲಿ ಓಲಾಡಿ 'ಸುಖವಾರ್ಧಿ'ಯಲ್ಲಿ ಮುಳುಗಿದರಂತೆ! ಕಮಲದ ಕಣ್ಣುಳ್ಳವನ ಚೆಲುವನ್ನು ಕಣ್ಣುಗಳಲ್ಲೇ ಕುಡಿದರೆಂಬಲ್ಲಿಯೂ ಬೆಡಗಿದೆ. ಹೀಗೆ ಈ ರೂಪಕಾಲಂಕಾರವೂ ಕಮನೀಯ ಕಾವ್ಯದ ಕಾಣ್ಕೆಯಾಗಿದೆ.

'ಇನಜನೂರಿಗುಂಬಳಿಯನು ಬಿಡುವೆವೆಂದರು' (285) ಎಂಬಲ್ಲಿರುವ ವಕ್ರೋಕ್ತಿವಿಲಾಸ ದೊಡ್ಡದು. 'ಹಾರುವರು ಮಂತ್ರದಕ್ಷತೆಯ ಬಿತ್ತಿದರು' (417), 'ಸುಮ್ಮಾನದ ಸುಖದ ಸುಗ್ಗಿಯನು' (421), 'ನೆತ್ತಿಯೊಳ್ಮಡಿದೆನು ಹಸ್ತದಂಜಲಿಯ' (186) ಮುಂತಾದ ವಾಕ್ಯಗಳು ಕವಿಪ್ರತಿಭೆಗೆ ಸಾಕ್ಷಿಯಾಗಿವೆ. 'ಪದಹತಿಗೆ ಧರೆಯ ಬಲಿಸದನವನು ಪೊಗಿಸುತ್ತ (76) ಎಂಬುದು ಕೇಶಿದಾನವನ ಭಯಂಕರ ಹೆಜ್ಜೆಗತಿಯನ್ನು ಉತ್ಪ್ರೇಕ್ಷಿಸುವ ರೀತಿ. ಅವನು ಹೆಜ್ಜೆಯಿಟ್ಟಾಗ ಭೂಮಿಯೇ ಪಾತಾಳಕ್ಕೆ ಕುಸಿಯಿತು ಎಂಬುದು ಕವಿಯ ವಿವಕ್ಷೆ.

ಭಾಷಾಪ್ರಯೋಗ:

ಏವೆ (ಏನು ಮಾಡುವೆ), ಹೊಳಲೊಪ್ಪ (ಪುರದ ಚೆಲುವು), ಗಳಹು (ಒದರು), ನಿಗುಚು (ಮೇಲೆತ್ತು), ಬಿನುಗು (ಕ್ಷುದ್ರ) ಮುಂತಾದ ನಡುಗನ್ನಡ ಪದಗಳು ಯಕ್ಷಗಾನಶೈಲಿಗೆ ಚೆನ್ನಾಗಿ ಒಪ್ಪುತ್ತವೆ. ಕೆಲವೊಂದು ಪ್ರಯೋಗಗಳು ವಿಶಿಷ್ಟವಾಗಿರುವುದು ಗಮನಾರ್ಹ. ಉದಾ:

'ಸೈರಂಧ್ರಿಗೊಲಿದಿತ್ತ ಭಾಷೆಯ ತಿದ್ದಿ' (438) ಎಂಬುದು ವಿಶಿಷ್ಟವಾದ ಪ್ರಯೋಗ. ಇಲ್ಲಿ 'ತಿದ್ದು'ವುದೆಂದರೆ 'ತೀರ್ಚು' ಅಥವಾ 'ಮುಗಿಸು' ಎಂಬರ್ಥ. ('ತಿದ್ದಿತೇ ಭವದೀಯ ಕರ್ಣದ ಹೊದ್ದಿಗೆ'– ತೊರವೆ ರಾಮಾಯಣ: 2–6–25) ಕೊಟ್ಟ ಭಾಷೆಯನ್ನು ಈಡೇರಿಸಿದನೆಂಬುದು ಭಾವಾರ್ಥ. ಕುಬ್ಜೆಯ ವಕ್ರತೆಯನ್ನು ತಿದ್ದಿದ ಭಗವಂತ ಇಲ್ಲಿ ಭಾಷೆಯನ್ನೂ ತಿದ್ದಿಬಿಟ್ಟ!

ಬಹೆ ನಿನ್ನ ಮನೆಗೆ ಮುದದಿ । ಪರಿವಾರ ।
ಸಹಿತಲಿ ನಿರಾಲಸ್ಯದಿ ॥
ವಿಹಿತವೈ ನೀ ಪೇಳ್ದುದು । ಶರಣುಗಳ ।
ಗೃಹದೊಳಾರೋಗಿಸುವುದು ॥ (201)

ಇದು ಅಕ್ರೂರನಿಗೆ ಶ್ರೀಕೃಷ್ಣನ ಪ್ರತ್ಯುತ್ತರ. ಇಲ್ಲಿಯ 'ಶರಣುಗಳ' ಎಂಬ ಪದಪ್ರಯೋಗ ವಿಶಿಷ್ಟವಾದುದು. ವಂದನಾರ್ಥದ 'ಶರಣು' ಇಲ್ಲಿ ಭಕ್ತಿನಿರ್ವೇದನೆಯ ಜೊತೆಗೆ 'ನೈವೇದ್ಯ/ಆತಿಥ್ಯ' ಎಂಬ ಅರ್ಥಧ್ವನಿಯನ್ನೂ ಪಡಿಮೂಡಿಸುತ್ತದೆ!

ಛಂದಸ್ಸು:

ಯಕ್ಷಗಾನಛಂದಸ್ಸಿನ ಎಲ್ಲ ಮಾದರಿಗಳನ್ನೂ ಈ ಕವಿ ಬಳಸಿಕೊಂಡಿದ್ದಾರೆ ಎನ್ನಬಹುದು. ಸೌರಾಷ್ಟ್ರ–ತ್ರಿವುಡೆ, ಭೈರವಿ–ತ್ರಿವುಡೆ, ಕಾಂಭೋದಿ–ಝಂಪೆ, ಭೈರವಿ–ರಝಂಪೆ, ಶಂಕರಾಭರಣ–ಅಷ್ಟ, ಕೇದಾರಗೌಳ–ಅಷ್ಟ, ಆರ್ಯಾಸವಾಯಿ–ಏಕ, ಮುಖಾರಿ–ಏಕ, ಭೈರವಿ–ಏಕ, ಶಂಕರಾಭರಣ–ಮಟ್ಟೆ ಮುಂತಾದ ಪ್ರಸಿದ್ಧ ಛಂದೋಬಂಧಗಳ ಜೊತೆಗೆ ಸಾಂಗತ್ಯ, ದ್ವಿಪದಿ, ಕಂದಪದ್ಯಗಳನ್ನೂ ಬಳಸಿದ್ದಾರೆ. ಭಾಮಿನಿ, ವಾರ್ಧಕಗಳ ಜೊತೆಗೆ ಶರ, ಕುಸುಮ, ಭೋಗ ಷಟ್ಪದಿಗಳನ್ನೂ ಬಳಸಿರುವುದು ವಿಶೇಷವಾಗಿದೆ. ಶಾರ್ದೂಲವಿಕ್ರೀಡಿತ, ಚಂಪಕಮಾಲೆ ಮತ್ತು ಮತ್ತೇಭವಿಕ್ರೀಡಿತ ವೃತ್ತಗಳು ಬಳಕೆಯಾಗಿವೆ. ಇವುಗಳಲ್ಲಿ ಮತ್ತೇಭವಿಕ್ರೀಡಿತವನ್ನು 'ಗಜವಿಕ್ರೀಡಿತ' ಎಂದು ಹೆಸರಿಸಲಾಗಿದೆ.

ಅಪೂರ್ವವಾಗಿ 'ತಾರಾವಳಿವೃತ್ತ–ದಂಡಕ' ಎಂಬ (385) ಛಂದೋಬಂಧವನ್ನು ಈ ಪ್ರಸಂಗದಲ್ಲಿ ನೋಡಬಹುದು. ಇಪ್ಪತ್ತೊಂಬತ್ತು ಸಾಲುಗಳ ಈ ತಾರಾವಳಿ ಛಂದಸ್ಸು ವಿಶೇಷವಾದುದು. ಪ್ರತಿಪಾದದಲ್ಲಿ

ದ್ವಿತೀಯಾಕ್ಷರ ಪ್ರಾಸವಿರುವ ಎರಡು ವಿಷ್ಣುಗಣಗಳ ಬಳಿಕೆ ಮತ್ತು ಅದನ್ನು ದಂಡಕವೆಂದು ಕರೆದಿರುವುದು ಗಮನಾರ್ಹ. (ಕನ್ನಡಕಾವ್ಯಗಳಲ್ಲಿ ದೊರೆತ ತಾರಾವಳಿಗಳಲ್ಲಿ 27 ಮತ್ತು ಅದಕ್ಕಿಂತ ಕಡಿಮೆ ಪಾದಗಳಿದ್ದು, ಪ್ರತಿಪಾದದಲ್ಲಿ ನಾಲ್ಕು ವಿಷ್ಣುಗಣಗಳಿರುವ ಉದಾಹರಣೆಗಳು ದೊರೆತಿವೆ. ನೋಡಿ: ಡಾ. ಎಂ. ಚಿದಾನಂದ ಮೂರ್ತಿ- ಛಂದೋೀತರಂಗ, ಪುಟ 270)

'ಕಕ್ಕುಭ' ಎಂಬ (192) ಛಂದಸ್ಸಿನ ಸೂಚನೆಯಿದೆಯಾದರೂ ಅದು 'ಕಕುಪ್/ಕಕುಭ್' ಎಂಬ ವೈದಿಕಛಂದಸ್ಸನ್ನು ಹೋಲುವುದಿಲ್ಲ. ಶ್ರೀಕೃಷ್ಣನನ್ನು ಸ್ತುತಿಸುವ ಸಂದರ್ಭದಲ್ಲಿ ಕಂಡುಬರುವ 'ದಶಾವತಾರ' ಕೀರ್ತನೆಯೊಂದು (342) ಯಕ್ಷಗಾನ ಮತ್ತು ದಾಸಸಾಹಿತ್ಯಗಳ ಅವಿನಾಭಾವ ಸಂಬಂಧಕ್ಕೆ ಸಾಕ್ಷಿಯಂತಿದೆ.

ಮೂಲಕಾಸುರ ಕಾಳಗ:

ಈ ಪ್ರಸಂಗದ ಕವಿ ರತ್ನಪುರದ ರಾಮ. 'ತಾಮ್ರಧ್ವಜ ಕಾಳಗ' ಮತ್ತು 'ಮೂಲಕಾಸುರ ಕಾಳಗ' ಎರಡೂ ಇವನ ಕೃತಿಗಳು. ಉತ್ತರಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಶಿವಪುರದವನೆಂಬ ಅಭಿಪ್ರಾಯವಿದೆ. ಅವನ 'ಮೂಲಕಾಸುರ ಕಾಳಗ' ಕೃತಿಯಲ್ಲಿ ದೊರಕುವ ಕವಿಮುದ್ರಿಕೆ ಹೀಗಿದೆ:

ಧರೆಯೊಳು ಶತ್ರುತ್ಕರೀಪುರಮಧ್ಯವಾಸಿ ಭೂ ।
ಸುರಕುಲೋತ್ಪನ್ನ ಕಾಶ್ಯಪಗೋತ್ರಭವ ಮನೋ ।
ಹರ ತಿರುಮಲಾರ್ಯನ ಸುಪುತ್ರ ಶಂಕರನ ಕುಲಸತಿ ಸರಸ್ವತಿಸೂನು ನಾ ॥
ಪರಮಗುರುವರ್ಯ ಸುಬ್ರಹ್ಮಣ್ಯನಂಘ್ರಿಪಂ ।
ಕರುಹದೊಲವಿಂದ ವಿರಚಿಸಿದೆನೀ ಕಾವ್ಯಮಂ ।
ತರಳ ರಾಮನ ಬಾಲಭಾಷಿತವನುದ್ಧರಿಸಿ ಸುಜನರೊಲಿದಾಲಿಸುವುದು ॥ (335)

ಇದರ ಅರ್ಥ: "ರತ್ನಪುರದಲ್ಲಿ ವಾಸವಾಗಿರುವ ಬ್ರಾಹ್ಮಣಕುಲದ ಕಾಶ್ಯಪಗೋತ್ರದ ತಿರುಮಲನ ಸುಪುತ್ರನಾದ ಶಂಕರನ ಮಡದಿಯಾದ ಸರಸ್ವತಿಯ ಮಗನಾದ ರಾಮನು ಸುಬ್ರಹ್ಮಣ್ಯಗುರುಗಳ ಆಶೀರ್ವಾದದಿಂದ ಈ ಕಾವ್ಯವನ್ನು ರಚಿಸಿದ್ದೇನೆ. ಈ ಬಾಲಭಾಷಿತವನ್ನು ಸಜ್ಜನರು ಪ್ರೀತಿಯಿಂದ ಆಲಿಸುವುದು" ಎಂದು. ಈ ಪ್ರಸಂಗದ ನಾಂದಿಯಲ್ಲಿ 'ರತ್ನಪುರದ ವೆಂಕಟೇಶ'

ಮತ್ತು 'ಬೆಪ್ಪಳಿನಿಲಯದ ಗೋಪೀನಾಥ'ನ ಸ್ಮರಣೆಯಿದೆ. ಡಾ. ಶಿವರಾಮ ಕಾರಂತರು ಇವನ ಕಾಲವನ್ನು ಪ್ರಸಂಗದ ತಾಡವಾಲೆಯ (ಕ್ರಿ.ಶ. 1691) ಆಧಾರದಿಂದ ಹದಿನೇಳನೆಯ ಶತಮಾನದ ಆದಿಭಾಗವೆಂದು ತರ್ಕಿಸಿದ್ದಾರೆ.

ಮೂಲಕಾಸುರ ಕಾಳಗದ ಕಥಾವಸ್ತುವಿಗೆ ಮೂಲ ಯಾವುದೆಂದು ತಿಳಿಯದು. ಆದರೆ ಅದರಲ್ಲಿ ಬರುವ ಕುಶನು ದರ್ಭೆಯಲ್ಲಿ ಜನಿಸಿದನೆಂಬ ಜನ್ಮವೃತ್ತಾಂತವು ಜನಪದ ರಾಮಾಯಣಕ್ಕೆ ಋಣಿಯಾಗಿದೆ ಎನ್ನಬಹುದು. ಕುಶನು ಅಯೋನಿಜನಾದ ಕಾರಣದಿಂದಲೇ ಮೂಲಕಾಸುರನನ್ನು ವಧಿಸಲು ಸಮರ್ಥನಾದನೆಂಬುದು ಇಲ್ಲಿಯ ಕಥೆಯ ವಿಶೇಷತೆ.

ರಾಮಾಯಣದ ಕಥೆಯನ್ನು ಸಂಕ್ಷೇಪವಾಗಿ ಹೇಳಿ, ರಾವಣವಧಾನಂತರದಲ್ಲಿ ಸೀತೆಯ ಅಗ್ನಿಪ್ರವೇಶವನ್ನು ನಿರೂಪಿಸಿ ಶ್ರೀರಾಮನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗುವುದು ಪ್ರಸಂಗದ ಪೂರ್ವಭಾಗವಾದರೆ, ರಾವಣಪುತ್ರನಾದ ಮೂಲಕಾಸುರನು ವಿಭೀಷಣನನ್ನು ಲಂಕೆಯಿಂದ ಓಡಿಸುವುದು, ಅಯೋಧ್ಯೆಯ ಮೇಲೆ ದಾಳಿಮಾಡುವುದು, ಯುದ್ಧದಲ್ಲಿ ಲಕ್ಷ್ಮಣಾದಿಗಳನ್ನು ಸೋಲಿಸುವುದು, ಕೊನೆಗೆ ಕುಶನಿಂದ ಸಾಯುವುದು ಉತ್ತರಭಾಗವಾಗಿ ರಂಗದಲ್ಲಿ ರಂಜಿಸುತ್ತದೆ. (ರಾವಣನಿಗೆ ಮೂಲಾನಕ್ಷತ್ರದಲ್ಲಿ ಅರಿಷ್ಟಸೂಚಕನಾಗಿ ಜನಿಸಿದ ಮೂಲಕನೆಂಬವನನ್ನು ಕಾಡಿನಲ್ಲಿ ಬಿಟ್ಟ ಕಥಾಹಂದರ ರಂಗದಲ್ಲಿ ಅಭಿನೀತಗೊಳ್ಳುವುದಿಲ್ಲ.) ಪರಿಚಿತವಲ್ಲದ ಕಥೆ, ಸಂವಾದದ ಸೊಬಗು, ಯುದ್ಧದೃಶ್ಯಗಳು ಈ ಪ್ರಸಂಗದ ವಿಶೇಷತೆ.

ಕಾವ್ಯದ ಮನೋಹರತೆಯೂ ಗಮನಾರ್ಹವಾಗಿದೆ. ಹಲವಾರು ವಾರ್ಧಕ ಷಟ್ಪದಿಗಳು ಅನುಪ್ರಾಸವೈಭವದಿಂದ ಮನಸೆಳೆಯುತ್ತವೆ. ಒಂದೆರಡು ಉದಾ:

ಸರಸಿಜಾದಳನೇತ್ರೆ ಲಲಿತಮಂಗಳಗಾತ್ರೆ ।
ಮೆರೆವ ಮುಕುರಕಪೋಲೆ ಮಧುಪಕುಂತಳಜಾಲೆ ।
ಮಿರುಪ ಮಂಜುಳಭಾಸೆ ಮುಕುಳಚಂಪಕನಾಸೆ ಶಶಿವದನೆ ಕುಂದರದನೆ॥
ಸರಸಗುಣಸಂಪನ್ನೆ ಕಾಮಿನೀಕುಲರನ್ನೆ ।
ಉರಗಸನ್ನಿಭವೇಣಿ ಮಧುರಕೋಕಿಲವಾಣಿ ।
ನಿರುಪಮ ಮಹೀಜಾತೆ ಮುದದಿ ತ್ರಿಜಗನ್ಮಾತೆ ಮಣಿಪರಿಸ್ತೃತೆಯಾದಳು ॥ (33)

ಕುಸುಮ ಫಲಭಾರದಿಂದಳಿಯ ಝೇಂಕಾರದಿಂ ।
ಲಸದುತ್ಪ್ರವಾಳದಿಂ ಶುಕಪಿಕ ಮರಾಳದಿಂ ।
ಶ್ವಸನ ದಾಳಿಂಬದಿಂ ವಟ ಶಮಿ ಕದಂಬದಿಂ ಪೂಗಪುನ್ನಾಗದಿಂದ ॥
ಕಿಸಲಯ ಮರೀಚಿಯಿಂದಪರಿಮಿತ ವೀಚಿಯಿಂ ।
ದೆಸೆವ ಕಾಸಾರದಿಂದಮಲಪಯಪೂರದಿಂ ।
ಬಿಸಜಸುಮಗಂಪಿನಿಂ ಶ್ರಮಗಳವತಂಪಿನಿಂದೆಸೆದಿರ್ದವಾ ವನಗಳು ॥ (129)

ಪೆಗಲೊಳೇರಿಸಿದ ನವ ತೂಣದಿಂ ಬಾಣದಿಂ ।
ಬಗೆಬಗೆಯ ವಾದ್ಯಗಳ ಘೋಷದಿಂ ತೋಷದಿಂ ।
ದೃಗುಯುಗದೊಳೊಗೆವ ಕೂರ್ಗಿಡಿಗಳಿಂದಡಿಗಳಿಂ ಪೊಡವಿ ಕಂಪಿಸುತಿರಲ್ಕೆ ॥
ಸಗರಾನ್ವಯನ ಕೃಪೆಯ ಬಲದಿಂದ ಛಲದಿಂದ ।
ಮೃಗರಾಜರವ ಪರಾಕ್ರಮದಿಂದ ಕ್ರಮದಿಂದ ।
ಸುಗದಾಸಿ ಪರಶು ತೋಮರದಿಂದ ಭರದಿಂದ ಪೊರಮಟ್ಟುದಾ ವಾಹಿನಿ ॥ (144)

ಈ ಷಟ್ಪದಿಗಳಲ್ಲಿ ಲಾಟಾನುಪ್ರಾಸದ ಸೊಬಗಿದೆ. ಮೊದಲಿನ ಎರಡು ಷಟ್ಪದಿಗಳ ಪ್ರಾಸರೂಪಕ್ಕೂ, ಅನಂತರದ ಷಟ್ಪದಿಯ ಪ್ರಾಸರೂಪಕ್ಕೂ ಅಂತರವಿರುವುದನ್ನು ಗಮನಿಸಬಹುದು. ಗಾಯನದಲ್ಲಿ ಈ ಪ್ರಾಸಶಬ್ದಗಳು ನಾದಮನೋಹರತೆಗೆ ಕಾರಣವಾಗುವುದನ್ನು ರಸಜ್ಞರು ಬಲ್ಲರು.

ಶ್ರೀರಾಮನ ಆಡಳಿತದ ಸುಖಸಂತೃಪ್ತಿಯನ್ನು ವರ್ಣಿಸುವ ಎರಡು ವಾರ್ಧಕಷಟ್ಪದಿಗಳು ಗಮನಿಸಬೇಕಾದವುಗಳು. ಅವುಗಳಲ್ಲಿ ಒಂದು ಯಾವುದೇ ರೀತಿಯ ಕೆಡುಕುಗಳಿಲ್ಲವೆಂಬುದನ್ನೂ, ಇನ್ನೊಂದು ಒಳಿತಿನ ಸರಣಿಯೇ ಇದೆಯೆಂಬುದನ್ನೂ ವರ್ಣಿಸುವ ಕವಿಕೌಶಲಗಳು.

ಜಂತುಗಳ ಮೇಲೆ ನಿರ್ದಯವಿಲ್ಲ ಭಯವಿಲ್ಲ ।
ಚಿಂತೆ ನಿಷ್ಠೂರಘರ್ಷಣವಿಲ್ಲ ಋಣವಿಲ್ಲ ।
ಸ್ವಂತದೊಳಜಸ್ರ ಚಂಚಲವಿಲ್ಲ ಛಲವಿಲ್ಲ ವರ್ಣಸಂಕರಗಳಿಲ್ಲ ॥
ಸಂತತಂ ದುಃಖದುಷ್ಕೃತಿಯಿಲ್ಲ ಖತಿಯಿಲ್ಲ ।
ಕ್ರಂತನವ್ಯಾಧಿಸಂಕಟವಿಲ್ಲ ಸಟೆಯಿಲ್ಲ ।
ಕಂತುಶರದುರುಬೆಗಾಸ್ಪದವಿಲ್ಲ ಮದವಿಲ್ಲ ಕೃತಬಂಧನಂಗಳಿಲ್ಲ ॥ (78)

ಎಲ್ಲಿ ನೋಡಿದರು ದಾಕ್ಷಿಣ್ಯಮಯ ಪುಣ್ಯಮಯ ।
ಎಲ್ಲಿಯುಂ ನಡೆವ ಸತ್ಕರ್ಮಮಯ ಧರ್ಮಮಯ ।
ಎಲ್ಲಿಯುಂ ಹರಿಕಥಾನಾದಮಯ ವೇದಮಯ ವಿಪ್ರಸಂತರ್ಪಣೆಗಳು ॥
ಎಲ್ಲಿಯುಂ ಸರ್ವದಾರೋಗ್ಯಮಯ ಭಾಗ್ಯಮಯ ।
ವೆಲ್ಲಿಯುಂ ಶಮೆ ದಮೆ ವಿಭೂತಿಮಯ ನೀತಿಮಯ ।
ಎಲ್ಲಿಯುಂ ಶೋಭಿಪಾರಾಮಮಯ ಹೇಮಮಯವಾದುದಾ ರಾಷ್ಟ್ರದೊಳಗೆ ॥ (79)

ಈ ನಿರೂಪಣೆಯಲ್ಲೂ ವ್ಯಂಜನಸಮತೆಯ ಅಲಂಕಾರವಿದೆ. ಜೊತೆಗೆ ಅರ್ಥಭೂಯಿಷ್ಠವಾದ ಸಾಹಿತ್ಯಶ್ರೀಮಂತಿಕೆಯಿದೆ.

ಛಂದಸ್ಸು :

ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿಯೇ ಇದೆ. ಕೆಲವು ಸೃಜನಶೀಲವಾದ ವಿನ್ಯಾಸಗಳು ರಂಗದಲ್ಲಿ ಚೇತೋಹಾರಿಯಾದ ಅನುಭವಕ್ಕೆ ಕಾರಣವಾಗುವುದುರಲ್ಲಿ ಸಂದೇಹವಿಲ್ಲ. ಉದಾ:

ಮಾನಿನಿ ಕೇಳೇನಿದು ಪೇಳ್ ತಿಳಿಯದು ॥ ಪ ॥

ಸತಿಯ ಪುರುಷ ಕೂಡದೆ । ಸುತರು ಬೇಕೆನ್ನದೆ ।
ಕ್ಷಿತಿಗೆ ಜನಿಸಲಪ್ಪುದೇ । ಮ । ನ್ಮತಿಗೆ ಸಂಶಯವಿದೆ ॥

ಖಳನ ಸಂಗರದಲ್ಲಿ । ಒಲವನಂಬರದಲ್ಲಿ ।
ಒಲಿದುಸುರ್ದ ನುಡಿಯಲ್ಲಿ । ನಾ । ತಿಳಿದೆನಾ ದಿನದಲ್ಲಿ ॥ (318–319)

ಈ ಪದ್ಯದ ಉತ್ತರಾರ್ಧದಲ್ಲಿರುವ ಎರಡು ಮಾತ್ರೆಗಳ 'ವರಣ' ಸಂಯೋಜನೆ ಅನ್ಯತ್ರ ಕಂಡುಬಾರದ ವಿಶೇಷಾಂಶ.

ಸಾಮಾನ್ಯವಾಗಿ ಕಂಡುಬರುವ 'ನೀಲಾಂಬರಿ–ರೂಪಕ'ದ ಛಂದೋಬಂಧದಲ್ಲಿ ಆರುಮಾತ್ರೆಯ ಗಣವಿನ್ಯಾಸವಿದ್ದು ವಿಳಂಬಗತಿಯ ಗಾಯನಕ್ಕೆ ಮುದನೀಡುತ್ತದೆ. ವಿಷಮಪಾದಗಳಲ್ಲಿ '6+6+6+6' ಮತ್ತು ಸಮಪಾದಗಳಲ್ಲಿ '6+6+6+3' ಎಂಬ ವಿನ್ಯಾಸವಿರುತ್ತದೆ. ಇದು ಅಚ್ಚಗನ್ನಡದ ಅಂಶಲಯಛಂದಸ್ಸಿನ 'ಮದನವತಿ'ಯ ಮಾತ್ರಾತ್ಮಕ ವಿನ್ಯಾಸ ಎಂಬುದನ್ನು

ಗಮನಿಸಬೇಕು. ಆದರೆ ಇಲ್ಲಿ ಅದು ಕೆಲವೆಡೆ '6+4+4' ಎಂಬ ಧ್ರುವತಾಳದ ಸ್ವರೂಪವನ್ನು ಪಡೆಯುವುದು ಗತಿಭಂಗಕ್ಕೆ ಕಾರಣವಾಗುತ್ತದೆ. ಉದಾ:

ಪಾವನ ಮುನಿ/ ವಂಶೋದ್ಭವ / ರಾವಣನುದ/ ರದಿ ಜನಿಸಿದೆ /
ನೀ ವನದಲಿ / ಬದುಕಿದೆ ವನ / ದೇವತೆಯರ / ದಯದಿ ॥
ದೇವಾರಾ / ತಿಯು ವಿಪಿನಕೆ / ಪಾವಕನಾ / ದೆನೆ ಶಿವಶಿವ /
ಭೂವಳಯದಿ / ಶಾಲೂರನ / ತೆರದಲಿ / ಜೀವಿಸಿ ಫಲ / ವೇನು ॥ (100)

ಕುಲಕಂಟಕ / ನೆನಿಸಿದೆ ಜಗ / ದೊಳಗಿದನರಿ / ಯದೆ ವ್ಯರ್ಥದಿ /
ಸಲೆ ನಿಂದೆಗೆ / ಗುರಿಯಾ / ದೆನೆ ರಣ / ದೊಳಗಳಿದರೆ / ಬಂಧುಗಳು /
ನೆಲನಾಸೆಗೆ / ತನ್ನಣ್ಣನ / ಕೊಲಿಸಿದ ಕಿರಿ / ಯಪ್ಪನು / ಪಾಪದ /
ಕೆಲಸವಿದೆಂ / ದುಳಿಯದೆ / ವೈರಿಗ / ಳೊಳಗಾಗದೆ / ತಾನು ॥ (101)

ಭಾಷೆ :
ಅಮಮ ಘೋರೆಂದುರಿ ಧಡಾಳಿಸಲ್ ತೆಗೆದೆಚ್ಚ ।
ಸುಮತಿ ಕೈಕಾತ್ಮಜನ ಪೇರುರಕೆ ತಾಗಿದುದು ।
ನಿಮಿಷಾರ್ಧದೊಳ್ ಬಟ್ಟೆದೆಗೆಯಲ್ಕೆ ಬೆನ್ನೊಳಗೆ ಧರಣಿಗಂ ಪಸೆಗೈದನು ॥(230)

ಇಲ್ಲಿ 'ಬಟ್ಟೆದೆಗೆಯುವುದು' ಎಂದರೆ ಪಲಾಯನ ಮಾಡುವುದು ಎಂದರ್ಥ. 'ಬೆನ್ನೊಳಗೆ' ಎಂದರೆ ತತ್ಕ್ಷಣದಲ್ಲಿ ಎಂದರ್ಥ. ಇದು ಆಡುನುಡಿಯ ಪ್ರಭಾವದಿಂದ ಉಂಟಾದ ಪ್ರಯೋಗ. ರೂಢಿಯಲ್ಲಿ ಹೇಳುವ 'ಅದರ ಬೆನ್ನಿಗೆ ಬಂದೆ', 'ಅದಾದ ಬೆನ್ನಿಗೆ ತಂದರು' ಮುಂತಾದೆಡೆ 'ವಿಳಂಬಿಸದೆ' ಎಂಬ ಅರ್ಥಚ್ಛಾಯೆ ಕಾಣಿಸುತ್ತದೆ. 'ಧರಣಿಗಂ ಪಸೆಗೈದನು' ಎಂದರೆ 'ಭೂಮಿಗೆ ತಂಪನ್ನು ಉಂಟುಮಾಡಿದನು' ಎಂದರ್ಥ. ಅಪರಿಚಿತಾರ್ಥಗಳನ್ನೇ ಬಳಸಿ ವಾಕ್ಯವನ್ನು ರಚಿಸಿರುವುದು ಇಲ್ಲಿಯ ಕ್ಲಿಷ್ಟತೆ. ಒಟ್ಟಿನಲ್ಲಿ "ಭರತನ ಹೃದಯಕ್ಕೆ ಅಗ್ನಿಶರವು ತಾಗಿದ ಕೂಡಲೇ ಅವನು ಓಡಿಹೋದನು ಮತ್ತು ಮರುಕ್ಷಣದಲ್ಲೇ ಪ್ರತ್ಯಸ್ತ್ರದಿಂದ ಭೂಮಿಯನ್ನು ತಂಪುಗೊಳಿಸಿದನು" ಎಂಬ ಅರ್ಥ ಹೊಳೆಯುತ್ತದೆ.

ಸಂವಾದವಿಶೇಷತೆಗಳು ಈ ಪ್ರಸಂಗದಲ್ಲಿ ಗಮನಸೆಳೆಯುವಂತಿವೆ. 'ಸೀತಾ-ರಾಮ ಸಂವಾದ', 'ಶಿವ-ರಾಮ ಸಂವಾದ', 'ಮೂಲಕ-ನಾರದ ಸಂವಾದ'ಗಳನ್ನು ಇದಕ್ಕೆ ಉದಾಹರಿಸಬಹುದು. ಪರಶಿವನು ಶ್ರೀರಾಮನಲ್ಲಿ ಕೇಳುವ ಪ್ರಶ್ನೆಗಳು ತಾತ್ತ್ವಿಕಚಿಂತನೆಗೆ ಇಂಬುನೀಡುತ್ತವೆ.

ಮೇದಿನೀಶತಿಲಕ ನಮ್ಮೊಳ । ಭೇದಗೊಂಡ ತನುವಿಗೀ ಸ ।
ಮಾಧಿಯೆಂಬುದೊಂದು ಬರಿವಿ । ನೋದ ಬಳಲಿಕೆ ॥
ಸಾಧುಗುಣಸುಶೀಲ ನಿರಪ । ವಾದಿ ನಿನ್ನ ಮನದಿ ಬಯಕೆ ।
ಯಾದುದೆಂತೆನುತ್ತಲಭವ । ಮೋದದಿಂದ ಕರವ ಪಿಡಿದ ॥ (304)

ವಾರಿಯೊಳಗೆ ಕೆಡೆದು । ತೋಯನು ।
ದಾರ ವಾಯು ಬಡಿದು ॥ ಒಣಗಿಸ ।
ಲಾರದಗ್ನಿವಿಡಿದು ॥ ದಹಿಸನು ।
ಬೇರೆ ಶರದಿ ಕಡಿದು ॥ ಕೊಲ್ಲುವ ।
ರಾರು ನೋಡು ನಿರವಯ ನಿಶ್ರೇಯನ ।
ತೋರಿ ತೋರಿದಾದ್ಯಂತರಹಿತನೆಂತಹ ॥ (309)

ಇಲ್ಲಿರುವ 'ಶಿವ-ರಾಮ ಸಂವಾದ'ದಲ್ಲಿ ಹರಿ-ಹರರು ಸ್ವಯಂ ಅಭಿನ್ನರಾಗಿದ್ದೂ, "ಸಮಾಧಿಯೆಂಬುದೊಂದು ಬರಿವಿನೋದ ಬಳಲಿಕೆ" ಎಂಬ ವಿಚಾರದೀಪ್ತಿಯಿದೆ. ಅಲ್ಲಿಯೇ ಗೀತೋಪನಿಷತ್ತಿನ "ನೈನಂ ಛಿಂದಂತಿ ಶಸ್ತ್ರಾಣಿ" 2-23) ಮುಂತಾದ ಚಿಂತನೆಗಳು ಮಡುಗಟ್ಟಿವೆ. ತಾಳಮದ್ದಳೆಗಳಲ್ಲಿ ಈ ಭಾಗ ಹೆಚ್ಚು ರಂಜಿಸಬಹುದಾಗಿದೆ.

ಗ್ರಂಥಸಂಪಾದನೆಯಲ್ಲಿ ಏಕೈಕ ಹಸ್ತಪ್ರತಿಯನ್ನು ಅವಲಂಬಿಸಿರುವುದರಿಂದ, ಪಾಠಾಂತರಗಳ ಪ್ರಮೇಯವಿಲ್ಲ. ಗಣನ್ಯೂನತೆ/ಪಾದನ್ಯೂನತೆಗಳು ಕಂಡುಬಂದ ಪದ್ಯಗಳಲ್ಲಿ ಊಹಾಪಠ್ಯವನ್ನು ಚೌಕಕಂಸದಲ್ಲಿ ನೀಡಲಾಗಿದೆ. ಉದಾ : 2-175, 3-228, 3-346, 3-413, 4-6, 4-65, 4-123, 4-162, 4-252, 4-308, 4-310 ಇತ್ಯಾದಿ.

* * * * *

ಈ ನಾಲ್ಕು ಪ್ರಸಂಗಗಳ ಸಂಪುಟವು ಯಕ್ಷಗಾನ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ತುಂಬಾ ಸಹಕಾರಿಯಾಗಿದೆ. ಇದನ್ನು ಪ್ರಕಟಿಸುತ್ತಿರುವ 'ಫಣಿಗಿರಿ ಪ್ರತಿಷ್ಠಾನ'ದ ಶ್ರೀ ಉಮೇಶ ಶಿರೂರು ಮತ್ತು ಅವರ ಮಿತ್ರರ ಕಾರ್ಯ ಸ್ತುತ್ಯರ್ಹವಾದುದು. ಅವರಿಗೆ ಸರ್ವಶುಭವನ್ನು ಹಾರಯಿಸುತ್ತೇನೆ.

ದಿನಾಂಕ 15.10.2023
ನವರಾತ್ರಿ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
ಚರವಾಣಿ : 99450 55534

ಪ್ರಕಾಶಕರ ಮಾತು

ಯಕ್ಷಗಾನಕವಿ ಶಿರೂರು ಫಣಿಯಪ್ಪಯ್ಯವರ ನೆನಪಿನಲ್ಲಿ ನಾವು ಕುಟುಂಬಸ್ಥರು ಮತ್ತು ಯಕ್ಷಾಭಿಮಾನಿಗಳ ಸಹಕಾರದಿಂದ ಪ್ರಾರಂಭಿಸಿದ 'ಫಣಿಗಿರಿ ಪ್ರತಿಷ್ಠಾನ ಶಿರೂರು' ವತಿಯಿಂದ ಯಕ್ಷಗಾನ ಪ್ರಸಂಗ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕಳೆದ ಮೂರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ನಾಲ್ಕನೆಯ ಕೃತಿಯನ್ನು ಪ್ರಕಟಸುತ್ತಿರುವುದಕ್ಕೆ ಹೆಮ್ಮೆ ಮತ್ತು ಸಂತೋಷವಾಗುತ್ತಿದೆ. ಶಿರೂರು ಫಣಿಯಪ್ಪಯ್ಯ ವಿರಚಿತ ಆರು ಯಕ್ಷಗಾನ ಪ್ರಸಂಗಗಳು ಮತ್ತು ಯಕ್ಷಲೋಕದ ಅಪರೂಪದ ಕೃತಿಯೆಂದು ಗುರುತಿಸಲ್ಪಟ್ಟ ಮೂಲಿಕೆ ವೆಂಕಣ್ಣಕವಿಯ ಮಾನಸಚರಿತ್ರೆ ಪ್ರಸಂಗ ಕೃತಿಗಳನ್ನು ಹಿಂದಿನ ವರ್ಷಗಳಲ್ಲಿ ಹಿರಿಯ ಯಕ್ಷಗಾನ ವಿದ್ವಾಂಸರೂ, ಪ್ರತಿಷ್ಠಿತ 'ಪಾರ್ತಿಸುಬ್ಬ ಪ್ರಶಸ್ತಿ' ಪುರಸ್ಕೃತರೂ ಆದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರ ಸಂಪಾದಕತ್ವದಲ್ಲಿ ಫಣಿಗಿರಿ ಪ್ರತಿಷ್ಠಾನ ಪ್ರಕಟಿಸಿರುವುದು ಯಕ್ಷಗಾನ ಸಾಹಿತ್ಯಾಭಿಮಾನಿಗಳಿಗೆ ತಿಳಿದ ವಿಷಯವಾಗಿದೆ. ಅದೇ ರೀತಿ ಈ ವರ್ಷ ಕೂಡ ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ ಪ್ರಸಂಗ ಕೃತಿಗಳನ್ನು ಈ ಸಂಪುಟದಲ್ಲಿ ಡಾ. ಕಬ್ಬಿನಾಲೆಯವರ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದ್ದೇವೆ.

ಶಿರೂರು ಫಣಿಯಪ್ಪಯ್ಯ ವಿರಚಿತ 'ಶ್ರೀಕೃಷ್ಣಗಾರುಡಿ' ಮತ್ತು 'ಮಹೇಂದ್ರವಿಜಯ' ಪ್ರಸಂಗಗಳೊಂದಿಗೆ ಅವರು ತಾಳೆಗರಿ ಗ್ರಂಥಗಳಿಂದ ಹಸ್ತಪ್ರತಿ ಮಾಡಿಟ್ಟ ಹಟ್ಟಿಯಂಗಡಿ ರಾಮಭಟ್ಟ ವಿರಚಿತ 'ಬಿಲ್ಲಹಬ್ಬ–ಕಂಸವಧೆ', ಮತ್ತು ರತ್ನಪುರದ ರಾಮಕವಿ ವಿರಚಿತ 'ಮೂಲಕಾಸುರ ಕಾಳಗ' ಎಂಬ ಒಟ್ಟು ನಾಲ್ಕು ಯಕ್ಷಗಾನ ಪ್ರಸಂಗಗಳನ್ನು ಈ ಸಂಪುಟದಲ್ಲಿ ಪ್ರಕಟಿಸುತ್ತಿದ್ದೇವೆ. ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ–ಕಂಸವಧೆ', ರತ್ನಪುರದ ರಾಮಕವಿಯ 'ಮೂಲಕಾಸುರ ಕಾಳಗ' ಎರಡೂ ಬಹಳ ಅಪರೂಪದ ಪೌರಾಣಿಕ ಪ್ರಸಂಗ ಕೃತಿಗಳಾಗಿದ್ದು ಈವರೆಗೆ ಎಲ್ಲಿಯೂ ಪ್ರಕಟವಾಗಿರುವುದಿಲ್ಲ. ಮೊದಲ ಬಾರಿಗೆ ಈ ಅಪೂರ್ವ ಕೃತಿಗಳನ್ನು ಯಕ್ಷಗಾನ ಸಾಹಿತ್ಯ ಅಭಿಮಾನಿಗಳಿಗೆ ಸಮರ್ಪಿಸುವ ಮೂಲಕ ನಮ್ಮ ತಂದೆ ಶಿರೂರು ಫಣಿಯಪ್ಪಯ್ಯನವರ ಸಾರಸ್ವತ ಶ್ರಮವನ್ನು ಸಾರ್ಥಕಗೊಳಿಸಿದ ಕ್ಷಣ ನಮ್ಮದಾಗಿದೆ. 'ಮಹೇಂದ್ರ ವಿಜಯ' ಯಕ್ಷಗಾನಕೃತಿ ಮೊದಲ ಬಾರಿಗೆ ಪ್ರಕಟವಾಗುತ್ತಿದ್ದು ಬಹಳ

ಹಿಂದೆಯೇ ಖ್ಯಾತ ಭಾಗವತ ದಿವಂಗತ ನಾರ್ಣಪ್ಪ ಉಪ್ಪೂರರ ನಿರ್ದೇಶನದಲ್ಲಿ ಯಶಸ್ವಿಯಾಗಿ ಮೇಳಗಳಲ್ಲಿ ಹಲವು ಪ್ರದರ್ಶನ ಕಂಡ ಪ್ರಸಂಗ. 'ಶ್ರೀಕೃಷ್ಣಗಾರುಡಿ' 1963ರಲ್ಲಿ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಣೆಗೊಂಡಿದ್ದರೂ ಈಗ ಪ್ರತಿಗಳು ಅಲಭ್ಯ ಮತ್ತು ಫಣಿಯಪ್ಪಯ್ಯನವರ ಸಂಪುಟದಲ್ಲಿ ಈ ಪ್ರಸಂಗಕೃತಿ ಕೂಡ ಯಕ್ಷಗಾನ ಆಸಕ್ತರಿಗೆ ಲಭಿಸಲಿ ಎಂಬ ಕಾರಣಗಳಿಂದ ಸೇರಿಸಿದ್ದೇವೆ.

ಮುಂದಿನ ದಿನಗಳಲ್ಲಿ ಯಕ್ಷಗಾನಕವಿಗಳ ಅಪ್ರಕಟಿತ ಪೌರಾಣಿಕ ಛಂದೋಬದ್ಧ ಯಕ್ಷಗಾನ ಪ್ರಸಂಗಗಳನ್ನು ಅವುಗಳ ಹಸ್ತಪ್ರತಿಗಳು ಲಭ್ಯವಾದಂತೆ ಪ್ರಕಟಿಸುವ ಉದ್ದೇಶವನ್ನು ನಮ್ಮ ಪ್ರತಿಷ್ಠಾನ ಹೊಂದಿದೆ. ಈ ಬಗ್ಗೆ ಹಸ್ತಪ್ರತಿಗಳ ಮಾಹಿತಿಗಳನ್ನು ಯಕ್ಷಗಾನ ಪ್ರಸಂಗ ಸಾಹಿತ್ಯಾಭಿಮಾನಿಗಳು ನಮಗೆ ನೀಡುವಂತೆ ಕೋರಿಕೊಳ್ಳುತ್ತಿದ್ದೇವೆ.

ಕಳೆದ ಮೂರು ವರ್ಷಗಳಿಂದ ನಮ್ಮ ಪ್ರಕಟಣೆಯ ಎಲ್ಲ ಪ್ರಸಂಗ ಕೃತಿಗಳನ್ನು ಬಹಳ ಮುತುವರ್ಜಿಯಿಂದ ಪರಿಶೀಲಿಸಿ ಸಂಪಾದಕತ್ವವನ್ನು ಮಾಡಿ ನಮ್ಮ ಕಾರ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವ ನಾಡಿನ ಹಿರಿಯ ಸಾಹಿತಿ ಹಾಗೂ ಯಕ್ಷಗಾನ ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟ ಓಂಶಿವಪ್ರಕಾಶ ಅವರಿಗೆ, ಹಸ್ತಪ್ರತಿ ಗಣಕೀಕರಣಗೊಳಿಸಲು ಸಹಕರಿಸಿದ ಶ್ರೀ ಎಸ್. ಆರ್. ರಘುಭಟ್ ಅವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇವೆ. ನಮಗೆ ಸಲಹೆ ಸಹಕಾರ ನೀಡಿ ನಮ್ಮ ಪ್ರತಿಷ್ಠಾನದ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿರುವ ಎಲ್ಲ ಯಕ್ಷಗಾನ ಅಭಿಮಾನಿಗಳಿಗೆ ಮತ್ತು ಪ್ರತಿಷ್ಠಾನದ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳು.

ದಿನಾಂಕ 15.10.2023 **ಉಮೇಶ ಶಿರೂರು**
ನವರಾತ್ರಿ ಚರವಾಣಿ : 94483 53910

ಪರಿವಿಡಿ

ಹಟ್ಟಿಯಂಗಡಿ ರಾಮಭಟ್ಟ ವಿರಚಿತ

ಯಕ್ಷಗಾನ

ಬಿಲ್ಲಹಬ್ಬ – ಕಂಸವಧೆ

[ಹಸ್ತಪ್ರತಿ ದಿನಾಂಕ 23–08–1985]

ಕಥಾಸಾರ

ಮಥುರೆಯಲ್ಲಿರುವ ಕಂಸಾಸುರನ ಆಸ್ಥಾನಕ್ಕೆ ನಾರದರ ಆಗಮನ. ನಂದಗೋಕುಲದಲ್ಲಿ ಶ್ರೀಕೃಷ್ಣ-ಬಲರಾಮರು ಬೆಳೆಯುತ್ತಾ ಇದ್ದಾರೆಂಬ ವಾರ್ತೆಯನ್ನು ಅವನಿಗೆ ತಿಳಿಸಿ ಯಾವುದಾದರೊಂದು ನೆವನದಿಂದ ಆ ಬಾಲಕರನ್ನು ಕರೆಸಬೇಕೆಂದು ಹೇಳುವುದು. ಕಂಸನು ವಸುದೇವ-ದೇವಕಿಯರನ್ನು ಮತ್ತೆ ಸೆರೆಮನೆಯಲ್ಲಿಡುವುದು. ಕೇಶಿಯೆಂಬ ರಾಕ್ಷಸನನ್ನು ಕರೆದು ಕೃಷ್ಣನನ್ನು ಕೊಲ್ಲಲು ಸೂಚಿಸುವುದು. ಆಸ್ತಿ-ಪ್ರಾಸ್ತಿಯರೆಂಬ ಕಂಸನ ಮಡದಿಯರು ಕಂಸನಿಗೆ ಬುದ್ಧಿಮಾತನ್ನು ಹೇಳುವುದು. ಬಿಲ್ಲಹಬ್ಬದ ನೆವನದಿಂದ ಕೃಷ್ಣ-ಬಲರಾಮರನ್ನು ಮಥುರೆಗೆ ಕರೆತರುವುದಕ್ಕಾಗಿ ಅಕ್ರೂರನನ್ನು ಕಳುಹಿಸುವುದು. ನಾರದರು ಬಂದು ಕೃಷ್ಣನಿಗೆ ಕಂಸನ ಕಾರಸ್ಥಾನವನ್ನು ಹೇಳಿ ಹೋಗುವುದು. ಕೇಶಿಯ ಸಂಹಾರ.

ಮಥುರೆಗೆ ಅಕ್ರೂರನ ಆಗಮನ. ಬಂದ ಉದ್ದೇಶವನ್ನು ತಿಳಿಸುವುದು. ಕೃಷ್ಣ-ಬಲರಾಮರು ನಂದಗೋಪನೊಡನೆ ತಾವು ಮಥುರೆಗೆ ಹೋಗುವ ಸಂಗತಿಯನ್ನು ತಿಳಿಸುವುದು. ಅದಕ್ಕೆ ಸಮ್ಮತಿಸದ ತಂದೆಯನ್ನು ಒಪ್ಪಿಸಿ ಹೊರಡುವುದು. ಹೋಗಬಾರದೆಂದು ತಡೆದ ಗೋಪಿಕಾಂಗನೆಯರು ಮತ್ತು ಯಶೋದೆ-ರೋಹಿಣಿಯರನ್ನು ಸಮಾಧಾನಿಸುವುದು. ದಾರಿಯಲ್ಲಿ ಅಕ್ರೂರನು ಸ್ನಾನಕ್ಕೆಂದು ಕಾಳಿಂದೀನದಿಯಲ್ಲಿ ಮುಳುಗಿದಾಗ ಅವನಿಗೆ ದಿವ್ಯರೂಪವನು ತೋರುವುದು. ಭಕ್ತಿಸ್ತೋತ್ರವನ್ನು ಮಾಡಿದ ಅಕ್ರೂರನಿಗೆ ಅನುಗ್ರಹ, ಕಂಸನ ನಿಗ್ರಹಾನಂತರ ಮನೆಗೆ ಬರುತ್ತೇವೆಂದು ವಚನವೀಯುವುದು. ಕಂಸನಲ್ಲಿಗೆ ಬಂದ ಅಕ್ರೂರನು ಕೃಷ್ಣ-ಬಲರಾಮರನ್ನು ಕರೆತಂದೆನೆಂದು ಹೇಳುವುದು.

ಸಂಜೆಯ ವೇಳೆಯಲ್ಲಿ ಕೃಷ್ಣ-ಬಲರಾಮರು ಮಥುರಾನಗರವೀಕ್ಷಣೆಗಾಗಿ ರಾಜಬೀದಿಯಲ್ಲಿ ಬರುವುದು. ರಾಜರಜಕನಿಂದ ಬಟ್ಟೆಯನ್ನು ಸೆಳೆದುಕೊಳ್ಳುವುದು. ಸುಧಾಮನೆಂಬ ಮಾಲೆಗಾರನನ್ನು ಅನುಗ್ರಹಿಸುವುದು. ಕುಬ್ಜೆಯು ನೀಡಿದ ಗಂಧವನ್ನು ಸ್ವೀಕರಿಸಿ ಅವಳ ವಕ್ರತೆಯನ್ನು ಪರಿಹರಿಸುವುದು. ಶಸ್ತ್ರಾಗಾರಕ್ಕೆ ಬಂದು ಅಲ್ಲಿರುವ ಬಿಲ್ಲನ್ನು ಮುರಿಯುವುದು.

ಈ ಸುದ್ದಿಯನ್ನು ಕೇಳಿದ ಕಂಸಾಸುರನು ಕಳುಹಿಸಿದ ಮಲ್ಲಭಟರನ್ನು ಕೃಷ್ಣ–ಬಲರಾಮರು ಸದೆಯುವುದು. ಇದನ್ನರಿತ ಕಂಸನು ರಾತ್ರಿ ನಿದ್ದೆಬಾರದೆ ಪರಿತಪಿಸುವುದು. ಮರುದಿನ ಕುವಲಯಾಪೀಡವೆಂಬ ಆನೆಯನ್ನು ಮುರಿದು ಕೃಷ್ಣ–ಬಲರಾಮರ ಆಗಮನ. ಚಾಣೂರ–ಮುಷ್ಟಿಕರೆಂಬ ಜಟ್ಟಿಗಳೊಂದಿಗೆ ಕಾದಾಡಿ ಕೊಲ್ಲುವುದು. ಕಂಸನೊಂದಿಗೆ ಮುಷ್ಟಿಯುದ್ಧ, ಅವನ ಮರಣ. ದುಃಖಿಸಿದ ಆಸ್ತಿ–ಪ್ರಾಸ್ತಿಯರನ್ನು ಸಂತೈಸಿ ಕಾದಲು ಬಂದ ಕಂಸನ ಸಹೋದರರ ವಧೆ. ವಸುದೇವ–ದೇವಕಿಯರಿಗೆ ಬಂಧನದಿಂದ ವಿಮುಕ್ತಿ. ಉಗ್ರಸೇನನಿಗೆ ಪಟ್ಟಾಭಿಷೇಕ. ಗಾರ್ಗ್ಯಮುನಿಗಳಿಂದ ಕೃಷ್ಣ–ಬಲರಾಮರಿಗೆ ಉಪನಯನ. ವಿದ್ಯಾಭ್ಯಾಸಕ್ಕಾಗಿ ಸಾಂದೀಪನೀ ಮುನಿಗಳ ಆಶ್ರಮಕ್ಕೆ ಪ್ರಯಾಣ. ಮಂಗಲ.

* * * * *

ಪಾತ್ರಗಳು

1. ಶ್ರೀಕೃಷ್ಣ
2. ಬಲರಾಮ
3. ಕಂಸ
4. ನಾರದ
5. ವಸುದೇವ
6. ದೇವಕಿ
7. ಕೇಶಿ
8. ಆಸ್ತಿ–ಪ್ರಾಸ್ತಿಯರು
9. ಅಕ್ರೂರ
10. ನಂದಗೋಪ
11. ರಜಕ
12. ಸುದಾಮ
13. ಕುಬ್ಜೆ
14. ಉಗ್ರಸೇನ
15. ಗಾರ್ಗ್ಯ
16. ಚಾಣೂರ–ಮುಷ್ಟಿಕರು
17. ನ್ಯಗ್ರೋಧಾದಿಗಳು
18. ಗೋಪಸ್ತ್ರೀಯರು
19. ರೋಹಿಣಿ–ಯಶೋದೆಯರು
20. ಪುರಸ್ತ್ರೀಯರು
21. ಜಟ್ಟಿಗಳು
22. ಚಾರರು
23. ಮಾವುತ

* * * * *

॥ ಶ್ರೀ ಗಣೇಶಾಯ ನಮಃ ॥
[ಶ್ರೀಮದ್ಭಾಗವತದೊಳಗಣ ಯಕ್ಷಗಾನ ಬಿಲ್ಲಹಬ್ಬ-ಕಂಸವಧೆ]

॥ ಶಾರ್ದೂಲವಿಕ್ರೀಡಿತ ವೃತ್ತ ॥

ಶ್ರೀಲಕ್ಷ್ಮೀವದನಾರವಿಂದ ಮಧುಪಂ ಶೀತಾಂಶುಶೋಭಾಕರಂ ।
ನೀಲಾಭ್ರಾಂಗಮುದಾರ ಕೌಸ್ತುಭಧರಂ ನೀಳಾದ್ಭವೇಶಧ್ವಜಂ ।
ನಾಳೀಕಾಸನಮುಖ್ಯ ದೇವವಿನುತಂ ನಾನಾರ್ಥವಿದ್ಯಾಪ್ರದಂ ।
ಲೀಲಾನಾಟಕಸೂತ್ರಧಾರಿ ಪೊರೆಗೆಮ್ಮಂ ಪುಣ್ಯಕಾರುಣ್ಯದಿಂ ॥ 1 ॥

॥ ನಾಟಿ – ಝಂಪೆ ॥

ಜಯ ಜಯತು ರುಗ್ಮಿಣೀನಾಥ ಗರುಡವರೂಥ ।
ಜಯ ಜಯತು ದೈತ್ಯಗಜಗಂಡಭೇರುಂಡ ॥ ಪ ॥

ವಿಮಲ ಪದ್ಮಪಲಾಶನೇತ್ರ ಪರಮಪವಿತ್ರ ।
ದ್ಯುಮಣಿಶತಕೋಟಿ ಸಂಕಾಶ ಗತದೋಷ ॥
ನಮಿತಜನಪರಿಪಾಲ ಸಾಮಗಾನವಿಲೋಲ ।
ಸುಮಶರಾಂತಕಮಿತ್ರ ಘೋರ ಭವದೂರ ॥ 2 ॥

ಮಕರಕುಂಡಲ ಭೂಷ ಮಾಧುರ್ಯತರಭಾಷ ।
ಶಕಟದಾನವಭಂಗ ಶ್ಯಾಮಳ ಘನಾಂಗ ॥
ಸಕಲ ಜಗದಾಧಾರ ಸಿಂಧುಸಮ ಗಂಭೀರ ।
ಮುಕುರಸಮ ಸುಕಪೋಲ ವರಪೀತ ಚೇಲ ॥ 3 ॥

ಅರಿಶಂಖಕಲಿತಕರ ನೀಲಾಳಿನಿಭಚಿಕುರ ।
ಸುರನಿಕರ ನುತಿಪಾತ್ರ ಪಾವನಚರಿತ್ರ ॥
ದರಹಸಿತ ಶುಭವದನ ಕುಂದಕುಟ್ಮಳ ರದನ ।
ತರುಣಪಲ್ಲವಚರಣ ಕೌಸ್ತುಭಾಭರಣ ॥ 4 ॥

॥ ಸೌರಾಷ್ಟ್ರ – ಅಷ್ಟ ॥

ನಂಬಿದೆ ನಿನ್ನಯ ಸಿರಿಪಾದ ಸೀಮೆಯ । ಶ್ರೀ ಗಣೇಶ ॥ ವಿ ।
ಜ್ಞಾನಾಂಬುಧಿ ಘಟಜಾತ ಸುರ ಗಣಸೇವಿತ । ಶ್ರೀ ಗಣೇಶ ॥
ಇಂಬಾಗಿ ಮತಿಯಿತ್ತು ಪರಮ ಸಂತಸವೆತ್ತು । ಶ್ರೀ ಗಣೇಶ । ಎನ್ನ ।
ಬೆಂಬಿಡದೆ ಕಾವ ಭಾರ ನಿನ್ನದು ದೇವ । ಶ್ರೀ ಗಣೇಶ ॥ 5 ॥

॥ ವಾರ್ಧಕ ॥

ಕರಿವದನ ಶರಜನ್ಮತಾತನಂ ಖ್ಯಾತನಂ ।
ತರಣಿಶತಭಾಸುರ ಶರೀರನಂ ಧೀರನಂ ।
ದುರಿತಕುಲಶೈಲಸುತ್ರಾಮನಂ ಭೀಮನಂ ರುದ್ರನಂ ಗಂಗಾರ್ದ್ರನಂ ॥
ಸುರಸೇವ್ಯನಂ ಜಗತ್ಸರ್ವನಂ ಶರ್ವನಂ ।
ಪುರಮಥನನಂ ಕ್ರತುಧ್ವಂಸನಂ ಹಂಸನಂ ।
ಕರುಣಾಬ್ಧಿ ಶ್ರೀಲೋಕನಾಥನಂ ದಾತನೆಂದೆರಗಿ ಮತಿಯಂ ಪಡೆವೆನು ॥ 6 ॥

॥ ಭಾಮಿನಿ ॥

ಎಸಳುಗಂಗಳ ಜಗವ ಮೋಹಿಪ ।
ನಸುನಗೆಯ ಬಂಧುರದ ಮಿರುಗುವ ।
ದಶನಪಂಕ್ತಿಯ ಲಲಿತ ಚಂಪಕ ಕುಸುಮ ನಾಸಿಕದ ॥
ನೊಸಲ ತಿಲಕದ ರತ್ನಕುಂಡಲ ।
ವೆಸೆವ ಕದಪಿನ ಶೃಂಗರದಿ ರಾ ।
ಜಿಸುವ ಮುಖಮಂಡಲದ ಪಾರ್ವತಿ ಕೊಡುಗೆ ಸನ್ಮತಿಯ ॥ 7 ॥

॥ ಕಂದಪದ್ಯ ॥

ಇಂದಿರೆ ಶಾರದೆಯರಿಗಂ ।
ವಂದಿಸಿ ನಾಲ್ಮೊಗನಿಗೆರಗಿ ಗುರುಪದಯುಗಮಂ ॥
ಚೆಂದದಿ ಕೀರ್ತಿಸಿ ಕವಿಗಳ ।
ಸಂದಣಿಗಾಂ ಮಣಿದು ಪೇಳ್ವೆನೀ ಸತ್ಕೃತಿಯಂ ॥ 8 ॥

॥ **ದ್ವಿಪದಿ** ॥

ವ್ಯಾಸ ಶುಕಮುನಿಗಳಿಗೆ ವಂದನೆಯ ಮಾಡಿ ।
ವಾಸವಾದ್ಯಮರರನೆ ಮುದದಿ ಕೊಂಡಾಡಿ ॥ 9 ॥

ಭಾಗವತ ಪೌರಾಣದೊಳಗೆ ಮಾಧವನು ।
ಸಾಗರಾಂಬರೆಗಾದ ಬಹಳ ಭಾರವನು ॥ 10 ॥

ಕಳೆಯಲೋಸುಗ ಖೂಳ ಕಂಸನನೆ ಕುಟ್ಟಿ ।
ಬಳಿಕುಗ್ರಸೇನನಿಗೆ ಪಟ್ಟವನೆ ಕಟ್ಟಿ ॥ 11 ॥

ಕಡು ಸೆರೆಯೊಳಿರ್ಪ ದೇವಕಿ ಶೌರಿಯರನು ।
ಬಿಡಿಸಿ ಸುಜನರ ಕಾಯ್ದ ಪುಣ್ಯಕಥನವನು ॥ 12 ॥

ವಿರಚಿಸುವೆ ತಿಳಿದಂತೆ ಯಕ್ಷಗಾನದಲಿ ।
ವರಲೋಕನಾಥನ ಕೃಪಾಕಟಾಕ್ಷದಲಿ ॥ 13 ॥

ಬಲ್ಲ ಭಾವಜ್ಞರಿದರೊಳಗೆ ತಪ್ಪಿರಲು ।
ಸೊಲ್ಲನುರೆ ತಿದ್ದಿ ಮೆರೆಸುವುದು ಬಲ್ಲಿದರು ॥ 14 ॥

॥ **ವಚನ** ॥

ಈ ಪ್ರಕಾರದಿಂ ಗುರುದೇವತಾ ಪ್ರಾರ್ಥನೆಯಂ ಮಾಡಿ
ತತ್ಕಥಾಕೌತುಕಮುಂ ಪೇಳ್ವೆನದೆಂತೆನೆ ॥ 15 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಸೋಮಕುಲ ಸಂಭೂತನಾಗಿಹ ।
ಭೂಮಿಪಾಲಾಗ್ರಣಿ ಪರೀಕ್ಷಿತ ।
ಗಾ ಮಹಾ ಶುಕಯೋಗಿವರ್ಯನು ।
ಪ್ರೇಮದಿಂದ ॥ 16 ॥

ಭಾಗವತವನು ಪೇಳುತಿರೆ ತಲೆ ।
ವಾಗಿ ಮುನಿಪನ ಕೇಳ್ದನರಸನು ।
ನಾಗಶಯನನು ಗೋಕುಲದೊಳಿರ ।
ಲಾಗಿ ಬಳಿಕ ॥ 17 ॥

ಮುಂದೆ ಕೇಶಿಯ ಸದೆದನೆಂತಾ ।
ಗಾಂಧಿನೀಸುತನೊಡನೆ ಮಧುರೆಗೆ ।
ಬಂದು ಕಂಸಾದ್ಯಖಿಳ ದುಷ್ಟರ ।
ಕೊಂದನೆಂತು ॥ 18 ॥

ಉಗ್ರಸೇನಗೆ ಪಟ್ಟಕಟ್ಟಿಸ ।
ಮಗ್ರರನು ಪೊರೆದಂಥ ಕಥನವ ।
ನುಗ್ರಹಿಸಬೇಕೆಂದು ನಮಿಸಲು
ಶೀಘ್ರದಿದ ॥ 19 ॥

ಎತ್ತಿ ಭೂಪನ ತಲೆದಡವಿ ಮುನಿ ।
ಚಿತ್ತದಲಿ ಕೇಶವನ ನೆನೆಯುತ ।
ಉತ್ತಮೋತ್ತಮ ಕಥೆಯ ತೊಡಗಿದ ।
ವಿಸ್ತರದೊಳು ॥ 20 ॥

॥ ವಾರ್ಧಕ ॥

ಲಾಲಿಸೈ ನೃಪ ಪುಣ್ಯಕಥನಮಂ ಶ್ರೀಧವಂ ।
ಖೂಳಜನರಿಂ ಬಾಧೆಯಂ ಧರೆಯ ದೂರುಮಂ ।
ನಾಲಿಸುತ ದೇವಕಿಯಲುದಿಸಿ ಶೌರಿಯ ಮುಖದಿ ನಂದಗೋಕುಲಕೆ ಬಂದು ॥
ಬಾಲಲೀಲೆಯೊಳು ಪೂತನಿ ಶಕಟರಂ ಕೊಂದು ।
ಗಾಳಿಯಾಕೃತಿವೆತ್ತು ಬಂದವನ ಸದೆಬಡಿದು ।
ಮೇಲೆ ಬಕ ವತ್ಸ ಧೇನುಕ ಮುಖ್ಯರಂ ಮುರಿದು ಕಾಳಿಯನೆ ಕಡಲಿಗಟ್ಟಿ ॥ 21 ॥

ಮತ್ತೆ ಚರಿತವ್ರತೆಯರಾಗಿರ್ಪ ಗೋಪಿಯರ ।
ವಸ್ತ್ರಮಂ ಕೊಂಡು ಮರನೇರಲ್ಕೆ ಬಂದು ನಾ ।
ಚುತ್ತ ದೇವರ್ಕಳಿಗೆ ಪೊಡಮಡಲು ಬಳಿಕದರನಿತ್ತು ಸುರಪಂ ಹರುಷಿಸೆ ॥
ಹೊತ್ತ ಗೋವರ್ಧನಾದ್ರಿಯ ಗೋಕುಲವ ಕಾಯ್ದು ।
ಛುತ್ತಿರುವ ನಾರಿಯರ ಮನದಿಷ್ಟಮಂ ಸಲಿಸಿ ।
ಎತ್ತಿನಾಕೃತಿ ದೈತ್ಯನಂ ಮಡುಹಿ ನಿಜಭಕ್ತರಂ ಸಲಹುತಿರುತಿರ್ದನು ॥ 22 ॥

॥ ಭೈರವಿ – ಝಂಪೆ ॥

ಧರಣಿಪತಿ ಕೇಳು ಮುರ । ಹರನಿಂತು ಗೋಕುಲದಿ ।
ಪರಮಸಂತೋಷದಿಂ । ದಿರಲು ಬಲಸಹಿತ ॥ 23 ॥

ಇತ್ತ ಮಧುರೆಯಲಿ ದು । ರ್ವೃತ್ತ ಕಂಸನು ಖಳರ ।
ಮೊತ್ತಕಧಿಪತಿಯೆನಿಸಿ । ಯತ್ಯಧಿಕ ಬಲದಿ ॥ 24 ॥

ದುರ್ಜನರಿಗುಪಕಾರಿ । ಸಜ್ಜನರಿಗುರೆ ಮಾರಿ ।
ದುರ್ಜೀವಿಯೆಂದೆನಿಸಿ । ಪಜ್ಜಳಿಸುತಿರ್ದ ॥ 25 ॥

॥ ಕಂದಪದ್ಯ ॥

ಈ ಪರಿಯಿಂದಂ ಕಂಸ ಧ ।
ರಾಪಾಲಂ ರಂಜಿಸುತ್ತಮಿರಲೊಂದು ದಿನಂ ॥
ಶ್ರೀಪತಿ ಭಕ್ತಶಿರೋಮಣಿ ।
ತಾಪಸ ವರ ನಾರದಾಂಕ [ತಾ]ನೈತಂದಂ ॥ 26 ॥

॥ ತೋಡಿ – ರೂಪಕ ॥

ಹರಿ ನಾರಾಯಣನೆಂದು ವೀಣೆಯೊಳ್ನುಡಿಸುತ್ತಾ ।
ದರದಿ ವಾಕ್ಕಿನೊಳು ಕೀರ್ತಿಸುತ ॥
ತರಣಿಯಂದದಿ ಬೆಳಬೆಳಗುತ್ತ ನಾರದ ।
ಸುರಲೋಕದಿಂದಲೈತಂದ ॥ 27 ॥

॥ ಭೈರವಿ – ಅಷ್ಟ ॥

ಸುರಮುನಿ ಬರಲು ಕಂಡು । ಭೋರನೆ ಭೋಜ ।
ಧರಣಿಪನಿದಿರುಗೊಂಡು ॥
ಕರೆತಂದು ಶೀಘ್ರದಿ ರಾಜಿಪ ಸಿಂಹವಿ ।
ಷ್ಟರದಿ ಕುಳ್ಳಿರಿಸಿಕೊಂಡು ॥ 28 ॥

ಚಾರುಪಾದವ ತೊಳೆದು । ಪೂಜಿಸಿ ವಂ ।
ದಾರುವಾಗಿಹನ ಕಂಡು ॥
ನಾರದ ಮುನಿಪನು ಪಿಡಿದೆತ್ತಿ ಕೇಳ್ದನಾ ।
ಧಾರಿಣೀಪತಿಯೊಳಂದು ॥ 29 ॥

ಮೊಗವೇಕೆ ಬಾಡಿತಯ್ಯಾ । ಮುನ್ನಿನ ಸಿರಿ ।
ಯೊಗದು ನೋಡಿದರೆ ಜಯ ॥
ಪೊಗದೇತಕೆನೆ ಕೇಳಿ ದುಗುಡದಿ ಕಂಸನು ।
ಮುಗಿದು ಪೇಳಿದನು ಕೈಯ ॥ 30 ॥

॥ ಪಂತುವರಾಳಿ – ಪಂಚಘಾತ ಮಟ್ಟೆ ॥

ಏನ ಪೇಳ್ವೆನಿನ್ನು ಮುನಿವರ ।
ಮಾನಹಾನಿಯಾಯ್ತು ಬಹಳ ।
ದೀನನಾದೆ ಗತಿಯ ಕಾಣೆ ॥ ಪ ॥

ತಂಗಿಗೊಂದು ಬಾಲೆಯುದಿಸೆ ।
ಹಿಂಗದದರ ಕೊಲಲು ನಾ ।
ನಂಗವಿಸಲು ಹಾರಿ ನಾ ।
ಕಾಂಗಣದಲಿ ಪೇಳ್ದಳೆಲವೊ ।
ಭಂಗಿಸುವವ ಬೆಳೆವ ಕ್ಷಿತಿಯಲಿ ॥ ಸುಮ್ಮನೇಕೆ ।
ಭಂಗಬಡುವೆಯೆನುತ ನುಡಿಯಲು ॥ ಕೇಳ್ದು ನಾ ।
ಕಂಗೆಟ್ಟು ಕಂದಿ ಕುಂದಿ ।
ಯಂಗ ಹೀನನಾದೆನಲ್ಲಾ ॥ 31 ॥

ಆದರೇನೆನುತ ಮಾತ ।
ನಾಡಿ ದೈತ್ಯನಿವಹವನ್ನು ।
ಮೇದಿನಿಯೊಳಗರಸಲ್ಪಟ್ಟೆ ।
ಹೋದರತ್ತ ಬಂದುದಿಲ್ಲ ।
ಭೇದವರಿಯೆನಿದರ ಪರಿಯನು ॥ ಮುಂದುಗಾಣೆ ।
ಹಾದಿಯನ್ನು ಮಾಳ್ಪೆನೇನನು । ನೀವು ತಿಳಿದ ।
ಡಾದರಿಸುವುದೆನಗೆ ವೈರಿ ।
ಯಾದ ಜನವ ತಿಳಿವುದಕ್ಕೆ ॥ 32 ॥

॥ ಕೇದಾರಗೌಳ – ಅಷ್ಟ ॥

ಮುನಿ ಮನಮುಟ್ಟದ । ಚಿನುಮಯನಿಂಥ ದು ।
ಷ್ಟನಿಗೆ ಸಿಕ್ಕುವನೆಯೆಂದು ॥

ನೆನೆದು ಚಿತ್ತದಿ ಗಹಗಹಿಸುತ್ತಲಾ ಜನ ।
ಪನಿಗೆ ನಾರದನೆಂದನು ॥ 33 ॥

ಎಲೆ ಕಂಸ ನಿನಗೆಣೆಯಾಗುವ ವೀರರ ।
ನಿಳೆಯೊಳು ಕಾಣೆನಾರು ॥
ತಿಳಿದುದೊಂದುಸುರುವೆ ನಂದಗೋಕುಲದಲ್ಲಿ ।
ಬೆಳೆವುತ್ತಲಿಹರಿರ್ವರು ॥ 34 ॥

ರಾಮಕೃಷ್ಣಾಖ್ಯರು ರೂಪದಿ ಚೆಲುವರು ।
ಭೀಮ ಪರಾಕ್ರಮರು ॥
ಭೂಮಿಪ ಕೇಳು ನಿನ್ನವರ ಕೊಂದವರು ನಿ ।
ಸ್ಸೀಮ ಬಾಲಕರವರು ॥ 35 ॥

ನರನಲ್ಲವೆಂದರಿ ಹರಿನಾರಾಯಣ ತಾನೆ ।
ಧರಣಿಯ ಭಾರವನು ॥
ಪರಿಹರಿಸಲು ಕೃಷ್ಣ ನಾಮದಿ ಶೌರಿಗೆ ।
ವರಪುತ್ರನಾದ ತಾನು ॥ 36 ॥

ಪುಂಡರೀಕಾಕ್ಷನ ವಸುದೇವನಿಲ್ಲಿಂದ ।
ಕೊಂಡೊಯ್ದಿಟ್ಟನಲ್ಲಿ ॥
ಚಂಡಿಕೆ ನಂದನಿಗುದಿಸಿರೆ ತಂದಕೇ ।
ಳಂಡಲೆಯುತ್ತಲಿಲ್ಲಿ ॥ 37 ॥

ಎಚ್ಚರಿತಿರು ಯಾದವರು ನಿನ್ನವರೆಂದು ।
ನೆಚ್ಚದಿರವದಿರನು ॥
ಹೆಚ್ಚು ಮಾತೇನು ಬಾಂಧವರೆಲ್ಲ ವೈರಿಗ ।
ಳುಚ್ಚರಿಸಿದೆನೆಂದನು ॥ 38 ॥

॥ **ಭಾಮಿನಿ** ॥

ನುಡಿದ ಮಾತನು ಕೇಳುತಾ ಖಳ ।
ನೊಡಲು ಕಂಪಿಸೆ ರೋಷದಲಿ ನಡು ।
ನಡುಗೆ ದೇಹವು ಕಂಗಳಲಿ ಕೆಂಗಿಡಿಯು ಹೊರಸೂಸೆ ॥

ಪೊಡವಿ ಕುಸಿವಂದದಲಿ ಗರ್ಜಿಸಿ ।
ತುಡುಕಿ ಖಡುಗವ ಪ್ರಳಯಕಾಲದ ।
ಮೃಡನ ತೆರದಲಿ ರೌದ್ರವನು ಮಿಗೆ ತಾಳುತಿಂತೆಂದ ॥ 39 ॥

॥ **ಭೈರವಿ – ಏಕ** ॥

ಕರೆಯಿರೊ ವಸುದೇವನನು । ಚೋ ।
ರರ ಗುರುವನು ಧೂರ್ತನನು ॥
ಅರಿಗಳ ಬೇರಿಟ್ಟಿಹನೆ । ಶಿರ ।
ವರಿವೆನು ಮೊದಲಾತನನೆ ॥ 40 ॥

ಹರಿಯೇ ತಡೆದರು ಬಿಡೆನು । ಪುರ ।
ಹರ ಪೇಳಲು ಮೈಗೊಡೆನು ॥
ಮರುಳಾಟವ ನಿಲಿಸುವೆನು । ಎಂ ।
ದೊರೆವುತಲಾ ಶೌರಿಯನು ॥ 41 ॥

ಕಡಿವೆನೆನುತ ಕೂರಸಿಯ । ಝಡಿ ।
ದೆಡಗೈಯ್ಯಲಿ ಮುಂದಲೆಯ ॥
ಪಿಡಿದಿಹ ಕಂಸನಿಗಾಗ । ಮುನಿ ।
ನುಡಿದನು ಕಂಡತಿ ಬೇಗ ॥ 42 ॥

॥ **ಶಂಕರಾಭರಣ – ಅಷ್ಟ** ॥

ಅಕ್ಕಟೇನ್ನೈ ಕಂಸಭೂಪ । ಮಿಕ್ಕುಮೀರುವಂಥ ಕೋಪ ।
ಸಿಕ್ಕುವರೇನಿವನ ಕೊಲಲಾ । ಮಕ್ಕಳಿರ್ವರು ॥
ಸೊಕ್ಕಿದ ಹಾವಗಿಯಲದರ । ಕುಕ್ಕಿ ಕೊಲಲು ವಿಷ ಮಾಣುವುದೆ ।
ತಕ್ಕೌಷಧವ ಮಾಡದನಕ । ಚೊಕ್ಕಟವಲ್ಲೈ ॥ 43 ॥

ಕುಂದು ಹೆಚ್ಚು ನೋಡದಳಿ । ಯಂದಿರನು ಒಂದು ನೆವನ ।
ದಿಂದ ನಿನ್ನ ಪುರಕೆ ಕರೆಸಿ । ಬಂದುದ ನೋಡೈ ॥
ಬಂಧುವರ್ಗವೆಂದು ಮನದಿ । ಸಂದೇಹವಿರ್ದರೆ ನೀನು ।
ಗಂಧರ್ವನಿಗೆ ಜನಿಸಿದಾತ । ನೆಂದ ಮುನಿರಾಯ ॥ 44 ॥

ಮತ್ತೆ ದ್ರವಿಣಗಾದೆ ನೀನೆಂ । ಬುತ್ತುಮವಾಗಿರ್ಪ ಕಥೆಯ ।
ಬಿತ್ತರಿಸಿ ಕಲಹವನ್ನು । ಬಿತ್ತಿ ಶೌರಿಗೆ ॥
ಎತ್ತಿದಸಿಯನಿಳುಹಲು ಕಾ । ಣುತ್ತ ಮುನಿಪ ಹರುಷವೆತ್ತು ।
ಸತ್ಯಲೋಕಕಾಗಿ ಹರಿಯೆ । ನ್ನುತ್ತಲೈದಿದ ॥ 45 ॥

॥ **ವಾರ್ಧಕ** ॥

ಧರಣಿಪಾಲಕ ಕೇಳು ನಾರದಮುನೀಶ್ವರಂ ।
ತೆರಳಲಾ ಕಂಸ ಬಳಿಕತ್ಯುಗ್ರ ಕೋಪದಿಂ ।
ಜರೆದು ಬಹುಪರಿಯಿಂದ ಶೌರಿ ದೇವಕಿಯರನು ಸೆರೆಮನೆಯೊಳಂ ಬಂಧಿಸೆ ॥
ಕರಗಿ ಕಣ್ಣೀರಿಂದ ಮೈನೆನೆದು ನೆನೆನೆನೆದು ।
ಮರುಗಿ ಬಸವಳಿದು ಬಾಯ್ಬಿಡುತಿರ್ಪ ದೇವಕಿಯ ।
ತೆರನ ಕಂಡಾಗ ವಸುದೇವ ಕಂಬನಿದೊಡೆದು ತರಳೆಯೊಡನಿಂತೆಂದನು ॥46॥

॥ **ರೇಗುಪ್ತಿ - ಅಷ್ಟ** ॥

ಯಾಕಳಲುವೆ ಭಾಮಿನಿ । ದುಃಖಿಪುದು ವಿ ।
ವೇಕವದಲ್ಲಿದು ಕಾಮಿನಿ ॥
ಲೋಕವೆಲ್ಲವು ದೈವಾಧೀನವಾಗಿರ ।
ಲೀ ಖೂಳನಿಂದಲೇನಹುದೆಂಬುದರಿಯದೆ ॥ ಪ ॥

ವ್ಯಾಳವಕ್ತ್ರದೊಳಿರುವ । ಭೇಕಿಯು ದಂಶ ।
ಕಾಳೋಚಿಸುವಂತೆ ॥
ಕಾಲಾಧೀನವಾಗಿರ್ಪ ಲೋಕವು ।
ಖೂಳವೃತ್ತಿಯ ಗೈದರುಳಿವುದೇನೆಲೆ ಕಾಂತೆ ॥ 47 ॥

ನಾರಿ ಕೇಳ್ ಸುಖದಂತ್ಯದಿ । ದುಃಖವು ದುಃಖ ।
ತೀರಲು ಸುಖಿಪಾಂತ್ಯದಿ ॥
ಹಾರೈಸಿರುವುದು ಹಗಲಿರುಳಂದದಿ ।
ಮೀರಲಪ್ಪುದೆ ಜಗದೀಶ್ವರನಾಜ್ಞೆಯ ॥ 48 ॥

ಭೂಭಾರ ಹರಣಕಾಗಿ । ಪ್ರಾರ್ಥಿಸಲಾಗಿ ।
ನಾಭಿಜನ್ಮನು ತಾನಾಗಿ ॥

ಈ ಭುವನದಿ ಹರಿಯುದಿಸಿರೆ ಸುಜನರ ।
ಕ್ಷೋಭಿಪ ದುಷ್ಟರ ಮಥಿಸದಿರ್ದಪನೇನೆ ॥ 49 ॥

॥ ಭಾಮಿನಿ ॥

ಅರಸಕೇಳೈ ಹರಿಯ ನೆನೆವರ ।
ಬೆರೆಸದದು ಸಂಸಾರಬಂಧವೆ ।
ಬರಿಯ ಬಂಧನದಿಂದಲೇನಹುದೆಂಬುದನು ಪತಿಯ ॥
ಕರುಣದಲಿ ತಿಳಿದಬಲೆ ಸುಖಿಯಾ ।
ಗಿರಲು ಕಂಸ ನೃಪಾಲನಿತ್ತಲು ।
ದುರುಳ ಕೇಶಿಯ ಕರೆದು ಪೇಳ್ದನು ರಾಜಕಾರಿಯವ ॥ 50 ॥

॥ ಮಾರವಿ – ಏಕ ॥

ಕೇಶಿ ಕೇಳಿದೆನೈ ಗೋಕುಲದಲಿ ಬಲ ।
ಕೇಶವರಿಹರಂತೆ ॥
ದ್ವೇಷಿಗಳವರನು ಕೊಂದು ಬಾರೆಂದೆನೆ ।
ರೋಷದೊಳವನೆಂದನು ॥ 51 ॥

ಬರಿದೇಕೆ ಕಳುಹುವೆ ಕರುವಳರೆಡೆಗೆನ್ನ ।
ಪರಮ ಬಲಾಢ್ಯನನು ॥
ಸರಿಯೇ ನನಗಾ ತರಳರೆಂದೆನೆ ಕೇಳಿ ।
ಧರಣಿಪನಿಂತೆಂದ ॥ 52 ॥

ಬಲ್ಲೆ ಬಲಾಢ್ಯ ನೀನೆಂಬುದ ನಿನ ।
ಗಿಲ್ಲೆಣೆ ಭುವನದೊಳು ॥
ಖುಲ್ಲರ ಯಮನೂರಿಗೆ ಕಳುಹಿಸಿ ಬಾ ।
ನಿಲ್ಲದೆ ಶೀಘ್ರದೊಳು ॥ 53 ॥

ಎಂದಾ ಕೇಶಿಯ ಕಳುಹಿಸಿ ಗೋಕುಲ ।
ಕಂದು ಕಂಸ ನೃಪನು ॥
ಬಂದೋಲಗಗೊಟ್ಟೆಲ್ಲಾ ಭಟರಿಗೆ ।
ಚೆಂದದೊಳುಸುರಿದನು ॥ 54 ॥

॥ **ಕಾಂಭೋದಿ – ಅಷ್ಟ** ॥

ಕೇಳಿರೈ ಚಾಣೂರ ಮುಷ್ಟಿಕಾದ್ಯಖಿಳ ಸುಭ ।
ಟಾಳಿ ನಾ ಪೇಳುವೀ ಮಾತ ॥
ಆಳುಗಳ ಕೊಂದೀರ್ಪ ಬಾಲಕರನಿಂದಿನಲಿ ।
ಪೇಳಿದನು ದೇವ ಮುನಿನಾಥ ॥ 55 ॥

ಗೋಕುಲದೊಳಿರುವಂಥಾ ಕುಮತಿಗಳೆ ದೇವ ।
ಕೀ ಕುವರರೆಂಬುದನೆ ಕೇಳಿ ॥
ನಾ ಕಳುಹಿದೆನು ಕೇಶಿ ಸಾಕವರಿಗೆಂದು ಮ ।
ತ್ತಾ ಖಳನೊಳಾಗದಿರೆ ಮೇಲೆ ॥ 56 ॥

ಇಲ್ಲಿ ಕರೆಸುವೆ ನೀವು ಕೊಲ್ಲುವುದು ಕುಲವೆಂದು ।
ತಲ್ಲಣವು ಬೇಡವದರಿಂದ ॥
ಮಲ್ಲ ಕೇಳ್ ಗಂಧರ್ವರಲ್ಲಿ ಪುಟ್ಟಿದೆನು ತಾ ।
ನಿಲ್ಲಿ ಪಾತಕವು ನಿಮಗೆಂದ ॥ 57 ॥

ಇಕ್ಕಿ ರಂಗದ ಬಳಿ ಯೊಳಿಕ್ಕೆಲದಿ ಮಂಚವನು ।
ಮಿಕ್ಕ ನೋಟಕರು ಕುಳ್ಳಿರಲಿ ॥
ಕಕ್ಕುಲಿತೆ ಬೇಡವಾ ಮಕ್ಕಳನು ಕೊಲುವುದಕೆ ।
ತಕ್ಕುಪಾಯವ ಮಾಳ್ಪುದೆಂದ ॥ 58 ॥

॥ **ಕಂದಪದ್ಯ** ॥

ಎಂದವರಂ ಬೋಧಿಸಿ ಬಳಿ ।
ಕಂದಸ್ತಿ ಪ್ರಾಸ್ತಿಯೆಂಬ ಪತ್ನಿಯರಂ ಸಾ ॥
ನಂದದಿ ಕರೆದುಸುರಲ್ಕೇ ।
ಳ್ದೊಂದಿಲ್ಲದೆ ಸಾಂಗಮಾಗಿ ಕಾಂತನೊಳೊರೆದರ್ ॥ 59 ॥

॥ **ಕಾಂಭೋದಿ – ಅಷ್ಟ** ॥

ಆಗದಾ ನುಡಿ । ಯಾಗದು ॥
ಆಗದಾ ಮಾತು ಶ್ರೀಕೃಷ್ಣರಾಮರನು ॥
ರಾಗದ್ವೇಷದಿ ಕರೆಸುವಿರೆಂಬದರಿತೆವು ॥ ಪ ॥

ಧರಣಿಯ ಭಾರವನಿಳುಹುವೆನೆಂದು ।
ಸಿರಿನಾರಾಯಣನೆ ಮಾನುಷರೂಪಗೊಂಡು ॥
ವರ ಗೋಕುಲದಲ್ಲಿ ಬೆಳೆವುತ್ತಲಿಹನು ।
ಮರೆದಿಂತು ವ್ಯರ್ಥಸ್ಯ ಕೆಡದಿರು ನೀನು ॥ 60 ॥

ಶಕಟಾಸುರನು ಸಣ್ಣವನೆ ನೀ ನೋಡು ।
ಬಕನೆಂಬುವನು ಬಡವನೆ ಮಾತನಾಡು ॥
ಸುಕುಮಾರರವರೆಂದು ಯೋಚಿಸಬೇಡ ।
ಸಕಲ ನಿನ್ನವರಿಗೆ ಕೊಟ್ಟರು ಕೇಡ ॥ 61 ॥

ಹೊರಗಣ ಹಾಳುಮಾರಿಯ ತನ್ನ ನಿಳಯಾ ।
ಕ್ಕರೆಸಿ ತಂದಪರೇನೊ ಹಾವಿನಮರಿಯ ॥
ಕೊರಳಿಗೆ ಚಿನ್ನವೆಂದಿಡುವರೆ ಕಾಂತ ।
ಥರವಲ್ಲ ನಿನಗಿದು ಸದ್ಗುಣವಂತ ॥ 62 ॥

॥ **ಸಂವಾದ – ಏಕ** ॥

ಕಾಮಿನಿಯರಿರಾ ಎನ್ನೊ । ಳೀ ಮಾತನಾಡುವರೆ ನೀ ।
ರೇ ಮತ್ಸಮ ವೀರರುಂಟೆ । ಭೂಮಿಯೊಳಗೆ ॥
ಭೂಮಿಯೊಳು ನಿನ್ನ ಪೋಲ್ವ । ಭೀಮ ಬಲರಿಲ್ಲವಾದ ।
ಡಾ ಮಹಾತ್ಮಗಿದೆರೆ ನೀನು । ಪ್ರೇಮದ ಕಾಂತ ॥ 63 ॥

ಚಂದ್ರನ ಕಿರಣಕ್ಕೆ ಮುಸುಡು । ಕಂದುವುದೆ ಸದೆಗಾ ।
ನಂದನುಬ್ಬಟೆಗೆ ನಾನು । ಕುಂದುವುದುಂಟೆ ॥
ಚಂದ್ರಿಕೆಯೆಂಬುದೆ ಬಿಸಿಲಿ । ನಂದವಹುದು ವಿರಹಿ ಜನಕೆ ।
ನಂದ ತನಯರದಟು ನಿನಗೆ । ಮುಂದೆ ತೋರ್ಪುದು ॥ 64 ॥

ಕಳಿಲೆಯುಗುರಿಂದ ಮುರಿದಂತೆ । ಲಳಿಗೆಯಾದ ಮೇಲಂಜುವದೆ ।
ಬೆಳೆಯಗೊಡದೆ ಮಕ್ಕಳನ್ನು । ಕೊಲುವೆನದರಿಂದ ॥
ಎಳೆಯ ನಾಗನ ವಿಷವು ನೋಡ । ಲೆಳತಾಗುವದೆ ಬಾಲನಾದ ।
ಡಳುಕನು ಶ್ರೀಕೃಷ್ಣನತುಳ । ಬಲವಂತ ಕಾಣ್ಯೆ ॥ 65 ॥

ಅಸಮ ಚಾಣೂರಾದಿ ಸುಭಟ । ಪ್ರಸರವೆನ್ನ ಮನೆಯೊಳಿರ್ದು ।
ಹಸುಳೆಯ ಸಾಹಸಕೆ ನಾನು । ವಶಗುಂದುವೆನೆ ॥
ನುಸಿಗಳೆರಕೆಯ ಗಾಳಿಗೆ । ಕುಸಿದುಬೀಳ್ವುದೆ ಹೆಮ್ಮರವು ।
ಪಿಸುಣರವದಿರ ಲೆಕ್ಕಿಪನೆ । ಕುಸುಮನಾಭನು ॥ 66 ॥

ಬರುವುದೆಲ್ಲ ಬರಲಿ ನಮ್ಮ । ಪುರಕೆ ಕರೆಸಿ ನೋಳ್ಪೆನವರ ।
ಪರಮಸತ್ವಗಳನು ಸತಿಯ । ರಿರ ಸಗಾಢದಿ ॥
ಬರೆದ ಲಿಪಿಯು ತೀರ್ದ ಜನಕೆ । ಪರರ ನುಡಿಯು ಪಥ್ಯವಹುದೆ ।
ಹರುಷಬಂದಂತೆ ಮಾಡೆಂದು । ಕರವ ಮುಗಿದರು ॥ 67 ॥

॥ **ವಾರ್ಧಕ** ॥

ನಾನಾ ಪ್ರಕಾರದಿಂದೊಡಬಡಿಸಿ ಪೇಳ್ದಡಾ ।
ಮಾನಿನಿಯರುಕುತಿಯಂ ಕೈಗೊಳದೆ ಕಂಸಂ ನಿ ।
ಜಾನುಮತದಿಂದ ಮುಂದಣ ಕಾರ್ಯಸಂಗತಿಯನಾಲೋಚಿಸುತ ಮನದೊಳು ॥
ಈ ನಮ್ಮ ನಗರಕಂ ಹರಿಬಲರ ಕರೆ ತಹ ಪ್ರ ।
ವೀಣನಾರಿದರೊಳೆಂದನುತಲಕ್ರೂರನಂ ।
ಸಾನುರಾಗದಿ ಕರೆದು ಕರವಿಡಿದು ಸುಸ್ನೇಹಪರನಾಗುತಿಂತೆಂದನು ॥ 68 ॥

॥ **ಮಧ್ಯಮಾವತಿ – ಅಷ್ಟ** ॥

ಯಾದವೋತ್ತಮ ಕೇಳೆನ್ನ ಮಾತ ।
ಕ್ರೋಧವರ್ಜಿತ ಸರ್ವಲೋಕವಿಖ್ಯಾತ ॥ ಪ ॥

ಸ್ವಾಮಿಕಾರ್ಯವ ಮಾಳ್ಪ ಜನರನ್ನು ನಿನ್ನಂತೆ ।
ಭೂಮಂಡಲದೊಳಗೆಣೆಗಾಣೆ ॥
ಪ್ರೇಮದೊಳಿನ್ನೊಂದನುಸುರುವೆನೆನ್ನಯ ।
ನೇಮವ ಮೀರದಿರೆಲೆ ಶಾಂತ ಗುಣವಂತ ॥ 69 ॥

ನಂದಗೋಕುಲಕೆ ಪೋಗಿಂದು ವಸುದೇವನ ।
ಕಂದರಲ್ಲಿಹರಂತೆ ಕೇಳಿದೆನು ॥
ನಂದಾದಿ ಗೋಪರ ವೃಂದಸಹಿತ ಕರತಂದಪುದವರನು ।
ಮುಂದೆಲ್ಲ ಪೇಳ್ವೆನು ॥ 70 ॥

ಹಬ್ಬದ ಹೊಳಲೆನ್ನು ನಾರಿಯರೆಲ್ಲ ಸಂ ।
ದರ್ಭವಹರು ನಿನಗೆನುತ ಪೇಳು ॥
ಸರ್ಬ ಬಾಂಧವರು ಒಳ್ಳೆಯವರೆಂದು ಚಾಳಿಸಿ ।
ಆರ್ಭಕರನು ಕರೆ ತಾ ನಮ್ಮ ನಗರಕ್ಕೆ ॥ 71 ॥

॥ **ವಾರ್ಧಕ** ॥

ಜನನಾಥ ಕೇಳ್ ಕಂಸನೆಂದುದಂ ಕೈಗೊಟ್ಟು ।
ವಿನಯದಿಂದಕ್ರೂರನತಿತೋಷದಿಂದ ಸ್ಯಂ ।
ದನವನುಂ ಕೊಂಡು ರಾಜಾಲಯವ ಪೊರಮಟ್ಟು ಮನದಿ ಹರಿಯಂ ನೆನೆಯುತ ॥
ಮನೆಗೆ ಪೋಗಲ್ಕನ್ನೆಗಂ ಮಿಸುನಿವೆಟ್ಟಮಂ ।
ತನಗೆ ನಿಚ್ಚಂ ಸುತ್ತುವೀ ದುಃಖ ತೀರದೆಂ ।
ದೆನುತ ಮುನಿಸಂದಳೆದು ಪಶ್ಚಿಮಾಚಲದಿಂದಲಿನನಿಳಿದನಂಬುನಿಧಿಗೆ ॥ 72 ॥

॥ **ಭೈರವಿ – ಝಂಪೆ** ॥

ಧಾತ್ರೀಶ ಲಾಲಿಸಾ । ರಾತ್ರೆಯಲಿ ಗಾಂಧಿನೀ ।
ಪುತ್ರ ಗೃಹದಲಿ ಹರಿಯ । ಸ್ತೋತ್ರದಿಂದಿರಲು ॥ 73 ॥

ಅತ್ತಲನ್ನೆಗ ಕಂಸ । ಭೃತ್ಯನಾಗಿಹ ಕೇಶಿ ।
ಯತ್ಯಧಿಕ ಕೋಪದಿ ಬ । ರುತ್ತ ಮಾರ್ಗದಲಿ ॥ 74 ॥

ದನುಜಾಕೃತಿಯನುಳಿದು । ಮನಗೊಂಬ ಹಯರೂಪ ।
ವನು ತಾಳಿಯುಬ್ಬೇರಿ । ಘನ ರೌದ್ರರಸದಿ ॥ 75 ॥

ಪದಹತಿಗೆ ಧರೆಯ ಬಲಿ । ಸದನವನು ಪೊಗಿಸುತ್ತ ।
ರದನದಲಿ ಗಗನವನು । ಕೆದರಿ ನೋಡುತ್ತ ॥ 76 ॥

ಹೇಶಿತದಿ ಸುರರ ಪರ । ದೇಶಿಗಳ ಮಾಡುತ್ತ ।
ಘಾಸಿಗೈವುತ ವನವ । ರೋಷದಲಿ ಬಂದ ॥ 77 ॥

ಬರಲು ಗೋಕುಲದವರು । ದುರುಳನು ಕಾಣುತ್ತ ।
ಹರಿದರೆಲ್ಲಾ ದೆಸೆಗೆ । ಮರುಗಿ ಭೀತಿಯಲಿ ॥ 78 ॥

ಗಡಗಡನೆ ನಡುಗಿ ಕಂ । ಗೆಡುತ ಗೋವಳರು ಕಾ ।
ವೊಡೆಯರಾರೆಂದು ಗೋ । ಳಿಡುತಿರ್ದರಲ್ಲಿ ॥ 79 ॥

॥ **ಕಂದಪದ್ಯ** ॥

ಧರಣಿಪ ಕೇಳ್ ಭಯದಿಂದಾ ।
ಪುರಜನರೊಂದಾಗಿ ಬಂದು ಕೃಷ್ಣನ ಪೊರೆಗಂ ॥
ಶಿರಮಂ ಬಾಗುತ ಕರುಣಾ ।
ಕರ ರಕ್ಷಿಸು ರಕ್ಷಿಸೆನುತ ಮಗುಳಿಂತೆಂದರ್ ॥ 80 ॥

॥ **ಯದುಕುಲಕಾಂಭೋದಿ – ಅಷ್ಟ** ॥

ವಿಷ್ಟರಶ್ರವ ವಿಶ್ವಂಬರ ದೈತ್ಯಘ್ನ ।
ರಟ್ಟ ಪಾಲಿಪುದೆಮ್ಮನು ॥
ದುಷ್ಟನೋರ್ವನು ಬಂದು ಬೆದರಿಸುವನು ಕಾಯೊ ।
ಶಿಷ್ಟ ರಕ್ಷಕನೆ ನೀನು ॥ 81 ॥

ಎಂದು ಪಾದಾಬ್ಜದೊಳೆರಗಿದ ಗೋಪರ ।
ವೃಂದವ ಪಿಡಿದೆತ್ತುತ ॥
ಮಂದಹಾಸದೊಳರವಿಂದನಾಭನು ದಯ ।
ದಿಂದ ಪೇಳಿದ ನೋಡುತ್ತ ॥ 82 ॥

ಬೆದರಲೇತಕೆ ನಾನಿರಲಾಗಿ ನಿಮ್ಮನಾ ।
ಮದಮುಖನೇಂ ಗೈವನು ॥
ಕದನದೊಳರೆ ನಿಮಿಷದಿ ದೈತ್ಯನನು ಯಮ ।
ಸದನಕ್ಕೆ ಕಳುಹುವೆನು ॥ 83 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಎಂದು ತತ್ಪುರವಾಸ ಜನರಿಂ ।
ಗಂದು ತೋಷದೊಳಭಯವಿತ್ತಾ ।
ಮಂದಮತಿ ಇರುವೆಡೆಗೆ ಬಂದಾ
ನಂದದಿಂದ ॥ 84 ॥

ಕೆಳೆಯನಂಗದಲೆಡದ ಭುಜವನು ।
ಚಲಿಸುತಲಿ ಸಂಭ್ರಮದಿ ಹರಿ ಮೂ ।
ದಲಿಸಿ ಕರೆದನು ಘೋರ ದೈತ್ಯನ ।
ಗೆಲವಿನಿಂದ ॥ 85 ॥

ಎಲೆಲೆ ದೈತ್ಯಾಧಮನೆ ಸುಮ್ಮನೆ ।
ಬಲವಿಹೀನರ ನಂಜಿಸುವದೇ ।
ಕಲಘು ಭುಜಬಲನಾದಡೆನ್ನೊಳು ।
ಬಲುಹ ತೋರಾ ॥ 86 ॥

ತೋರಿಸಿದಡೀಕ್ಷಣವೆ ನಿನ್ನನು ।
ಮಾರಿಗೌತಣವನ್ನು ಗೈಸುವೆ ।
ಬಾರೆಲವೊ ಸಮ್ಮುಖಕೆನುತ ದೈ ।
ತ್ಯಾರಿ ನುಡಿದ ॥ 87 ॥

॥ **ಭೋಗಷಟ್ಪದಿ** ॥

ಪೊಡವಿಪತಿಯೆ ಕೇಳು ಹರಿಯ ।
ನುಡಿಯ ಕೇಳ್ದು ಕೇಶಿಯೆಂಬ ।
ಧಡಿಗ ದೈತ್ಯ ತಿರುಗಿ ಭೋರು ಗುಡಿಸಿ ರೌದ್ರದಿ ॥
ಕಡುಮುಳಿದು ಕೃತಾಂತನಂತೆ ।
ಕಿಡಿಯನುಗುಳುತಕ್ಷಿಗಳಲಿ ।
ತಡೆಯದಸುರಹರನ ಮುಂಗಡೆಗೆ ಬಂದನು ॥ 88 ॥

ಕೆರಳಿ ಮುಂದೆ ಬಂದು ನಿಂತ ।
ತುರಗ ರೂಪದಿಂದಲಿರ್ಪ ।
ದುರುಳನನ್ನು ಕಂಡು ಕಾತರಿಸದಾ ಕ್ಷಣ ॥
ಅರರೆ ಕುದುರೆಗಿಷ್ಟು ಶೌರ್ಯ ।
ವೆರಸಿತಿದೇನೆಂದು ನಗುತ ।
ಭರದಿ ಮುಷ್ಟಿಯಿಂದ ತಿವಿದ ಸರಸಿಜಾಕ್ಷನು ॥ 89 ॥

ಮುಷ್ಟಿಯಿಂದಲೆರಗಲಾಗ ।
ದುಷ್ಟಮತಿಯು ಕಿನಿಸಿನಿಂದ ।
ಲಟ್ಟಿ ಕೃಷ್ಣನುರವ ಖುರದಿ ಥಟ್ಟನೊದೆಯಲು ॥
ನೆಟ್ಟನಿಂದ್ರ ಮುಳಿದು ಪವಿಯೊ ।
ಳಿಟ್ಟ ಗಿರಿಯ ತೆರದೊಳಾಗ ।
ಅಷ್ಟದಿಗುಪತಿಗಳು ಗೋಳುಗುಟ್ಟೆ ನಭದೊಳು ॥ 90 ॥

ಇಲ್ಲ ಹುಸಿಯು ಹೋಗೆನುತ್ತ ।
ಖುಲ್ಲನೊದೆದ ಖುರದ ಹತಿಗೆ ।
ನಿಲ್ಲದೊಡನೆ ಹಾರಿ ತಪ್ಪಿ ಫುಲ್ಲನಾಭನು ॥
ಬಲ್ಲಿದಾತನಾದೆ ನಿಲ್ಲು ।
ನಿಲ್ಲೆನುತ್ತ ಖಳನ ಕಾಲ್ಗ ।
ಳೆಲ್ಲವನ್ನು ಪಿಡಿದು ದೂರದಲ್ಲಿ ಬಿಸುಟನು ॥ 91 ॥

ದೂರ ಬಿಸುಟ ಭರಕೆ ದನುಜ ।
ಕಾರಿ ರುಧಿರವನ್ನು ಧರಣಿ ।
ಗೂರಿ ಬೀಳೆ ಹರಿಗೆ ಜಯವ ಸಾರುತೀರ್ದರು ॥
ಘೋರ ದೈತ್ಯನೆದ್ದು ಬಳಿಕ ।
ಮಾರಿಯಂತೆ ಕಳೆದು ಬಾಯ ।
ತೋರಿ ತಿಂಬೆನುತ ಗೋಪವಾರಕೆರಗಿದ ॥ 92 ॥

ಕಡುಗಿ ಗೋಪ ಪಡೆಯ ನುಂಗಿ ।
ಬಿಡುವೆನೆಂಬ ಖಳನ ಬಾಯೊ ।
ಳೆಡದ ತೋಳ ಜಡಿಯಲಾಗ ಮೃಡನಮಿತ್ರನು ॥
ದೃಢದಿ ಬಾಹು ಲತೆಯು ಗಂಟ ।
ಲೆಡೆಯೊಳಾಗ ಬೆಳೆಯೆ ಗೋ ।
ಣೊಡೆದು ಶ್ವಾಸವಡಗಿ ಬಿದ್ದ ಪೊಡವಿಗಸುರನು ॥ 93 ॥

॥ **ಭಾಮಿನಿ** ॥

ಧರಣಿಗಾ ಖಳ ಬೀಳೆ ಕಾಣುತ ।
ಸರಸಿಜಾಂಬಕನವನ ವದನದೊ ।
ಳಿರುವ ನಿಜ ದೋರ್ದಂಡವನು ತೆಗೆದನು ವಿಲಾಸದಲಿ ॥
ಸುರಿದರಮರರು ಕುಸುಮವೃಷ್ಟಿಯ ।
ನಿರದೆ ಬಳಿಕ ಮುನೀಂದ್ರ ನಾರದ ।
ಪರಮಪುರುಷ ನಮೋಯೆನುತಲೈದಿದನು ನಭದಿಂದ ॥ 94 ॥

॥ ಸಾಂಗತ್ಯ – ರೂಪಕ ॥

ಜಯ ಜಯ ಗೋವಿಂದ ಯದುಕುಲಾರ್ಣವ ಚಂದ್ರ ।
ಜಯ ಫಣಿಶಯನಾಬ್ಜನಯನ ॥
ಜಯ ನಮೋಯೆನುತ ಶ್ರೀಕೃಷ್ಣನ ಪದಕಿಸ ।
ಲಯಕೆರಗಿದನು ನಾರದನು ॥ 95 ॥

ಪುಳಕದೊಳುಬ್ಬಿ ನಾರದ ಮುನಿವರನಂದು ।
ತುಳುಕುವಾನಂದಬಾಷ್ಪದಲಿ ॥
ಬಳಿಕತಿಹರುಷದಿಂದೆದ್ದು ಕೈಮುಗಿವುತ್ತ ।
ಖಳಕುಲಾಂತಕನ ಕೀರ್ತಿಸಿದ ॥ 96 ॥

ಕಂಡೆ ನಾನಹಹ ಲೋಕೈಕನಾಥನೆ ತನು ।
ಗೊಂಡು ಭೂಮಿಯೊಳುದಿಸಿಹುದ ॥
ಕೊಂಡಾಡಲಳವೆ ವೇದಾಳಿಗೆ ನಿಲುಕದ ।
ಖಂಡಸಚ್ಚಿತ್ಸುಖನನ್ನು ॥ 97 ॥

ಮುಚ್ಚು ಮಾತೇನು ಭೂಭಾರಹರಣಕಾಗಿ ।
ಎಚ್ಚರಿಸಲು ಚತುರ್ಮುಖನು ॥
ಪೆಚ್ಚಿದ ದನುಜರ ಮಡುಹಲೋಸುಗ ಪುಟ್ಟಿ ।
ದಚ್ಚರಿಯೇನ ಬಣ್ಣಿಪೆನು ॥ 98 ॥

ಲಾಲಿಪುದಿನ್ನೊಂದ ಖಳ ಕಂಸನೆನ್ನ ಕಂ ।
ಡಾಳಾಪದಿಂದಲಿ ತನ್ನ ॥
ಆಳನು ಕೊಂದವರ್ ಯಾರೆನಲವನಿಗೆ ।
ಮೂಲವಿದ್ಯವನುಸುರಿಹೆವು ॥ 99 ॥

ಬಿಲ್ಲಹಬ್ಬದ ನೆವನವ ಮಾಡಿಕೊಂಡು ನಿ ।
ಮ್ಮೆಲ್ಲರ ಕರೆಸುವನವನು ॥
ಅಲ್ಲಿಗೆ ಪೋಗಿ ಮುಂದಾಹ ಕಾರ್ಯವ ಮಾಳ್ಪು ।
ದೆಲ್ಲ ಭಾರವು ನಿನಗೆಂದ ॥ 100 ॥

ಎಂದು ಕೃಷ್ಣನ ಬಲಬಂದು ಪಾದಾಬ್ಜದಿ ।
ವಂದಿಸಿ ಸದ್ಭಕ್ತಿಯಿಂದ ॥
ವೃಂದಾರಕರ ಲೋಕಕಂದು ಸರಾಗದಿ ।
ಸಂದನು ನಾರದ ವ್ರತಿಪ ॥ 101 ॥

ಸುರಮುನಿ ಪೋಗೆ ಗೋವಳರಿತ್ತ ಕೃಷ್ಣನ ।
ಪರಮ ಸಂತೋಷದಿಂದಪ್ಪಿ ॥
ಪರಸುತ್ತ ಕೇಶಿಮರ್ದನನೆಂಬ ನಾಮವ ।
ವಿರಚಿಸಿ ಕರೆದರುತ್ಸವದಿ ॥ 102 ॥

॥ **ವಾರ್ಧಕ** ॥

ಧರಣಿಪತಿ ಕೇಳಿಂತು ಕೇಶಿಯಂ ಸದೆಬಡಿದು ।
ಕರುವಳರನಡಗಿಸಿದ ವ್ಯೋಮನೆಂಬಸುರನಂ ।
ಮುರಿದು ಮಧುಸೂದನಂ ಗೋಪಗೋಪೀಜನರ್ ಸಹಿತ
ವರಗೋಕುಲದಲಿ ॥
ಇರಲಿತ್ತ ಮಧುರೆಯೊಳಗಕ್ರೂರನಾ ವಿಭಾ ।
ವರಿಯೊಳಚ್ಯುತನ ನೆನೆವುತ್ತಿರಲ್ಕನ್ನೆಗಂ ।
ಹರಿದವಂಧತಮಿಸ್ರ ಪೂರ್ವಾದ್ರಿಶಿಖರದೊಳ್ ದಿನಕರಂ ರಂಜಿಸಿದನು ॥ 103 ॥

॥ **ಕಂದಪದ್ಯ** ॥

ಅಂದಾ ದಿನದೊಳ್ ಸಂಧ್ಯಾ ।
ವಂದನೆಯಂ ರಚಿಸಿ ಭಜಿಸುತಚ್ಯುತಪದಮಂ ॥
ಗಾಂಧಿನಿಯಣುಗಂ ಸಂತಸ ।
ದಿಂದಂ ರಥವೇರಿ ಮನೆಯನುಂ ಪೊರಮಟ್ಟಂ ॥ 104 ॥

॥ **ಸಾವೇರಿ – ರೂಪಕ** ॥

ಬಂದನಕ್ರೂರಗೋವಿಂದನ ಚರಣಾರ ।
ವಿಂದವ ನೆನವುತ್ತಾನಂದ ಬಾಷ್ಪದಲಿ ॥ ಪ ॥

ಸಹಜನೆನಿಪ ಚಿನುಮಯ ತಾನೆ ಭಕ್ತಾನು ।
ಗ್ರಹಕಾಗಿ ಕೃಷ್ಣನಾಮದೊಳುದಿಸಿಹುದ ॥

ಬಹುಜನ್ಮಾರ್ಜಿತದ ಪುಣ್ಯದಿ ಕಂಡರೆನ್ನಂಥ ।
ಮಹಿಯೊಳು ಕೃತಕೃತ್ಯರ್ ಯಾರೆಂದೆನುತ್ತ ॥ 105 ॥

ಅಜ ಭವೇಂದ್ರಾದಿಗಳಾವನ ಪಾದವ ।
ಭಜಿಸಿ ಕಾಣರು ಕರ್ಮನಿಷ್ಠರಾದವರು ॥
ಯಜಿಸಿ ಕಾಣರು ಕಾಂಬೆನೆಂತುಮಾಂ ಸಾಕ್ಷಿಯೊಳ್ ।
ನಿಜ ನಿರಂಜನನ ನಿರ್ಗುಣನನೆಂದೆನುತ ॥ 106 ॥

ಕೆಟ್ಟುದಿಂದಿನಲೆನ್ನ ದುರಿತವು ಸಿದ್ಧಿಕೈ ।
ಗಟ್ಟಿತೀ ನರಜನ್ಮ ಸಾಫಲ್ಯವಾಯ್ತು ॥
ದೃಷ್ಟಿಗೋಚರವಾಗಿ ಯೋಗಿಧ್ಯೇಯನ ಕಂಡು ।
ಸಾಷ್ಟಾಂಗದಿಂದ ವಂದಿಸುವೆ ತಾನೆನುತ ॥ 107 ॥

ವಂದಿಸಲೆನ್ನನು ಪಿಡಿದೆತ್ತಿ ಮೃದುಹಸ್ತ ।
ದಿಂದ ಮೈದಡವಿ ತಳ್ಕಿಸುತಲಾದರದಿ ॥
ಚೆಂದದಿ ಪದುಳವ ಕೇಳಲಾ ಕೃಷ್ಣನೆ ।
ಮುಂದಾರೆನ್ನಂತೆ ಸಧನ್ಯರೆಂದೆನುತ ॥ 108 ॥

॥ **ಭಾಮಿನಿ** ॥

ಇಂತೆನುತಲಕ್ರೂರನಾ ಶ್ರೀ ।
ಕಾಂತನನು ಧ್ಯಾನಿಸುತ ಮಾರ್ಗ ।
ಭ್ರಾಂತಿಯನು ನೆರೆಮರೆದು ತದ್ಗತ ಭಾವಭಕುತಿಯಲಿ ॥
ಸಂತಸದೊಳಾ ನಂದಗೋಕುಲ ।
ದಂತಿಕಕೆ ಬರಲನಿತರೊಳು ಗ್ರಹ ।
ಕಾಂತನಸ್ತಾಚಲದೊಳೆಸೆದನು ಭೂಪ ಕೇಳೆಂದ ॥ 109 ॥

॥ **ದ್ವಿಪದಿ** ॥

ಬರುತಬರುತಿಂತಾ ಪ್ರದೋಷಕಾಲದಲಿ॥
ವರ ಗೋಕುಲದ ಸಮೀಪದ ವನಾಂತದಲಿ ॥ 110 ॥

ಧರೆಗಲಂಕರಿಸಿರುವ ಶ್ರೀರಮಾಪತಿಯ ॥
ಚರಣಪಂಕೇರುಹದ ಹಜ್ಜೆಯಾಕೃತಿಯ ॥ 111 ॥

ಕಂಡನಖಿಳಾಮರರ ಹೃದಯಮಂಟಪದಿ ॥
ಮಿಂದೆದ್ದು ಕುಣಿವ ಕಾಲ್ಗೆಜ್ಜೆಯನು ಮುದದಿ ॥ 112 ॥

ಕಾಣುತವೆ ಸುಖಬಾಷ್ಪದಿಂದ ತನು ನೆನೆದು ॥
ಬಾಣಪಂಚಕನ ಪಿತನನು ಮನದಿ ನೆನೆದು ॥ 113 ॥

ರಥದಿಂದ ಜಿಗಿದಿಳಿವುತಾ ಹೆಜ್ಜೆಗಂದು ॥
ಅತಿಭಕುತಿಯಿಂದಲೆರಗಿದನು ಬಲಬಂದು ॥ 114 ॥

ಕೋಡಿವರಿವಾನಂದ ಬಾಷ್ಪದಲಿ ಮುಳುಗಿ ॥
ಕೂಡೆ ಮಗುಳಿಂತೆಂದನವನು ಮನಕರಗಿ ॥ 115 ॥

॥ ಕಾಂಭೋದಿ – ಝಂಪೆ ॥

ಇವೆಯಲಾ ಪದ್ಮವಜ್ರಾಂಕುಶಧ್ವಜ ರೇಖೆ ।
ಯವನಿಯಲಿ ಗುರುತವಾಗಿಹುದು ॥
ಶಿವಶಿವಾ ತಾನೇಸು ಧನ್ಯನೋಯೆನುತ ಮಾ ।
ಧವನ ನಿಜ ಪಾದರೇಣುವನು ॥ 116 ॥

ತೆಗೆದು ಮುದ್ದಾಡುತ್ತ ಮೈಗದನು ಪೂಸಿಕೊಂ ।
ಡೊಗುಮಿಗೆಯ ಹರುಷದುಬ್ಬಿನಲಿ ॥
ಬಗೆದಣಿಯೆ ಕೊಂಡಾಡುತಿರ್ದನಾ ಹರಿಯ ಪದ ।
ಯುಗದ ಹೆಜ್ಜೆಗಳನಕ್ರೂರ ॥ 117 ॥

ಬಳಿಕ ಫಲದಾಸೆಯೊಳು ಸುಮವ ಮೀವರ್ಂತೆ ಗೋ ।
ಕುಲದ ಕಳಕಳವನ್ನು ಕೇಳ್ದು ॥
ನಲವಿನಿಂ ರಥವೇರಿ ಹರಿಯ ಕಾಂಬರ್ತಿಯಲಿ ।
ತಳುವದೈತಂದನಾ ಪುರಕೆ ॥ 118 ॥

ಪೊಗಳುವಡದಾರ ಜಿಂಹ್ವೆಗೆ ಸಾಧ್ಯವಪ್ಪುದಾ ।
ನಗರಲಕ್ಷ್ಮಿಯ ನೋಡಲಾಗಿ ॥
ಜಗತಿಯೆಂಬಂಗನೆಯ ನಗೆಮೋಗವಿದೆಂಬಂತೆ ।
ಸೊಗಯಿಪುದು ಜನರ ಕಣುಮನಕೆ ॥ 119 ॥

ಎಲ್ಲಿ ನೋಡಿದರು ಗೋಪಿಯರ ಮನೆಮನೆಗಳಿದಿ ।
ರಲ್ಲಿ ತೋರಣ ಪತಾಕೆಗಳು ॥
ಸಲ್ಲಲಿತ ಗೀತಮಂಗಲ ವಾದ್ಯರವರಿಂದ ।
ಚೆಲ್ವಾಗಿ ತೋರಿತಾ ನಗರ ॥ 120 ॥

॥ **ಕಂದಪದ್ಯ** ॥

ಧರಣಿಪ ಕೇಳಿಂತೊಪ್ಪುವ ।
ವರ ಗೋಕುಲಮಂ ನಿರೀಕ್ಷಿಸುತಲಕ್ರೂರಂ ॥
ಬರೆ ಗೋಪಾಲರ ಮಧ್ಯದೊ ।
ಳಿರುತಿಹ ಹರಿಬಲರಂ ಮಿಗೆ ದೂರದಿ ಕಂಡಂ ॥ 121 ॥

॥ **ಯದುಕುಲಕಾಂಭೋದಿ – ಅಷ್ಟ** ॥

ಪೊಂಗೊಳಲನು ಬಾರಿಸುತ್ತ ಗೋಪಾಲರ ।
ಸಂಗಡ ನಲಿದಾಡುತ್ತ ॥2
ಕಂಗೊಳಿಸುವ ತುರುವಿಂಡ ನೋಡುತ ಯದು ।
ಪುಂಗವರೆಸೆದಿರ್ದರು ॥ 122 ॥

ನೀಲ ಪೀತಾಂಬರದುಡಿಗೆಗಳಲಿ ಮಣಿ ।
ಜಾಲ ಭೂಷಣಗಳಲಿ ॥
ಮೂಲೋಕವನು ಮೋಹಿಸುವ ರೂಪಿನಲಿ ಬಲ ।
ಶ್ರೀಲೋಲರಿರೆ ದೂರದಿ ॥ 123 ॥

ಕಂಡು ಭಕ್ತಿಯೊಳಕ್ರೂರನು ಕರಕರ ।
ದಂಡದ ಮುಕುಳವನು ॥
ಮಂಡೆಯೊಳ್ ಧರಿಸುತಲಚ್ಯುತನನು ಮಿಗೆ ।
ಕೊಂಡಾಡುತಿರುತಿರ್ದನು ॥ 124 ॥

॥ **ಸೌರಾಷ್ಟ್ರ – ಏಕ** ॥

ಜಯ ನಮೋ ಪುಂಡರೀಕಾಕ್ಷ ಲೋಕಾಧ್ಯಕ್ಷ ।
ಜಯಗೋಪವೇಷ ಲಕ್ಷ್ಮೀಶ ॥
ಜಯ ನಮೋಯೆನುತಲಾ ರಥದಿಂದಲಿಳೆಗೆ ತ ।
ನ್ಮಯನಾಗುತಾ ಮೈಯಿಕ್ಕಿದನು ॥ 125 ॥

ಕರಕಂಜಮುಕುಳವ ಶಿರದೊಳು ಧರಿಸುತ್ತ ।
ಹರುಷಬಾಷ್ಪದೊಳಡಿಗಡಿಗೆ ॥
ಧರೆಯೊಳು ದಂಡದಂತೆರಗುತ್ತ ಹರಿಬಲ ।
ರಿರುವ ತಾಣಕೆ ನಡೆತಂದ ॥ 126 ॥

ಒಸರುವ ಸುಖಬಾಷ್ಪದಿಂದ ಪಾದವ ಪ್ರಕ್ಷಾ ।
ಳಿಸುತಕ್ಷಿದ್ವಯನೀಲೋತ್ಪಲದಿ ॥
ಆಸಮಸಂಭ್ರಮದಿ ಪೂಜಿಸುತ ಕೃಷ್ಣಾಂಘ್ರಿ ಸಾ ।
ರಸದಲ್ಲಿ ಮಣಿದಿರ್ದನವನು ॥ 127 ॥

॥ **ಕಂದಪದ್ಯ** ॥

ಚರಣದಿ ಮಣಿದಕ್ರೂರನ ।
ಭರದಿಂ ಪಿಡಿದೆತ್ತಿ ಬಹಳ ಮುದದಿಂದಾಗಳ್ ॥
ಸರಸಿಜಬಾಣನ ಜನಕಂ ।
ಬರಸೆಳೆದಾಲಿಂಗಿಸುತ್ತಲಿರ್ದಂ ಕೃಪೆಯೊಳ್ ॥ 128 ॥

॥ **ಮಧುಮಾಧವಿ - ತ್ರಿವುಡೆ** ॥

ರಾಜ ಕೇಳಿಂತಾ ಮಹಾತ್ಮನು ।
ಶ್ರೀಜನಾರ್ದನಗೆರಗಿ ಮಿಗೆ ತ ।
ತ್ತೇಜ ಗುಣವನು ಪೊಗಳುತಿರುವೆ ।
ಲ್ಲಾ ಜನಕೆ ಪೊಡಮಟ್ಟನು ॥ 129 ॥

ಹಲಧರನ ಪದಕೆರಗಲವನತಿ ।
ಹರುಷದಿಂ ಪಿಡಿದೆತ್ತಿ ತಳ್ಕಿಸು ।
ತಲಿ ಕೃಪಾರಸದಿಂದಲಾತನ ।
ತಲೆದಡವಿ ಸುಸ್ನೇಹದಿ ॥ 130 ॥

ನುಡಿಸಿ ಕೇಳುತ ಕ್ಷೇಮವನು ಕುಲ ।
ಗೆಡುಕ ಕಂಸನ ವಾರ್ತೆಗಳಿಗೆಡೆ ।
ಬಿಡದೆ ಕಿವಿಗೊಡುತ್ತಿದಿದರು ಮನೆ ।
ಗೊಡನೆ ಸರ್ವರು ಸಹಿತಲಿ ॥ 131 ॥

॥ **ವಾರ್ಧಕ** ॥

ಭೂತಳಾಧಿಪ ಲಾಲಿಸಿಂತು ರಾಮಾಚ್ಯುತರ್ ।
ಪ್ರೀತಿಯಿಂದಕ್ರೂರನಂ ಗೃಹಕೆ ಕರೆತಂದು ।
ಸಾತಿಶಯದಿಂದ ಮಧುಪರ್ಕಾದಿ ಸತ್ಕಾರದಿಂ ಪೂಜಿಸುತ್ತ ಬಳಿಕ ॥
ಪೂತತರಮಾದ ಬಹುಗುಣದನ್ನಪಾನದಿಂ ।
ದಾ ತತ್ವವಿದನ ಸಂತರ್ಪಿಸಿ ತ್ರಿಲೋಕವಿ ।
ಖ್ಯಾತರಹ ಬಲಕೃಷ್ಣರುಂಡು ಕುಳ್ಳಿರ್ದು ಮಗುಳಾತನಂ ಬೆಸಗೊಂಡರು ॥132॥

॥ **ತುಜಾವಂತು – ಝಂಪೆ** ॥

ಬಂದ್ಯೆ ಸುಚಾರಿತ್ರ ಗಾಂಧಿನೀಪುತ್ರ ।
ಇಂದೆಮ್ಮ ಬಳಿಗೆ ನಡೆತಂದುದೇನಿದು ಚಿತ್ರ ॥ ಪ ॥

ಕುಶಲಿಗಳೆ ಸತಿಸುತರು ಬಂಧುಬಾಂಧವರುಗಳು ।
ವಸುದೇವ ದೇವಕಿಯರಿಗೆ ಪದುಳವೆ ॥
ವಸುಧೆಪತಿಯಾದುಗ್ರಸೇನ ದೇವಕರು ಸಂ ।
ತಸದಿಂದಲಿರುವರೇ ಪೊಸವಾರ್ತೆ ಬಳಿಕೇನು ॥ 133 ॥

॥ **ಶರಷಟ್ಪದಿ** ॥

ಇಂತಾ ಬಲ ಶ್ರೀ ।
ಕಾಂತರ್ ಬೆಸಗೊಳೆ ।
ಸಂತಸದಿಂ ಗಾಂಧಿನಿಯಣಗಂ ॥
ತಾಂ ತಳುವದೆ ವೃ ।
ತ್ತಾಂತವನೆಲ್ಲವ ।
ನುಂ ತತ್ಕ್ಷಣದೊಳು ಮಿಗೆ ಪೇಳ್ದಂ ॥ 134 ॥

॥ **ಮಧುಮಾಧವಿ – ಏಕ** ॥

ಲಾಲಿಪುದೆನ್ನ ಬಿನ್ನಪವ ದೇವರಿರಾ ।
ಶ್ರೀಲೋಲ ಬಲರಿರ ಕರುಣಾಳುಗಳಿರಾ ॥
ಪೇಳುವುದೇನು ನಿಮ್ಮನು ನಂಬಿದವರ ।
ಕಾಳುಗೈವುದೆ ಸುಖದುಃಖಾದಿ ಇತರ ॥ 135 ॥

ಆದಡಾ ಖಳ ಕಂಸನಿಂದ ಅಲ್ಲಿರುವ ।
ಹಾದಿಯ ಕಾಣದೆ ಬಿಟ್ಟು ತತ್ಪುರವ ॥
ಯಾದವರೆಲ್ಲರು ಜೀವದಾಸೆಯಲಿ ।
ಪೋದರು ತಮ ತಮ್ಮ ಮನವು ಬಂದಲ್ಲಿ ॥ 136 ॥

ದೇವಕಿಯಲಿ ಜನಿಸಿರಲು ನೀವಂದು ।
ಭಾವಿಕ ಶೌರಿ ಇಲ್ಲಿಗೆ ನಿಮ್ಮ ತಂದು ॥
ಠೀವಿಯೊಳಿಟ್ಟು ಚಂಡಿಕೆಯನೊಯ್ದುದನು ।
ದೇವ ಮುನೀಂದ್ರನಾ ಖಳಗೆ ಪೇಳಿದನು ॥ 137 ॥

ಗಾಳಿ ಬೆಂಬಲವಾದ ಶಿಖಿಯವೋಲಂದು ।
ಕೇಳಿ ಶೂರಾತ್ಮಜಾತನ ಕೊಲ್ಲಲೆಂದು ॥
ಖೂಳನುದ್ಯೋಗಿಸೆ ಮುನಿಪತಿಯದನು ।
ತಾಳಿಸಿದನು ತಿಳಿಯೆನು ಮುಂದಾದುದನು ॥ 138 ॥

ಪಡೆದ ತಂದೆಗೆ ಪ್ರಾಪ್ತಿಯಾದುದು ನಿಗಳ ।
ತುಡುಕು ನಂಟರೊಳಿಷ್ಟರೊಡನೆಲ್ಲ ಜಗಳ ॥
ಕಡು ಕೃಪಣರೊಳು ಕಠೋರದ ವಾಣಿ ।
ಕೆಡುಕನ ಮುಂದೆ ನಿಲ್ಲುವರಾರ ಕಾಣೆ ॥ 139 ॥

॥ **ಭಾಮಿನಿ** ॥

ಆ ವಿಕಳಮತಿಯೆನ್ನ ಕಳುಹಿದ ।
ನೀವಿರುವ ಸನ್ನಿಧಿಗೆ ಗೋಪ ಜ ।
ನಾವಳಿಯು ಸಹ ಬಿಲ್ಲಹಬ್ಬಕೆ ಕರೆದು ತಾರೆನುತ ॥
ಪಾವನಚರಿತ್ರರಿರ ನಿಮ್ಮಡಿ ।
ಸೇವಕನು ನಾ ಕರೆಯ ಬಂದಿಹೆ ।
ಸಾವಧಾನದೊಳೊಲಿದು ಬಿಜಯಂಗೈಯ್ಯಬೇಕೆಂದ ॥ 140 ॥

॥ **ಕಂದಪದ್ಯ** ॥

ಮನುಜೇಶ್ವರ ಕೇಳಕ್ರೂ ।
ರನ ನುಡಿಯಂ ಲಾಲಿಸುತ್ತ ನಸುನಗೆಯಿಂದಂ ॥

ವನರುಹದೃಶ ಬಲರತಿ ಸ ।
ದ್ವಿನಯದೊಳಂ ನಂದಗೋಪನಂ ಕರೆದೆಂದರ್ ॥ 141 ॥

॥ ನೀಲಾಂಬರಿ – ರೂಪಕ ॥

ತಂದೆ ಕೇಳ್ ಮಧುರೆಯಿಂ । ದಿಂದೆಮ್ಮ ಕರೆಯಲು ।
ಬಂದಿಹನಧಿಕಭಕ್ತಿಯೊಳು ॥
ಸುಂದರಮತಿಯಾದ ಗಾಂಧಿನಿ ಸುತನು ಮ ।
ದಾಂಧ ಕಂಸನ ನಿರೂಪದೊಳು ॥ 142 ॥

ಕೋದಂಡೋತ್ಸವವಂತೆ ದೇಶದೇಶದೊಳುಳ್ಳ ।
ಭೂಧವರೈತಪ್ಪರಂತೆ ॥
ಸೋದರಳಿಯರೆಂಬ ಸ್ನೇಹದೊಳೆಮ್ಮ ವಿ ।
ನೋದದಿ ಕರೆಸುವನಂತೆ ॥ 143 ॥

ನೋಡಿಕೊಂಡೈತಪ್ಪುದರ್ತಿಯನೊಂದನು ।
ಬೇಡವಿಂದದಕೆ ಸಂಶಯವು ॥
ಕೂಡೆ ಬಂಡಿಯೊಳು ಪಾಲ್ಮೊಸರ ಸನ್ನಹವನ್ನು ।
ಮಾಡಲೆಂದೆನುತ ಪೇಳಿದರು ॥ 144 ॥

ಎಂದ ಮಾತನು ಕೇಳ್ದ ನಂದಗೋಪನು ಚಿಂತೆ ।
ಯಿಂದ ರಾಮಾಚ್ಯುತರೊಡನೆ ॥
ಹಿಂದುಮುಂದರಿಯದೆ ಕಂದರೆಂದೆಂಬಂಥ ನಿ ।
ರ್ಬಂಧದಿ ಸಿಲುಕಿ ಪೇಳಿದನು ॥ 145 ॥

॥ ತೋಡಿ – ಅಷ್ಟ ॥

ಬೇಡವೈ ಸುತರಿರ ಕಂಸನ ಸುದ್ದಿಯ ।
ನಾಡಲಂಜುವೆನು ನಾನು ॥
ಕೇಡನನ್ಯರಿಗೆ ಹಾರೈಸುವಾತನು ಸರಿ ।
ಗೂಡದು ನಮಗೆಂದನು ॥ 146 ॥

ಯಾತಕೀ ಸ್ವಲ್ಪಮಾತನು ದೊಡ್ಡಿತೆಂದು ವಿ ।
ಖ್ಯಾತವಗೈವೆ ತಂದೆ ॥

ಆತನೆ ನಮ್ಮ ಭಾಳದಿ ಬರೆದವನುಯೆಂ ।
ದಾ ತರಳರು ಪೇಳ್ದರು ॥ 147 ॥

ಏನಾದಡಿದು ನೀವು ಪೋಪುದು ಮತವಲ್ಲ ।
ಸೂನುಗಳಿರ ಕಂಡಿರೆ ॥
ಈ ನವನೀತ ಮುಂತಾದ ವಸ್ತುವನಾತ ।
ಗಾನೀಯ ಪೋಪೆನೆಂದ ॥ 148 ॥

ತಂದೆ ನೀ ಮುಂದಾಗಿ ಪೋದರೆ ನಿನ್ನಯ ।
ಹಿಂದೆ ನಾವ್ಯೆತಹೆವು ॥
ಇಂದೆಮ್ಮ ಮೇಲಿಷ್ಟು ದಯವನು ಮಾಡುವು ।
ದೆಂದರು ಬಲ ಕೃಷ್ಣರು ॥ 149 ॥

॥ **ಶಂಕರಾಭರಣ – ತ್ರಿವುಡೆ** ॥

ಹಲವು ಪರಿಯಲಿ ನಂದಗೋಪನ ।
ನೊಲಿಸಿ ಬಲ ಕೇಶವರು ಗಮನವ ।
ನಲಿವಿನಿಂ ನಿಶ್ಚೈಸಲಂದಾ ।
ಹೊಳಲ ಜನರು ॥ 150 ॥

ಮಧುರೆಗಚ್ಯುತ ಪೋಪನಂತತಿ ।
ವಿದಿತ ವೈಭವದಿಂದ ಸಂಗಡ ।
ಮುದದಿ ನಾವೆಲ್ಲವರು ಪೋಗುವ ।
ದಿದುವೆ ಸಿದ್ಧ ॥ 151 ॥

ತರಣಿ ಯಾತಕೆ ಪೂರ್ವಗಿರಿಗೈ ।
ತರನು ಮುನಿಸೆಮ್ಮೊಡನಿದೇನೆಂ ।
ದೊರೆವುತಿರ್ದುದು ಗೋಪಜನತತಿ ।
ತರಹರದೊಳು । । 152 ॥

॥ **ಕಂದಪದ್ಯ** ॥

ಈ ಪರಿಯಿಂದವರಿರೆ ಸಂ ।
ತಾಪದೊಳಂ ನಾರಿಯೊರ್ವಳಿದನರಿದಾಗಳ್ ॥

ಆ ಪುರವಳಯದೊಳಿರುತಿಹ ।
ಗೋಪಾಂಗನೆಯರ್ಗೆ ಬಂದು ಭರದಿಂ ಪೇಳ್ದಳ್ ॥ 153 ॥

॥ ಯದುಕುಲಕಾಂಭೋದಿ – ಅಷ್ಟ ॥

ಏಳಿ ಹೆಂಗಳಿರಾ । ಬಂದೆಡರನ್ನು ।
ಕೇಳಿ ಹೆಂಗಳಿರಾ ॥ ಪ ॥

ನಂದನ ನಿಳೆಯಕಿಂದು । ಕಂಸನ ಬೆಸ ।
ಸಿಂದಲಕ್ರೂರನೆಂದು ॥
ಬಂದಿಹನೊರ್ವ ಯಾದವನು ತಾಳಾಂಕ ಮು ।
ಕುಂದರ ಕರೆವುದಕ್ಕೆ ॥ ನೋಳ್ಪಿರಿದೇಕೆ ॥ 154 ॥

ಆರು ಗತಿಯೆಮಗೆ । ಶ್ರೀಧವನು ಕ ।
ಣ್ಣಾರೆಯಿಂತಗಲಿ ಪೋಗೆ ॥
ಮಾರನು ಖಾತಿಗೊಂಡಲರಂಬಿನಿಂದೆಮ್ಮ ।
ನಾರೈದೆಸುವನಲಾ ॥ ನಿಂದಿರದೆಲ್ಲಾ ॥ 155 ॥

॥ ಭಾಮಿನಿ ॥

ಎಂದ ನುಡಿಯನು ಕೇಳುತಾ ಸ್ತ್ರೀ ।
ವೃಂದ ಹಾಯೆನುತ್ತೈದೆ ಧರೆಯಲಿ ।
ಸಂದ ಪುಣ್ಯದ ತಾರೆಗಳು ನಭದಿಂದ ಬೀಳ್ವಂತೆ ॥
ನೊಂದು ಹುಡಿಯಲಿ ಬಿದ್ದುಹೊರಳುತ ।
ಕಂದಿಯುಡೆಮುಡಿ ಸಡಲಿ ಬಹುಪರಿ ।
ಯಿಂದ ಹರಿ ವಿರಹಾರ್ತೆಯರು ಮೊರೆಯಿಟ್ಟರೋರಣೆಸಿ ॥ 156 ॥

॥ ನೀಲಾಂಬರಿ – ರೂಪಕ ॥

ಎಂತು ಸೈರಿಸುವೆವಿ । ನ್ನಿಂಥಾ ಸ್ನೇಹದೊಳಿರ಼್ ।
ಕಾಂತನನುಳಿದು ನಿ । ಶ್ಚಿಂತೆಯ ತಳೆದು ॥ ಪ ॥

ಪೋದರೆ ಪುನರಪಿ ಬಹನೆನಲಲ್ಲಿಹ ।
ಕಾದಲೆಯರ ವಿಲಾಸವ ನೆರೆ ಕಂಡು ॥
ಆದರಿಸನು ಬಳಿಕೆಮ್ಮನು ಹಳ್ಳಿಯ ।
ಹಾದರರದ್ದೆಂಗಳೆಂದನುತ ನಿಶ್ಚೈಸಿ ॥ 157 ॥

ಒಂದರೆಘಳಿಗೆ ಕೃಷ್ಣನ ಕಾಣದಿರಲಾಗಿ ।
ಬೆಂದಪೆವತಿವಿರಹಾಗ್ನಿ ತಾಪದಲಿ ॥
ಇಂದೆಮ್ಮನಗಲಿ ಕಂಸನ ಬಳಿಯಿಂದಲ್ಲೈ ।
ತಂದವನೊಡನೆ ಪೋಪನಲಾ ನಾಳಿನಲಿ ॥ 158 ॥

ಆರೀತನಕ್ರೂರನೆಂಬರೊ ನಮ್ಮ ಶ ।
ರೀರ ಮಾತ್ರವ ಬಿಟ್ಟುಕೊಂಡು ಜೀವವನು ॥
ಹಾರದೊಯ್ವಂಥ ಪಾತಕಿ ಕ್ರೂರನಲ್ಲವೆ ।
ಈ ರೀತಿ ಪೇಳೆ ಲೋಕಕೆ ಸರಿಬಹುದೆ ॥ 159 ॥

॥ **ಭಾಮಿನಿ** ॥

ಹಾ ವಿಧಿಯೆ ನೀನೆಮ್ಮ ಫಣೆಯೊಳ ।
ಗೀ ವಿಧದಿ ಬರೆದೈ ವೃಥಾ ರಾ ।
ಜೀವನೇತ್ರನನಗಲಿಸೀ ಹಾಳೂರೊಳಿಹುದೆಂತು ॥
ಏವೆನಿನ್ನಿದಕಕಟಕಟೆನು ।
ತ್ತಾ ವಧೂನಿಕುರುಂಬವೇಕೋ ।
ಭಾವದಲಿ ಚಿಂತಿಸುತಲಿರ್ದುದು ಮುನಿಗಳಂದದಲಿ ॥ 160 ॥

ಜನಪ ಕೇಳಿಂತಧಿಕ ದುಃಖದಿ ।
ವನಿತೆಯರು ಹಲುಬುತ್ತಿಲಿರುತಿರ ।
ಲನಿತರೊಳು ಬಿಸಿಗದಿರನುದಯಾಚಲಕೆ ನಡೆತಂದ ॥
ದನುಜಹರ ಬಲರಿತ್ತ ಗಮನವ ।
ನೆನೆದು ನಂದಾದ್ಯಖಿಳ ಗೋಪರ ।
ಗಣವೆರಸಿ ಪೊರಮಡುತಲಿರ್ದರು ನಂದಗೋಕುಲವ ॥ 161 ॥

॥ **ಕಂದಪದ್ಯ** ॥

ತರಳರ್ ಪೋಗುವರೆಂಬುದ ।
ನರಿದಾ ರೋಹಿಣಿ ಯಶೋದೆಯರ್ ದುಗುಡದೊಳಂ ॥
ಕರಗುತ ಮನದೊಳ್ ಹರಿ ಬಲ ।
ರಿರುವೆಡೆಗೈತಂದು ನಿಂದು ಭರದಿಂ ಪೇಳ್ದರ್ ॥ 162 ॥

॥ ನೀಲಾಂಬರಿ – ಏಕ ॥

ಹಾ ಪುಣ್ಯಶೀಲಯುತರಿರಾ । ಎಮ್ಮನು ಬಿಟ್ಟು ।
ಪೋಪಿರೆಲ್ಲಿಗೆ ಸುತರಿರಾ ॥
ಈ ಪಾಟಿ ನಿಮ್ಮನಗಲಿ । ಘಳಿಗೆ ಜೀವಿಸ ।
ಲಾಪೆವೆ ತಿಳಿದು ಪೇಳಿ ॥ 163 ॥

॥ ನೀಲಾಂಬರಿ – ಮಟ್ಟೆ ॥

ಮಾತೆಯರಿರ ನೀ । ವಳಲಲೇಕೆ ಭೂ ।
ನಾಥ ಕಂಸನು । ಬಿಲ್ಲಹಬ್ಬಕೆ ।
ವ್ರೋತು ಕರೆಯಲ । ಟ್ಟಿರ್ದ ಕಾರಣ ।
ಪ್ರೀತಿಯಿಂದಲಿ । ಪೋಗಿಬರುವೆವು ॥ 164 ॥

॥ ನೀಲಾಂಬರಿ – ಏಕ ॥

ಉಳಿದ ಯಾದವರಂದದ । ಮತಿಯವನಲ್ಲ ।
ಖಳ ಕಂಸನಧಿಕವಾದ ॥
ಕಲಹಿಗನೆಂಬುದನು । ಕೇಳಿಬಲ್ಲೆವು ।
ನಿಲಿಸಿರೈ ಗಮನವನು ॥ 165 ॥

॥ ನೀಲಾಂಬರಿ – ಮಟ್ಟೆ ॥

ಸಿಂಗವಾನೆಗೆ । ಬೆದರಿನಡೆವುದೆ । ಸಾ ।
ರಂಗಕಂಜಿ ಪೆ । ರ್ಬುಲಿಯು ಬಿಡುವುದೆ ।
ಕಂಗೆಡುವೆವೆ ನಾ । ವವನ ಕಲಹಕೆ ।
ಭಂಗಗೈವಿರೇ । ಕೆಮ್ಮ ಗಮನಕೆ ॥ 166 ॥

॥ ನೀಲಾಂಬರಿ – ಏಕ ॥

ಹಸಿವು ತೃಷೆಗಳಿಂದ । ಮಾರ್ಗದಿ ಬಿರು ।
ಬಿಸಿಲಿನ ಬೇಗೆಯಿಂದ ॥
ಶಿಶುಗಳಿರ ನೀವು ದಣಿದರೆ । ನಮ್ಮಂತೆ ರ ।
ಕ್ಷಿಸುವವರುಂಟೆ ಬೇರೆ ॥ 167 ॥

॥ ನೀಲಾಂಬರಿ – ಮಟ್ಟೆ ॥

ತಾಯಿಗಳಿರ ನೀ । ವೇತಕೀ ಪರಿ ।
ಬಾಯಿಬಿಡುತಲೆ । ಮ್ಮೊಡನೆ ಪೇಳ್ವಿರಿ ।
ಈ ಯದೂತ್ತಮ– । ಕ್ರೂರನಿರಲಿಕೆ ।
ಕಾಯ ರಕ್ಷೆಗಿ– । ನ್ನನ್ಯರೇತಕೆ ॥ 168 ॥

॥ ಭೈರವಿ – ತ್ರಿವುಡೆ ॥

ಎಂದು ಮಾತೆಯರೊಡಬಡಿಸಿ ನಲ ।
ವಿಂದಲವರೊಳು ಪರಕೆಗೊಂಡು ಮು ।
ಕುಂದ ಸಂಕರುಷಣರು ಬಳಿಕಾ ।
ಗಾಂಧಿನೀ ತನುಜಾತನುತ್ತಮ ।
ಸ್ಯಂದನವನೇರ್ದಧಿಕ ವಿಭವದಿ ।
ನಂದಗೋಪಾದ್ಯಖಿಳ ಗೋಪರ ।
ವೃಂದಸಹಿತಾನಂದದೊಳಗಾ ।
ನಂದಗೋಕುಲದಿಂದ ಪೊರಟುದ ।
ನೇನನೆಂಬೇ । ನಾನಿ । ನ್ನೇನನೆಂಬೇ ॥ 169 ॥

ವಾರಣ ಮಹೀಧರದ ಘೋಟಕ ।
ವಾರಕಲ್ಲೋಲದ ಚಮರ ವೈ ।
ಸಾರಣದ ಸಿತಪತ್ರ ಫೇನದ ।
ಭೂರಿ ಕಳಕಳರವದ ಸಕಲರ ।
ಚಾರುಮಣಿ ಗಣಭೂಷಣದ ಬಲ ।
ನೀರಜಾಕ್ಷರ ಪರಿಜನೌಘದ ।
ವಾರಿನಿಧಿದೆಸೆದಪ್ಪಿಯೊಂದೇ ।
ಬಾರಿ ಬಹುದೆಂಬಂತೆ ಬರುವುದ ।
ನೇನನೆಂಬೇ । ನಾನಿ । ನ್ನೇನನೆಂಬೇ ॥ 170 ॥

॥ ವಾರ್ಧಕ ॥

ಈ ಪರಿಯ ವಿಭದಿಂ ಪೊರಟು ಮಗುಳಾ ನಂದ ।
ಗೋಪಂ ಬಲಾಚ್ಯುತಕ್ರೂರರಂ ಪಿಂದುಳಿದು ।
ಸೂಪಾಯನವ ಕೊಂಡು ಸಕಲ ಗೋವಳಜನರ್ ಸಹಮುಂದೆ ಸಾಗಲಿತ್ತ ॥

ಗೋಪಿಕಾಂಗನೆಯರೊಂದಾಗಿ ಸರ್ವೇಶ್ವರರ್ ।
ಪೋಪ ರಥವೀಥಿಯೊಳಗಡ್ಡೈಸಿ ನಿಲಲವರಿ ।
ಗಾಪ ತೆರನಂ ಪೇಳ್ದು ಕುಸ್ತರಿಸಿ ಬಳಿಕ ಕಾಳಿಂದಿಗವರೈತಂದರು ॥ 171 ॥

ಥರವಿಡಿದು ಬರುವ ಸುತರಂಗದಿಂ ಸಾಂಗದಿಂ ।
ಚರಿಸುತಿಹ ಮತ್ಸ್ಯಸಂದೋಹದಿಂ ಗ್ರಾಹದಿಂ ।
ಪರಿಪೂತೆ ತಾನೆಂಬ ಪೆಂಪಿನಿಂ ತಂಪಿನಿಂ ವಿವಿಧಜಲಚರಗಳಿಂದ ॥
ಪರಿಮಳಿತ ಕುಸುಮ ಫಲಭಾರದಿಂ ಕೀರದಿಂ ।
ಮೆರೆವ ನಾನಾವಿಧದ ತರುಗಳಿಂ ಹರಿಗಳಿಂ ।
ಪರಿಶೋಭಿಪುಭಯಪ್ರತೀರದಿಂ ಸ್ವೈರದಿಂದಿಹ ರವಿಜೆಯಂ ಕಂಡರು ॥ 172 ॥

॥ **ಭಾಮಿನಿ** ॥

ಇಂತೆಸವ ಯಮುನಾ ನದಿಯ ನಿ ।
ಶ್ಚಿಂತೆಯಿಂದುತ್ತರಿಸಿ ಬಳಿಕಾ ।
ಕಂತುಪಿತ ಬಲಭದ್ರರೊಡನಕ್ರೂರನಿಂತೆಂದ ॥
ಸಂತಸದಿ ಮಧ್ಯಾಹ್ನಿಕವ ಗೈ ।
ದಂತೆ ಬಹೆನೀ ನದಿಯೊಳನಕ ದು ।
ರಂತವಿಕ್ರಮರಿಹುದು ನೀವೀ ರಥದೊಳೆಂದೆನುತ ॥ 173 ॥

॥ **ಕಾಂಭೋದಿ – ಝಂಪೆ** ॥

ಎಲೆ ನೃಪಾಗ್ರಣಿ ಲಾಲಿಸಕ್ರೂರನಿಂತು ಹರಿ ।
ಬಲರೊಳಪ್ಪಣೆಗೊಂಡು ಬಂದು ॥
ಇಳಿದು ಜಲಮಧ್ಯದಲಿ ಮುಳುಗೆ ಕಂಡನು ರಾಮ ।
ಜಲಜನೇತ್ರರನು ಬಳಿಕಂದು ॥ 174 ॥

ಇತ್ತಲೀ ಜಲದೊಳಗೆ ಬಂದಿರೇನೆನುತೇಳ ।
ಲುತ್ತಮಶ್ಲೋಕರಾ ರಥದಿ ॥
ವರ್ತಿಸುತ್ತಿರೆ ಕಂಡು ಬಯಲವಿಭ್ರಮೆಯಂದು ।
ಮತ್ತೆ ಮುಳುಗಿದನಾ ನದಿಯಲಿ ॥ 175 ॥

ತಿರುಗಿ ಜಲದೊಳು ಬಲಾಚ್ಯುತರನೀಕ್ಷಿಸುತ ಹರ ।
ಹರ ಮಹದೇವಿದೇನೆಂದು ॥
ಭರದಿಂದಲೆದ್ದು ಪುಣ್ಯೋದಯರ ಮಿಗೆ ಕಂಡು ।
ಬೆರಗಾದನಕ್ರೂರನಂದು ॥ 176 ॥

ಇದನರಿವೆನಿನ್ನೊಂದು ಬಾರಿ ತಾನೆನುತಲಾ ।
ಹ್ರದದೊಳಗೆ ಮುಳುಗಿ ನೋಡಿದನು ॥
ಪದುಮಸಖ ಕೋಟಿಪ್ರಕಾಶದಿಂದಹಿಪತಿಯ ।
ಮೃದುವಾಸಿಲೊರಗಿದಚ್ಯುತನ ॥ 177 ॥

ಸುಳಿಗುರುಳ ಪೆರೆನೊಸಲ ಹೊಳೆವ ಕಂಗಳ ಸೂಸು ।
ವೆಳೆ ನಗೆಮೊಗದ ಕಂಬುಗಳದ ॥
ನಳಿನ ಗದೆ ಶಂಖಚಕ್ರಗಳಿಂದಲೊಪ್ಪುವ ಸು ।
ಲಲಿತವರ ಕರಚತುಷ್ಟಯದ ॥ 178 ॥

ರಾರಾಜಿಸುವ ಸುಪೀತಾಂಬರದ ನಾಗನಾ ।
ಸೋರುಹದ ಜಾನು ಜಂಘೆಗಳ ॥
ಚಾರು ಪದಯುಗದ ಮುನಿಹೃದಯವಿಷ್ಟರದ ದೈ ।
ತ್ಯಾರಿಯನು ಕಂಡನಕ್ರೂರ ॥ 179 ॥

ವಾರಿಜಾಸನ ಪುರಂದರ ಮುಖ್ಯ ಪರಿಜನದ ।
ನಾರದಾದ್ಯಖಿಳಮುನಿಗಣದ ॥
ಭೂರಿ ಮಾಯಾಶಕ್ತಿಗಳ ಮೇಳದಿಂದೆಸೆವ ।
ನಾರಾಯಣನ ಕಂಡನವನು ॥ 180 ॥

ಅತುಳವಿಭವದೊಳಿಂತು ಪರಿಶೋಭಿಸುವ ರಮಾ ।
ಪತಿಯ ರೂಪವನು ಮಿಗೆ ಕಂಡು ॥
ನತನಾಗಿ ಪರಮಭಕುತಿಯಲಿ ಜಯ ಜಯಯೆನುತ ।
ನುತಿಗೈದನಕ್ರೂರನಂದು ॥ 181 ॥

॥ **ವಾರ್ಧಕ** ॥

ಜಯ ಜಯ ರಮಾಕಾಂತ ರಕ್ಷೋಗಣಕೃತಾಂತ ।
ಜಯ ಕಮಲದಳನೇತ್ರ ಕಾಮಾರಿಮಿತ್ರ ಜಯ ।
ಜಯ ಪಂಚಶರತಾತ ಪಕ್ಷಿರಾಜ ವರೂಥ ಜಯ ಪಾಪತಿಮಿರ ದೀಪ ॥
ಜಯ ಜಯ ಸದಾಶಾಂತ ಸದ್ ಹೃದಾಬ್ಜ ನಿಶಾಂತ ।
ಜಯ ಶರಣ ಜನಪಾಲ ಶಾತಕುಂಭಸುಚೇಲ
ಜಯ ಜಯ ಸುರಾಧೀಶ ಸೂರ್ಯಶತಸಂಕಾಶ ಜಯ
ನಮೋಯೆನುತೀರ್ದನು ॥ 182 ॥

॥ **ಭಾಮಿನಿ** ॥

ಎಂದು ವಿವಿಧ ಮನೋಜ್ಞಸೂಕ್ತಿಗ ।
ಳಿಂದ ಸಂಸ್ತುತಿಸುತ್ತ ಚರಣ ।
ದ್ವಂದ್ವದಲಿ ತಲೆವಾಗಿ ಸುರಿವಾನಂದಬಾಷ್ಪದಲಿ ॥
ಗಾಂಧಿನೀತನುಜಾತನಿರುತಿರೆ ।
ಮುಂದೆ ತೋರ್ಪ ಮುಕುಂದನಾಕೃತಿ ।
ಸಂದುದಂತರ್ಧಾನಗತಿಗೆಲೆ ಭೂಪ ಕೇಳೆಂದ ॥ 183 ॥

॥ **ಕಂದಪದ್ಯ** ॥

ಮೀರ್ದಾ ಜಲಮಂ ಮಿಗೆ ಸಂ ।
ಹಾರ್ದದೊಳುಂ ರಚಿಸಿ ನಿತ್ಯವಿಧಿಯಂ ರಥಮಂ ।
ಸಾರ್ದಡಿಗಂ ವಂದಿಸಿ ನಿಂ ।
ದೀರ್ದಕ್ರೂರಾಂಶನೊಡನೆ ಹರಿ ನಗುತೆಂದಂ ॥ 184 ॥

॥ **ಘಂಟಾರವ – ಏಕ** ॥

ಬಾರಯ್ಯ ನೀನೇತಕಿಂತು । ಭೂರಿ ಸಂಶಯವನಾಂತು ।
ದೂರದಿ ನಿಂತಿರುವಂಥ । ಕಾರಣವೇನು ॥
ನೀರೊಳೀಕ್ಷಿಸಿದೆಯಲ್ಲಾ । ಧೀರ ನಾನಿರದ ಸ್ಥಳವು ।
ಬೇರೀರ್ದಡುಸುರೆಂದನು । ವಾರಿಜಾಂಬಕನು ॥ 185 ॥

ಸುತ್ತಲೆಲ್ಲಾ ನೀನಿರ್ದು । ಇತ್ತ ಬಾರೆಂಬ ನುಡಿಗಿ ।
ನ್ನೆತ್ತಲೈದುವೆನು ಸ । ರ್ವೋತ್ತಮ ಹರಿಯೇ ॥
ಸ್ವಸ್ತಿ ನಿನ್ನಯ ಮಾಯಾ । ಮತ್ತಕಾಶಿನಿಗೆಂದು ।
ನೆತ್ತಿಯೊಳ್ಮುಡಿದೆನು । ಹಸ್ತದಂಜಲಿಯ ॥ 186 ॥

ನುಡಿದ ಮಾತಿಗೆ ಮೆಚ್ಚಿ । ಪಿಡಿದೆತ್ತಿ ರಥದಿ ಸಂ ।
ಗಡ ಕುಳ್ಳಿರಿಸಿಕೊಂಡು । ಕಡುತವಕದಲಿ ॥
ತಡವರಿಸುತ ಮೆಯ್ಯ । ನಡೆಸೈ ಪೊಂದೇರನೆಂದು ।
ದೃಢಭಕ್ತನೊಳ್ ಪೇಳಿದನು । ಮೃಡನ ಬಾಂಧವನು ॥ 187 ॥

॥ **ವಾರ್ಧಕ** ॥

ಇಂದುವಂಶಲಲಾಮ ಲಾಲಿಸೀ ಪರಿಯೊಳಂ ।
ಗಾಂಧಿನೀತನಯನಂ ಸಂತೈಸಿ ಬಳಿಕಾತ ।
ನಿಂದ ರಥಮಂ ನಡೆಸುತದ್ರಿ ಬನ ಪುಣ್ಯತೀರ್ಥಾಶ್ರಮಂಗಳ ನೋಡುತ ॥
ಮುಂದೆ ಬರುಬರುತಮಲ್ಲಲ್ಲಿ ಕಾಣಿಕೆಗೊಂಡು ।
ನಿಂದಿಹ ಜನರ್ಗೆ ಕಾಣಿಸಿಕೊಳುತ ಹರಿ ಬಲರ್ ।
ಬಂದರತಿ ವೇಗದಿಂ ಪರಮ ವೈಭವದೊಳಿಹ ಮಧುರಾಪುರಾಂತಿಕಕ್ಕೆ ॥ 188 ॥

ಅತ್ತ ನಂದಾದಿ ಗೋವಳರನ್ನೆಗಂ ರಾಮ ।
ದೈತ್ಯಮಥನಕ್ರೂರರೈತಪ್ಪ ಬರವ ಹಾ ।
ರುತ್ತಮಾ ಪುರದ ಬಾಹ್ಯೋಪವನದೊಳ್ ಬೀಡಿಕೆಯ ಬಿಟ್ಟು ಕುಳ್ಳಿರಲ್ಕೆ ॥
ಇತ್ತೀ ವರೂಥದೊಳ್ ಮೂವರೊಂದಾಗಿ ನೋ ।
ಡುತ್ತಮತಿಸಂತೋಷದಿಂದಲೈದಿದರಕ್ಷಿ ।
ಚಿತ್ತಮಂ ಸೂರೆಗೊಂಬನಿತು ಸೊಬಗಿಂದಲಿಹ ಮಧುರಾಪುರಾಂತಿಕಕ್ಕೆ ॥ 189 ॥

ಪಂಚಮಸ್ವರದ ಕೋಗಿಲೆಗಳಿಂ ಕಲೆಗಳಿಂ ।
ಸಂಚರಿಪ ಬಾಲಾಳಿಕುಳಗಳಿಂ ಗಿಳಿಗಳಿಂ ।
ವಂಚಿಸದೆ ನರ್ತಿಪ ನವಿಲ್ಗಳಿಂ ಸಾಲ್ಗಳಿಂದೊಪ್ಪಿರ್ದ ಮೃಗಗಳಿಂದ ॥
ಗೊಂಚಲೆರಗಿಸಿದ ಪೂಮಿಡಿಗಳಿಂ ಕುಡಿಗಳಿಂ ।
ಮಿಂಚುವೆಳೆದಳಿರಿಡಿದ ಮರಗಳಿಂ ಥರಗಳಿಂ ।
ದಂಚೆವಿಂಡಾಡುತಿಹ ಕೊಳಮೆಸೆವತಳಗಳಿಂದಾವನಂ ಕಂಗೊಳಿಸಿತು ॥ 190 ॥

॥ **ಕಂದಪದ್ಯ** ॥

ಇಂತೊಪ್ಪುವ ಬನಕಂ ಬಂ ।
ದಂತಃಕರಣದೊಳುಮ್ಮೆದೆ ಬಳಿಕಬ್ಜದೃಶಂ ॥
ತಾಂ ತಳುವದೆ ನಿಜಭಕ್ತನೊ ।
ಳಂ ತವೆ ಹರುಷದೊಳಂ ಪೇಳಿದ ನಮ್ರತೆಯಿಂ ॥ 191 ॥

॥ **ಕಕ್ಕುಭ – ಏಕ** ॥

ಗಾಂಧಿನಿಯಣುಗ ಕೇಳೀ ।
ನಂದನದೊಳಗುಳಿ ।
ದಿಂದಿನ ರಾತ್ರಿಯ ।
ಹಿಂದುಗಳೆದು ಸುಪ್ರೀಯ ॥ 192 ॥

ಬಹೆವೈ ಸರ್ವಗೋಪಾಲರ್ ।
ಸಹಿತ ನಾಳೆ ನಾವೀರ್ವರ್ ।
ಸಹಜ ಮಾತಿದು ಕಂಡಾ ।
ವಿಹಿತ ಕಾರ್ಯಪ್ರಚಂಡ ॥ 193 ॥

ಪೋಗು ನೀ ನಿನ್ನ ಮನೆಗೆ ।
ಬೇಗೆಗೊಳ್ಳದೆ ಬೇಗೆಂ ।
ದಾ ಗರುಡವಾಹನನು ।
ಭಾಗವತನೊಳ್ ಪೇಳಿದನು ॥ 194 ॥

ಕೇಳುತಕ್ರೂರನಾಗ ।
ತಾಳಿ ಚಿಂತೆಯನು ಶ್ರೀಗೋ ।
ಪಾಲನ ನುಡಿಗುತ್ತರವ ।
ಪೇಳಿದನೆರಗಿ ಶಿರವ ॥ 195 ॥

॥ **ಪಂಚಘಾತ – ಮಟ್ಟೆ** ॥

ಹೇ ಪುರಾಣ ಪುರುಷ ನಾ ।
ಪೋಪೆ ಬಿಟ್ಟದೆಂತು ನಿನ್ನ ।
ಶ್ರೀಪದಾಬ್ಜ ಸನ್ನಿಧಿಯನು ।
ಗೋಪವರ್ಯನೆ ॥ 196 ॥

ನೀಡಿ ಕರವನೆನ್ನ ಗೃಹದಿ ।
ಬೀಡಿಕೆಯನು ಬಿಡಲು ದಯವ ।
ಮಾಡು ಚಿತ್ತವಿಸುವುದೆಂದು ।
ಬೇಡಿಕೊಂಬೆನು ॥ 197 ॥

ನಿನ್ನ ಚರಣತೀರ್ಥದಿಂದ ।
ಧನ್ಯರಾಗಲೆನ್ನವರ್ಗ ।
ಇನ್ನು ಪೇಳ್ವುದೇನು ಬಾಯ ।
ಬನ್ನಣೆಯನು ॥ 198 ॥

ಎಂದು ಬಿನ್ನಪವನು ಗೈದಾ ।
ಗಾಂಧಿನೀಕುಮಾರನೊಡನೆ ।
ನಂದಗೋಪಸುತನು ಕರುಣ ।
ದಿಂದ ನುಡಿದನು ॥ 199 ॥

॥ **ಕೇದಾರಗೌಳ – ಝಂಪೆ** ॥

ಕೇಳು ಯದುವರನೆ ನೀನು । ಮನದೊಳಗೆ ।
ತಾಳದಿರು ಸಂಶಯವನು ॥
ಈ ಲೋಕಕಂಟಕನನು । ದಂಡಧರ ।
ನಾಲಯಕೆ ಕಳುಹಿ ನಾನು ॥ 200 ॥

ಬಹೆ ನಿನ್ನ ಮನೆಗೆ ಮುದದಿ । ಪರಿವಾರ ।
ಸಹಿತಲಿ ನಿರಾಲಸ್ಯದಿ ॥
ವಿಹಿತವೈ ನೀ ಪೇಳ್ದುದು । ಶರಣುಗಳ ।
ಗೃಹದೊಳಾರೋಗಿಸುವುದು ॥ 201 ॥

ಎಂದು ಬೀಳ್ಕೊಟ್ಟವನನು । ರಥವನಿಳಿ ।
ದಂದು ಬಲ ಸಹ ಕೃಷ್ಣನು ॥
ಬಂದು ಪರಮೋತ್ಸವದೊಳು । ನಲವಿಂದ ।
ನಿಂದನಾ ಬೀಡಿಕೆಯೊಳು ॥ 202 ॥

॥ **ಭಾಮಿನಿ** ॥

ಕೇಳು ಭೂಭುಜ ಕುಲಲಲಾಮನೆ ।
ಗಾಳಿಗೂಳನ ಪಕ್ಕೆಯಾತನು ।
ಬೀಳುಗೊಡಲಕ್ರೂರ ಬಳಿಕೇರ್ದಾ ವರೂಥವನು ॥
ತಾಳಿಮನದಲಿ ಚಿಂತೆಯನು ರಾ ।
ಜಾಲಯಕೆ ನಡೆತಂದು ಕಂಡಾ ।
ಖೂಳ ಕಂಸನೊಳಖಿಳ ವೃತ್ತಾಂತವನು ಪೇಳಿದನು ॥ 203 ॥

॥ **ಕಲ್ಯಾಣಿ – ಅಷ್ಟ** ॥

ಲಾಲಿಸು ಕಂಸ ಭೂಪ । ಸತ್ಕುಲದೀಪ ।
ಲಾಲಿಸು ಕಂಸ ಭೂಪ ॥ ಪ ॥

ನೀ ಕಳುಹಿಸೆಲೆನ್ನನು । ರಾಜಿಪ ನಂದ ।
ಗೋಕುಲ ಗ್ರಾಮಕಾನು ॥
ಜೋಕೆಯಿಂದಲಿ ಪೋಗಿ । ಪಾಕರೂಪವನಾಂತ ।
ಶ್ರೀಕೃಷ್ಣ ಬಲರ ವಿ । ವೇಕದಿ ಕರೆತಂದೆ ॥ 204 ॥

ನಂದನನೊಡಗೊಂಡು । ಗೋಪಾಲರ ।
ವೃಂದವ ಕೂಡಿಕೊಂಡು ॥
ಬಂದು ಬಾಹ್ಯದಿ ತೋರ್ಪ । ನಂದನದಲಿ ಬಿಟ್ಟ ।
ರಿಂದು ಬೀಡಿಕೆಯ ವಾ । ನಂದದಿಂದಲಿ ಜೀಯ ॥ 205 ॥

ಕಳೆದಿಂದಿನಿರುಳನಲ್ಲಿ । ನಾಳಿನ ದಿನ ।
ದಲಿ ಬಹೆವೆನೆನುತ ಪೇಳಿ ॥
ನಳಿನಾಕ್ಷನೆನ್ನನು । ನಿಳಯಕೆ ಪೋಗೆಂದು ।
ಕಳುಹಿಸಲಲ್ಲಿಂದ । ತಳುವದಾನೈತಂದೆ ॥ 206 ॥

॥ **ಭೈರವಿ – ಝಂಪೆ** ॥

ಎಂದಖಿಳ ವೃತ್ತಾಂತ । ಮಂ ಧರಣಿಪತಿಗುಸುರಿ ।
ಬಂದನಾಲಯಕಾಗಿ । ಗಾಂಧಿನೀಸುತನು ॥ 207 ॥

ಉಪವನದೊಳಿತ್ತ ಕೋ । ಣಪವೈರಿ ಬಲಭದ್ರ ।
ರಪರಾಹ್ನಕಾಲದಲಿ । ಚಪಲತ್ವದಿಂದ ॥ 208 ॥

ಕೆಳೆಯರಾಗಿಹ ಗೋಪ । ರೆಳೆಯರನು ಕೂಡಿಕೊಂ ।
ಡಿಳೆಯಧೀಶ್ವರನಿಪ್ಪ । ಹೊಳಲೊಪ್ಪವನ್ನು ॥ 209 ॥

ನೋಡಬೇಕೆಂದೆನುತ । ಬೀಡಾರವನೆ ಪೊರಟು ।
ಕೂಡೆ ಮಧುರೆಗೆ ಬಂದ । ರಾಡುತಾಡುತ್ತ ॥ 210 ॥

ಚನ್ನಾಗಿ ತತ್ಪುರವ । ವರ್ಣಿಸುವೆನೆನಲು ಗೋ ।
ಕರ್ಣರಾಜನಿಗರಿಯ । ದಿನ್ನ್ಯಾರಿಗರಿವು ॥ 211 ॥

॥ ಕೇದಾರಗೌಳ – ಅಷ್ಟ ॥

ಸಾರಿಸಿ ನೆಲನ ಕಸ್ತೂರಿಯಿಂ ಮಾಂದಳಿರ್ ।
ತೋರಣವನು ರಚಿಸಿ ॥
ಮೇರುವೆ ಕುರುಜುಗಳಿಂದ ಮಾರ್ಗದಿ ಶೃಂ ।
ಗಾರವಾಗಿರೆ ಕಂಡರು ॥ 212 ॥

ಪಲಸು ನೇರಿಳೆ ಚೂತ ನ್ಯಗ್ರೋಧ ಮುಂತಾದ ।
ಹಲವು ವೃಕ್ಷಗಳಿಂದ ॥
ನೆಳಲಾದ ಬಟ್ಟೆಯೊಳೆಳೆವೆಲರಿನ ತಂಪೊ ।
ಳೊಲವಿಂದಲೈತಂದರು ॥ 213 ॥

ಕೆರೆ ಬಾವಿ ಕಟ್ಟೆಕಾಲುವೆ ದ್ರವಗಲ್ಲಿಂದ ।
ಮೆರೆವ ಸೋಪಾನಗಳ ॥
ಅರವಟ್ಟಿಗೆ ಸತ್ರ ಶಾಲೆ ಮುಂತಾದುದ ।
ಬರುತ ಕಂಡರು ಪಥದಿ ॥ 214 ॥

ನಿರುತ ಕೂರ್ಮನ ಬೆನ್ನ ಬಳಸೀರ್ಪ ಶೇಷನ ।
ತೆರದೊಳಾ ನಗರವನು ॥
ಪರಿವೇಷ್ಟಿಸಿದ ಹೊಂಗೋಟೆಯನೀಕ್ಷಿಸಿ ।
ದರು ಬಲ ಕೇಶವರು ॥ 215 ॥

ರನ್ನದ ತೆನೆಯ ಪೇರ್ಮುಗಿಲಟ್ಟಳಿಗೆಯ ಸು ।
ವರ್ಣದ ಕೊತ್ತಳದ ॥
ಬಿನ್ನಣವನು ಕಾಣುತೊಳಪೊಕ್ಕರಾ ಪುರ ।
ವನ್ನು ಸಂಗಡಿಗರಿಂದ ॥ 216 ॥

॥ ಭಾಮಿನಿ ॥

ರಾಜವಂಶೋದ್ಭವನೆ ಕೇಳ್ಳೆ ।
ರಾಜಿಸುವ ತತ್ಪುರವನೊಳಪೊ ।
ಕ್ಕಾ ಜನಾರ್ದನ ಬಲರು ಕೆಳೆಯರ ಕೂಡಿ ವಿನಯದಲಿ ॥
ರಾಜಮಾರ್ಗಕೆ ಬರಲು ಪುರಜನ ।
ರಾಜಿಯಲಿ ಕಾಣಿಕೆಯ ನೀಡಿ ಸ ।
ರೋಜನಾಭನ ಕಂದಣಿಯಲೀಕ್ಷಿಸಿದರುತ್ಸಹದಿ ॥ 217 ॥

॥ ಕಂದಪದ್ಯ ॥

ಮತ್ತಾ ಹರಿ ಬಲರೈದಿದ ।
ವೃತ್ತಾಂತವನೀಕ್ಷಿಸುತ್ತಲಲ್ಲಿಹ ಹೆಂಗಳ್ ॥
ಎತ್ತಿದ ಕೈಗೆಲಸವನುಳಿ ।
ದರ್ತಿಯೊಳಲ್ಲಲ್ಲಿ ನೋಡಲೋಸುಗ ನೆರೆದರ್ ॥ 218 ॥

॥ ಕಾಪಿ – ಅಷ್ಟ ॥

ನೆರೆದರಾ ಪುರದ ನಾರಿಯರು । ಬಲ ।
ಮುರಮಥನರ ನೋಡಬೇಕೆನುತವರು ॥ ಪ ॥

ಮಿನುಗುವ ಮಣಿಮಾಡದೆಡೆಯೊಳ್ । ರತ್ನ ।
ಕನಕನಿರ್ಮಿತದ ಗವಾಕ್ಷದ ಕಡೆಯೊಳ್ ॥
ಮನಗೊಂಬ ಸ್ಫಟಿಕ ವೇದಿಕೆಯೊಳ್ । ಮನೆ ।
ಮನೆಯಂಗಣದ ಬಾಗಿಲ ಕೆಲಬಲದೊಳ್ ॥ 219 ॥

ಕುಂದಕುಟ್ಮಳರದನೆಯರು । ಚಾರು ।
ಚಂದಿರಮುಖಿಯರು ಕಮಲನೇತ್ರೆಯರು ॥
ಚಂದನಸದೃಶಗಂಧಿಯರು । ಇಂ ।
ದಿಂದೀವರಾಳಕಿಯರು ಹಂಸಯಾನೆಯರ್ ॥ 220 ॥

ಕಾಲಂದುಗೆಯನು ಕರದೊಳ್ । ಕೆಲ ।
ರೋಲೆಯ ಬೆರಳ್ಗಳೊಳ್ ಕಡಗವ ಕಿವಿಯೊಳ್ ॥
ಲೀಲೆಯೊಳಿಟ್ಟು ಚಚ್ಚರದೊಳ್ । ಶ್ರೀ ।
ಲೋಲನ ಮುಖಕಮಲವ ಕಾಂಬ ಭರದೊಳ್ ॥ 221 ॥

ಮನೆವಾರ್ತೆಯನ್ನುರೆ ಬಿಟ್ಟು । ಕೆಲ ।
ರುಣುತ ಕೇಳಲು ಕಬಳವ ಕೆಳಕಿಟ್ಟು ॥
ಮನದಿ ತೋಷವನಳವಟ್ಟು । ಹರಿ ।
ಗುಣವ ಪಾಡುತ್ತ ಬಾಗಿಲ ಪೊರಮಟ್ಟು ॥ 222 ॥

॥ **ಕಂದಪದ್ಯ** ॥

ಸೋಜಿಗವಟ್ಟಿಂತಾ ಪಂ ।
ಕೇಜಾಕ್ಷಿಯರೊಂದುಗೂಡಿ ಮೇಣತಿನಲವಿಂ ॥
ಮೂಜಗದೆರೆಯನ ಕಾಣುತ ।
ಮಾಜದೆ ತಮ್ಮೊಳಗೆ ಮಾತನಾಡುತ್ತಿರ್ದರ್ ॥ 223 ॥

॥ **ಶಂಕರಾಭರಣ – ತ್ರಿವುಡೆ** ॥

ಇವನೆ ಸಾಕ್ಷಾದ್ವಿಷ್ಣು ಗಡ ಸುರ ।
ನಿವಹವಿವನಿಗೆ ಭೃತ್ಯರು ॥
ಶಿವನ ಸಖನಿವನಕ್ಷಿಗಳೆ ವಿಧು ।
ರವಿಗಳಂತೆ ॥ 224 ॥

ದೇವಕಾರ್ಯವ ಮಾಡಲೋಸುಗ ।
ದೇವಕಿಯೊಳುರೆ ಜನಿಸಲು ॥
ಮಾವ ಕಂಸನ ಭೀತಿಯಲಿ ವಸು ।
ದೇವನಿವನ ॥ 225 ॥

ಭರದಿ ಗೋಕುಲಕ್ಕೈದಿರಿಸಲ ।
ಲ್ಲಿರುವ ನಂದಾಲಯದಲಿ ॥
ಸರಸದಿಂದಲಿ ಬೆಳೆದನಂತೀ ।
ಸರಸಿಜಾಕ್ಷ ॥ 226 ॥

ಈತನಿವನಗ್ರಜಗಡೀ ಧರ ।
ಣೀತಳವ[ನುರೆ] ಪೊತ್ತಿರುವ ಸಾ ।
ಕ್ಷಾತು ಶೇಷನೆ ರೋಹಿಣಿಗೆ ಸಂ ।
ಜಾತನಾದ ॥ 227 ॥

ಸಂಗಡಿಹ ಗೋಪಾಲರಿವರು ।
ತ್ತುಂಗ ಪುಣ್ಯೋದಯರು [ತಾವೆಂ] ।
ದಂಗನೆಯರೀಕ್ಷಿಸುತಲಿರ್ದರು ।
ಮುಂಗಡೆಯೊಳು ॥ 228 ॥

॥ **ಮಾರವಿ – ಏಕ** ॥

ಭೂಮಿಪ ಕೇಳಿಂತೊಪ್ಪುವ ವನಿತಾ ।
ಸ್ತೋಮವನೀಕ್ಷಿಸುತ ॥
ಪ್ರೇಮದಿ ಗೋಪಾಲರು ಸಹಿತೊಯ್ಯನೆ ।
ರಾಮ ಜನಾರ್ದನರು ॥ 229 ॥

ಬರುತಿರೆ ಮುಂದಾ ರಾಜಪಥದಿ ಕಂ ।
ಡರು ಕಂಸನೃಪಂಗೆ ॥
ಪರಿಪರಿಯುಡುಗೆಯ ಸಾಧಿಸಿಕೊಂಡೈ ।
ತರುತಿಹ ರಜಕನನು ॥ 230 ॥

ಬಿಂಕದಿ ಬಹ ನೀರ್ನೇಜಕನನು ಮೀ ।
ನಾಂಕ ಪಿತನು ಕಂಡು ॥
ಸಂಕಲ್ಪಿಸುವೆನು ಕಲಹಕ್ಕೆಂದನು ।
ಸಂಕರ್ಷಣನೊಡನೆ ॥ 231 ॥

॥ **ಕಂದಪದ್ಯ** ॥

ಜಲಜಾಂಬಕನೀ ಪರಿಯಿಂ ।
ಬಲಭದ್ರನೊಳೊಯ್ಯನುಸುರಿ ಮೇಲತಿ ನಲವಿಂ ॥
ಛಳೆಯದೊಳೈತಹ ರಜಕನ ।
ಬಲು ಗರ್ವವ ಕಂಡು ಮುನಿಸದಳೆದಿಂತೆಂದಂ ॥ 232 ॥

॥ ನಾದನಾಮಕ್ರಿಯೆ – ಅಷ್ಟ ॥

ಎಲ್ಲಿ ಪೋಪೆಯೊ ಮುಂದೆ ಕಿರುಕೂಳ । ನಿಲ್ಲು ।
ನಿಲ್ಲು ಮಾನವ ಜನರೊಳು ಖೂಳ ॥
ಬಲ್ಲಿದ ರಜಕನು ನೀನೆಂದು । ಕೇಳಿ ।
ಬಲ್ಲೆನು ಮೊದಲು ನೋಡಿದೆನಿಂದು ॥ 233 ॥

ಬಡವರು ನಾವಲ್ಲ ಕಂಡಿರೊ । ನಿ ।
ನ್ನೊಡೆಯ ಕಂಸನಿಗಳಿಯಂದಿರೊ ॥
ಉಡತಕ್ಕ ವಸನವ ನಮಗೀಗ । ಬೇಗ ।
ಕೊಡುವುದೆಂದೆನೆ ಪೇಳ್ದನವನಾಗ ॥ 234 ॥

ಅಡವಿಗಾರರಿಗುಡತಕ್ಕಂಥ । ಕ ।
ಪ್ಪಡವನೆನ್ನೊಳು ಕಾಣೆನೇಕಿಂಥ ॥
ಮಡಿಯನು ಕಾಂಕ್ಷಿಸಿ ಕೆಡುವಿರಿ । ಹಸು ।
ಹುಡುಗರಿರಾ ಕೆಟ್ಟು ನುಡಿವಿರಿ ॥ 235 ॥

ತುರುಗಳ ಕಾವ ಮಕ್ಕಳ ಕೂಡ । ಪೇಳ್ವ ।
ಗರುವದ ನುಡಿಯ ನೀವೆನ್ನೊಡ ॥
ನರುಹದಾ ಕಡೆ ಸಾರ್ವುದೆನುತಾಡ । ಲಗ ।
ಧರ ಕೋಪದಿಂದ ಪೇಳ್ದನು ಗಾಢ ॥ 236 ॥

ಗಳಹದಿರೆಲೊ ಮನಬಂದಂತೆ । ಮಡಿ ।
ವಳರೊಳತ್ಯಧಮನೆ ಮರುಳಂತೆ ॥
ಒಲಿದುಕೊಟ್ಟರೆ ಲೇಸು ಕೊಡದಿರೆ । ನಿನ್ನ ।
ತಲೆಯು ವಸ್ತ್ರವು ಸಹಿತೆಮ್ಮದೆ ॥ 237 ॥

ಎನಲಾ ಮಾತನು ಕೇಳ್ದು ರಜಕನು । ಮುನಿ ।
ಸನುದಾಳ್ದು ನುಡಿದನುತ್ತರವನು ॥
ಅನಿತು ನಿಮ್ಮೊಳು ಬಲುಹೀರ್ದರೆ । ದೀನ ।
ಮನುಜರಂದದಿ ಬೇಡಿಕೊಂಬಿರೆ ॥ 238 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಎಂದು ಜರೆದಾ ರಾಮಕೃಷ್ಣರ ।
ಮಂದಮತಿ ಮಡಿವಳನು ಕಾಲನ ।
ಮಂದಿರಕೆ ಪೋಪಂತೆ ನಡೆದನು ।
ಮುಂದೆ ಝಡಿದು ॥ 239 ॥

ಪಾಪಹೃದಯನೆ ನಮ್ಮೊಳಿಂತಾ ।
ಟೋಪವೇ ನಿನಗೆನುತ ಕೃಷ್ಣನು ।
ಕೋಪದಲಿ ಬೆಂಬೊತ್ತಿಹಿಡಿದಾ ।
ಕಾಪಟಿಗನ ॥ 240 ॥

ಶಿರವನುಗುರಲಿ ಚಿವುಟಿ ಬಿಸುಟನು ।
ಧರೆಗೆ ನಿಮಿಷಾರ್ಧಾರ್ಧ ಮಾತ್ರದಿ ।
ಪರಿಜನರು ಗೋಪಾಲರೀಕ್ಷಿಪ ।
ತೆರದೊಳಂದು ॥ 241 ॥

ಕೆಟ್ಟೆವೆಂದೆನುತುಳಿದ ರಜಕರು ।
ಬಿಟ್ಟು ವಸ್ತ್ರದ ಹೊರೆಗಳನು ಭಯ ।
ವಟ್ಟು ಹಾಯ್ದರು ಭರದಿ ದೇಶ ।
ಭ್ರಷ್ಟರಾಗಿ ॥ 242 ॥

॥ **ವಾರ್ಧಕ** ॥

ಜಲಧಿವಸನಾಧೀಶ ಲಾಲಿಸಾ ರಜಕನಂ ।
ಛಲದಿಂದ ಸಂಹರಿಸಿ ಬಳಿಕ ಸರಸಿಜನೇತ್ರ ।
ಬಲರು ವಸ್ತ್ರದ ದಿಂಡೊಳುತ್ತಮವನಾಯ್ದುಕೊಂಡುಳಿದುದಂ ಗೋಪಜನಕೆ ॥
ಒಲಿದು ಪುರಜನಕೀಯಲೊರ್ವ ಚಿಪ್ಪಿಗನವರೊ ।
ಳಲಘುತರ ಭಕುತಿಯಿಂ ತದ್ವಸನದಿಂ ಮೈಗೆ ।
ಸಲುವಂಗರೇಕಮಂ ಮಾಡಿ ತೊಡಿಸಲ್ಕವನಿಗಿಷ್ಟಾರ್ಥಮಂ ಕೊಟ್ಟರು ॥ 243 ॥

॥ ಮಧುಮಾಧವಿ – ತ್ರಿವುಡೆ ॥

ಮತ್ತೆ ಕೇಳ್ ಧರಣೀಶ ಮುಂದೆ ಬ ।
ರುತ್ತ ಕಂಡರು ಮಾಲೆಗಾರರೊ ।
ಳುತ್ತಮ ಸುಧಾಮನ ಗೃಹವ ಯ ।
ದೂತ್ತಮರು ನಿಜಪಥದೊಳು ॥ 244 ॥

ಹರಿಬಲರ ಬರವನ್ನು ನಿಟ್ಟಿಸಿ ।
ಪರಮಭಕ್ತಿಯೊಳಾ ಸುಧಾಮನು ।
ಶಿರವೆರಗಿ ಕೈಗೊಟ್ಟು ನಿಜಮಂ ।
ದಿರಕೆ ಕರೆತಂದುಚಿತದಿ ॥ 245 ॥

ಕುಳಿರಲಾಸನವಿತ್ತು ಕಾಲ್ಗಳ ।
ತೊಳೆದು ತಜ್ಜಲವನು ಶಿರದಿ ತಾಂ ।
ದಳೆದು ಸತಿ ಸುತ ಬಂಧುವರ್ಗಕೆ ।
ತಳಿದನತಿ ಸಂಭ್ರಮದಲಿ ॥ 246 ॥

ಸುರಿಗೆ ಮಲ್ಲಿಗೆ ಮೊಲ್ಲೆ ಸಂಪಿಗೆ ।
ಯರೆಬಿರಿದ ಕೆಂಜಾಜಿ ಮುಂತಹ ।
ಪರಿಮಳದಲದರ್ಂಡೆಗಳ ಬಲ ।
ಮುರಹರರಿಗರ್ಪಿಸಿದನು ॥ 247 ॥

ನಿತ್ಯತೃಪ್ತರಿಗೇನ ನೀವೆನೆ ।
ನುತ್ತ ಬಹುವಿಧ ಭಕ್ಷ್ಯಫಲಗಳ ।
ನತ್ಯಧಿಕ ಶ್ರದ್ಧೆಯಲಿ ಕಾಣಿಕೆ ।
ಇತ್ತು ನಮಿಸುತಲಿರ್ದನು ॥ 248 ॥

॥ ಗಜವಿಕ್ರೀಡಿತವೃತ್ತ ॥ (ಮತ್ತೇಭವಿಕ್ರೀಡಿತ)

ಶ್ರುತಿಪೌರಾಣಗಳೊಂದುಗೂಡಿಯರಸಲ್ ಮೈದೋರದಾನಂದ ಮೂ ।
ರುತಿಗಳ್ ಸತ್ಕೃಪೆಯಿಂದಲೆನ್ನ ಮನೆಗಿಂದೈತಂದ ಕರ್ತವ್ಯಮೇ ॥
ನತಿಸಂಪ್ರೀಯದಿ ಪೇಳ್ವುದೆಂದು ನಮಿಸಲ್ಕಾ ಭಕ್ತನಂ ಪಂಕಜಾ ।
ಯತನೇತ್ರಂ ಪಿಡಿದೆತ್ತಿ ಮೈದಡವುತೆಂದಂ ಚಾರುನಮ್ರೋಕ್ತಿಯಿಂ ॥ 249 ॥

॥ ಕುರಂಜಿ – ಅಷ್ಟ ॥

ಶುದ್ಧಚಿತ್ತದೊಳೆನ್ನ । ಹೊದ್ದಿದ ಶರಣರ ।
ನುದ್ಧರಿಸುವುದೆನ್ನಯ । ಕರ್ತವ್ಯವು ।
ಬುದ್ಧಿವಂತನೆ ಕೇಳಯ್ಯಾ ॥ 250 ॥

ವರವನಿತ್ತಪೆನು ನಿ । ನ್ನುರುತರ ಭಕುತಿಗೆ ।
ಪರಿತುಷ್ಟನಾಗಿ ನಾನು । ವಾಂಛಿತವೇನುಂ ।
ಟರುಹೆಂದುಸುರ್ದ ಕೃಷ್ಣನು ॥ 251 ॥

ನಿನ್ನ ಭಕ್ತರ ಸಂಗ । ವನ್ನು ತ್ವಚ್ಚರಣದೊ ।
ಳುನ್ನತ ಭಕುತಿಯನು । ಪಾಲಿಪುದೆಂದು ।
ಬಿನ್ನಪಂಗೈದನಾತನು ॥ 252 ॥

॥ ಭಾಮಿನಿ ॥

ಸೋಮವಂಶಲಲಾಮ ಕೇಳು ಸು ।
ಧಾಮನೀ ಪರಿ ಬಿನ್ನವಿಸೆ ಬಲ ।
ಶ್ರೀಮನೋಹರರೊಲಿದವನಿಗಿಷ್ಟಾರ್ಥಸಂಪದವ ॥
ಪ್ರೇಮಭರದಿಂದಿತ್ತ ಬಳಿಕಾ ।
ಧಾಮವನು ಪೊರವಂಟು ಬರುತಿರ ।
ಲಾಮಹಾ ನೃಪಪಥದಿ ಕಂಡರು ಕುಬುಜೆಯೋರ್ವಳನು ॥ 253 ॥

॥ ಕಂದಪದ್ಯ ॥

ಪೊಸ ಪೊಂಬಟ್ಟಲೊಳಂ ದೆಸೆ ।
ದೆಸೆಗಂ ತನಿಗಂಪ ಬೀರ್ವ ಗಂಧವನಾಂತಾ ॥
ಸಸಿಮುಖಿ ಪೋಗುತ್ತಿರೆ ಕಂ ।
ಡಸುರಹರಂ ನಗುತ ನುಡಿದನಾ ಕಾಂತೆಯೊಳಂ ॥ 254 ॥

॥ ಶರಷಟ್ಪದಿ ॥

ವಾರಿಜ ಮುಖಿ ಕಾ ।
ಳೋರಗವೇಣಿ ಚ ।
ಕೋರ ನಯನೆ ಸದ್ಗುಣಶೀಲೆ ॥

ಆರಿಗೊಯ್ದಪೆನು ।
ಸೌರಂಭಗಂಧವ ।
ನೇರದೊಳೆನ್ನೊಳು ಪೇಳ್ ಬಾಲೆ ॥ 255 ॥

ಕುಸುಮಗಂಧಿ ನವ ।
ಕಿಸಲಯ ಕರಯುಗೆ ।
ಪೆಸರದೇನು ನಿನಗೆಲೆ ನಾರಿ ॥
ಸಸಿನವಿರೆದೆ ಮೈ ।
ಕುಸಿದಿಹ ಪರಿಯೇ ।
ನುಸುರೆನ್ನೊಳು ಮೋಹನಕಾರಿ ॥ 256 ॥

ಏನ್ನೈಸಿರಿಯಿಂ ।
ದೀ ನವಗಂಧವ ।
ನೀನಾರಿಗೆ ಕೊಂಡೊಯ್ದಪೆ ಪೇಳ್ ॥
ತಾ ನಮಗೆಂದು ಬ ।
ಲಾನುಜ ನುಡಿಯ ।
ಲ್ಕಾ ನಾರಿಯು ನಗುತಿಂತೆಂದಳ್ ॥ 257 ॥

॥ **ಸಾಂಗತ್ಯ – ರೂಪಕ** ॥

ಸ್ಮರಸುಂದರಾಂಗ ಕೇಳ್ ಧರಣೀಶ ಕಂಸನ ।
ಕರುಣವುಳ್ಳಹ ದಾಸಿ ನಾನು ॥
ಕರ ಲೇಸೆಂದಿದನೆ ಕೈಗೊಂಬನನ್ಯರು ಕೊಟ್ಟ ।
ಸಿರಿಗಂಧವನು ಕೊಳ್ಳನವನು ॥ 258 ॥

ಏನಾದಡೇನು ಕರ್ಮಾಧೀನದಿಂದ ಏ ।
ಹೀನ ತನ್ನೊಡಲಿನ ರೂಪು ॥
ಈ ನಿಮಿತ್ತದೊಳಾಯ್ತು ಕುಬುಜೆಯೆಂದೆಂಬಬಿ ।
ಧಾನವಾರಿಗೆ ಪೇಳಲಿದನು ॥ 259 ॥

ಇತ್ತಪೆ ನಿನಗೆ ಗಂಧವನು ಯೋಗ್ಯರ ಕಾಣೆ ।
ಮತ್ತೆ ನಿನ್ನಂತೆ ಪೃಥ್ವಿಯಲಿ ॥

ಸತ್ಯಸಂಧನೆ ಕೊಳ್ಳೆಂದಬುಜಲೋಚನೆ ಕರ ।
ವೆತ್ತಿಕೊಟ್ಟಳು ಮನವೊಲಿದು ॥ 260 ॥

ನಳಿನಾಕ್ಷಿ ಕೊಡಲಾಗಂಧವ ರಾಮಕೃಷ್ಣರು ।
ನಲವಿಂದ ಲೇಪನಗೈದು ॥
ಗೆಳೆಯರ ತನು ನೆನೆವಂದದಿ ನಗುತಲೋ ।
ಕುಳಿಯನಾಡಿದರು ಸಂಭ್ರಮದಿ ॥ 261 ॥

॥ **ವಾರ್ಧಕ** ॥

ಸಿಂಧುವಸನಾಧೀಶ ಕಿವಿಗೊಟ್ಟು ಕೇಳ್ಳೈ ಮು ।
ಕುಂದನದುಭುತ ಲೀಲೆಯಂ ಗಂಧವಿತ್ತುದ ।
ಕ್ಕಿಂದು ತಾನುಪಕೃತಿಯನೆಸಗಿದಪೆನೆನುತಮವಳಂಫ್ರಿಯಂ ಮೆಟ್ಟಿ ಕುಳಿತು ॥
ಒಂದೆರಡು ಬೆರಳ ಗಲ್ಲದೊಳಿಟ್ಟು ನೆಗಹಿ ನಿಲ ।
ಲಂದು ನಿಟ್ಟೆಲುವು ನಿರಿನಿಟಿಯೆನಲ್ ನೆರೆದಿರ್ದ ।
ಮಂದಿಗಳ್ ನೋಳ್ಪಂತೆ ವಿಕಳಾಂಗಿಯಂ ಮುಟ್ಟಿ ನಿಗುಚಿದಂ
ತತ್‌ಕ್ಷಣದೊಳು ॥ 262 ॥

॥ **ಭೈರವಿ – ತ್ರಿವುಡೆ** ॥

ಧರೆಯೊಳಿಂದ್ರನ ರಂಭೆ ಕುರುಹನು ಮರೆಸಿ ನಿಂದಳೊ ಮೇಣು ಶಂ ।
ಕರನ ಚಿತ್ತವನಲರಿಚಿದ ಸ್ಮರಶರವೊ ನಾಲ್ಮೊಗ ಗೈದ ಚಿ ।
ತ್ತರದ ಪ್ರತಿಮೆಯೊ ಕೃಷ್ಣಕರಸಂಸ್ಪರುಶದಿಂದಲಿ ಮೃದುಳ ಬಂ ।
ಧುರ ತನುವನಾಂತಬಲೆಯೋ ಜಗಕರಿವೆನಲ್ ಕಾಣಿಸಿದಳು ॥ 263 ॥

ಭ್ರಮರ ಬಾಲಹಿಮಾಂಶು ಕಾರ್ಮುಕ ಕುಮುದ ಸ್ಫುಟ ತಿಲಕುಸುಮವೋ ॥
ಪ್ರಮದೆಯಳ ಕುಂತಳ ಲಲಾಟ ಭ್ರೂ ನಯನ ನಾಸಿಕವೊ ಮೇಣ್ ।
ಕಮಲ ಕಾಂಚನಕಲಶ ಪುಳಿನವೊ ಮುಖ ಪಯೋಧರ ಜಘನವೋ ।
ಭ್ರಮೆಯಗೊಳಿಪುದಿದೆಂಬಿನಿಂ ಕಣ್ಗೆಸೆದಳಾ ಸೀಮಂತಿನಿ ॥ 264 ॥

ಎಂತುಟೋ ನಿಜಮಾಯೆಯೆಂಬವಳತುಳ ಮಹಿಮೆಯು ಬಳಿಕ ಶ್ರೀ ।
ಕಾಂತನಾಸ್ಯಾಬ್ಜವನು ನೋಡುತ ಮನ್ಮಥನ ಶರಹತಿಯೊಳ ।
ತ್ಯಂತ ಕಳವಳಗೊಂಡು ವಿರಹಜ್ವರದಿ ಬಸವಳಿದಾ ಕಳಾ ।
ವಂತೆ ಸರಸದೊಳೆಳೆನಗೆಯ ಜೊನ್ನಂ ಪಸರಿಸುತ ನುಡಿದಳು ॥ 265 ॥

॥ **ಮಧುಮಾಧವಿ – ಏಕ** ॥

ನಲ್ಲ ಕೇಳ್ಳೈ ಮದನನೆಂಬ । ಖುಲ್ಲನೆನ್ನ ಕುಸುಮಶರದಿ ।
ನಿಲ್ಲಲೀಯದೆಚ್ಚು ಮನವ । ಪಲ್ಲಟ ಗೈದ ॥
ಬಲ್ಲಿಹನೆ ಸಂಜೆ ಸನಿಹ । ದಲ್ಲಿ ಬಂದುದೀ ವೇಳೆಯೊ ।
ಖೊಲ್ಲೆನೆನ್ನದೆ ನಾ ಪೇಳ್ವ । ಸೊಲ್ಲ ಲಾಲಿಸೈ ॥ 266 ॥

ತಾಳಲಾರೆ ಕಾಮನೆಸೆದ । ಕೋಲಿನ ಗಾಯದ ನೋವ ।
ನಾಳಿದನಾಗಿ ಕಾಯ್ಯೆ ಹೇ । ರಾಳ ಕರುಣದಿ ॥
ನೀಲವರ್ಣ ಜಂಜಾಟ ಬೇ । ಡೇಳು ಮನೆಗೆಂದಬ್ಜನಯನೆ ।
ಪೇಳಲು ಶ್ರೀಕೃಷ್ಣನೆಂದ । ನಾ ಲತಾಂಗಿಗೆ ॥ 267 ॥

ಮಂದಯಾನೆ ಕೇಳೆ ಬೇರ । ದೊಂದು ಕಾರ್ಯಮಿರ್ಪುದದನು ।
ಕುಂದದೆ ನಿರ್ವಹಿಸಿ ಬಳಿಕ್ಕೆ । ತಂದು ನಿನ್ನಯ ॥
ಮಂದಿರದೊಳಿರ್ದು ಬಗೆಗೆ । ಬಂದ ಬಯಕೆಗಳನು ಸಲಿಸಿ ।
ನಂದಿಸುವೆನು ವಿರಹ ಶಿಖಿಯ । ನೆಂದು ಪೇಳ್ದನು ॥ 268 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಕೇಳು ಪಾಂಡವಪೌತ್ರ ಬಳಿಕಾ ।
ಲೋಲನೇತ್ರೆಯನುಚಿತದಿಂದಲಿ ।
ಬೀಳುಗೊಟ್ಟಗಧರ ಬಲರು ನಿಜ ।
ಲೀಲೆಯಿಂದ ॥ 269 ॥

ಕೆಳೆಯರೊಡನಾಡುತ್ತ ಪೊಸಪೊಂ ।
ಗೊಳಲನೂದುತ ನಗರಲಕ್ಷ್ಮಿಯ ।
ನೊಲಿದು ನೋಡುತ ಮುಂತಳರ್ದರು ।
ನಲವಿನಿಂದ ॥ 270 ॥

ಬಿಲ್ಲಹಬ್ಬವೆನುತ್ತ ಮೂಜಗ ।
ಕೆಲ್ಲ ವಾರ್ತೆಯು ನೋಳ್ಪೆವಾ ಬಲು ।
ಬಿಲ್ಲನೆಂದನುತರಿದಿಶಾಪಟ ।
ಮಲ್ಲರಂದು ॥ 271 ॥

ತಳುವದತಿ ವೇಗದಲಿ ಶಸ್ತ್ರದ ।
ನಿಳಯದೆಡೆಗೈತಂದು ಕಾಪಿನ ।
ತಳವರರ ಕಾಣುತ್ತಲಾ ಯದು ।
ತಿಲಕರಾಗ ॥ 272 ॥

ತಂದೆಗಳಿರೀಕ್ಷಿಸುವ ಮನದಲಿ ।
ಬಂದಿಹೆವು ನೃಪಧನುವ ತೋರುವು ।
ದೆಂದವರ ಕೈವಿಡಿದು ಪೊಕ್ಕಾ ।
ಮಂದಿರವನು ॥ 273 ॥

ಕಂಡರಿದಿರಲಿ ಮೆರೆವ ನೃಪಕೋ ।
ದಂಡವನು ಮಣಿಕನಕ ರಚಿತೋ ।
ದ್ದಂಡವನು ರಿಪುರಾಯಕುಲ ಯಮ ।
ದಂಡವನ್ನು ॥ 274 ॥

॥ **ಭಾಮಿನಿ** ॥

ದೃಷ್ಟಿ ಸಫಲವಿದಾಯ್ತು ನೋಡಲು ।
ಮುಷ್ಟಿಕೈಗಳು ಫಲವೆಡೆಯಲೆಂ ।
ದಷ್ಟಭೂತಿಗಳೊಡೆಯನಾ ಬಿಲ್ದುಡುಕಿ ನೆಗಹುತಿರೆ ॥
ಅಷ್ಟರೊಳು ರಾಮಾದ್ಯರೆಂದರು ।
ಕೆಟ್ಟುದೈ ಕೋದಂಡವದು ನ ।
ಮ್ಮಿಷ್ಟರನು ಕೊಲ್ಲುವುದು ಬಿದ್ದರೆ ಮಾಣು ಮಾಣೆನುತ ॥ 275 ॥

॥ **ಕಂದಪದ್ಯ** ॥

ಸಂಕರುಷಣ ಮುಖ್ಯರ ನುಡಿ ।
ಯಂ ಕೈಕೊಳದೊಯ್ಯನಸುರಹರನಾ ಧನುವಂ ॥
ಝೇಂಕರಿಸುತ ನಾಲ್ದೆಸೆಗೆ ಭ ।
ಯಂಕರ ರವಮಂ ಬರಲಲ್ಲಿಹ ಭಟರೆಂದರ್ ॥ 276 ॥

॥ **ಆರ್ಯಾಸವಾಯಿ – ಏಕ** ॥

ಎಲವೋ ಗೊಲ್ಲರ ಹುಡುಗ ನೀನು ।
ಬಲುಸಾಸಿಗನ್ನೈ ಸಾಕು ॥
ಕೆಳಗಿಡು ಬಿದ್ದರೆ ನಮ್ಮೆಲ್ಲರನು ।
ಕೊಲುವುದು ಬಿಲ್ಲದು ಕಾಕು ॥ 277 ॥

ಮಕ್ಕಳು ನೀವೆಂಬಕ್ಕರಿನಿಂದೊಳ ।
ಪೊಕ್ಕುದಕೆಡೆಗೊಟ್ಟಿಹೆವು ॥
ಮಿಕ್ಕರೆ ಕಾಲನ ಸೊಕ್ಕು ಮುರಿದು ಕೈ ।
ಯಿಕ್ಕಿ ಭರದೊಳೆಳೆತಹೆವು ॥ 278 ॥

ಹಂದೆಗಳಿರ ನಿಮ್ಮೊಡನಹುದನು ನಾ ।
ನಿಂದೇ ನೋಡುವೆನಲ್ಲಾ ॥
ಬಂದುದು ಬರಲೀ ಬಿಲ್ಲ ನೆಗಹಿದಪೆ ।
ನೆಂದನು ಹರಿಯವರ್ಗೆಲ್ಲ ॥ 279 ॥

ಬಿಲ್ಲ ನೆಗಹುವಡೆ ಬೆಣ್ಣೆಯ ಮುದ್ದೆಯೊ ।
ಕಲ್ಲುಗಳೋ ಹೊಂಗೊಳಲೊ ॥
ಅಲ್ಲದಡದು ಗುಲುಗುಂಜಿಯ ಚೆಂಡೋ ।
ಗೊಲ್ಲರವನೆ ಸಾಕೇಳೊ ॥ 280 ॥

॥ **ಮಾರವಿ – ಏಕ** ॥

ಎನಲಾ ನುಡಿಗೇ । ಳ್ದನಲಾಂಬಕನೋಲ್ ।
ಕನಲುತ ಕಮಲಜ । ಜನಕಂ ಪರ್ಬುತ ।
ಕೆಣೆಯಹ ಬಲುಬಿ । ಲ್ಲನು ಮುರಿದೆರಡುಡಿ ।
ಯನುಗೈದಂ ಸುರ । ಜನ ಬೆರಗಾಗೆ ॥ ಕೇಳ್ಯೆ ಭೂಪ ॥ 281 ॥

ಶ್ರೀಪತಿಯಂದಾ । ಚಾಪವ ಮುರಿಯಲು ।
ಕಾಪಿನವೀರ ಚ । ಮೂಪರು ಕಾಣುತ ।
ಗೋಪತನಯ ಮರ್ಝು । ಭಾಪೆಂದಾರ್ದತಿ ।
ಕೋಪದಿ ಮಿಡುಕಿದ । ರಾ ಪಟುಭಟರು ॥ ಕೇಳ್ಯೆ ಭೂಪ ॥ 282 ॥

ದುಷ್ಪರಿವರಿಗೆಡೆ । ಗೊಟ್ಟಂತೊಳಗಡೆ ।
ಬಿಟ್ಟವರಾರೆಂ । ದಟ್ಟುತ ಸರಿವುತ ।
ಲಿಟ್ಟಿ ಮುಸುಲ ಶರ । ಪಟ್ಟಸವನು ಪಿಡಿ ।
ದಟ್ಟಿ ಭರದೊಳಡ । ಗಟ್ಟಿದರವರು ॥ ಕೇಳೈ ಭೂಪ ॥ 283 ॥

॥ ಶಂಕರಾಭರಣ – ಪಂಚಘಾತ ಮಟ್ಟೆ ॥

ತರುಬಿನಿಂದ ಭಟರ ಕಂಡು ಬಲ ಮುಕುಂದರು ।
ಕಿರುನಗೆಯನು ಪಸರಿಸುತ್ತಮವರಿಗೆಂದರು ॥
ಉರಿವ ಸೊಡರ ಶಲಭತತಿಯು ಹಣ್ಣೆನುತ್ತಲಿ ।
ಎರಗಿದಂದವಾಯ್ತು ನಿಮ್ಮ ಪಾಡೀ ಹೊತ್ತಿಲಿ ॥ 284 ॥

ಎನುತ ಮುರಿದ ಬಿಲ್ಲಿನುಡಿಯನೆರಡನಿರ್ವರು ।
ಕನಲುತೈದೆ ತುಡುಕಿ ನಿಂದು ಮತ್ತೆ ಪೇಳ್ದರು ॥
ಬಿನುಗುಗಳಿರ ನಿಮ್ಮ ತೋಳ ಬಲುಹ ತೋರಲು ।
ಇನಜನೂರಿಗುಂಬಳಿಯನು ಬಿಡುವೆವೆಂದರು ॥ 285 ॥

ಎಂದು ಕವಿದ ಭಟರ ನುಗ್ಗೊತ್ತಿ ಭರದಲಿ ।
ನಿಂದು ಬಿಲ್ಲಿನುಡಿಯ ತಿರುಹುತೈದೆ ಕರದಲಿ ॥
ಬಂದ ಬಂದವರನು ಬಳಿಕ ರಾಮಕೃಷ್ಣರು ।
ಕೊಂದು ಕ್ಷಣದಿ ಪರಮತೋಷದಿಂದ ನಲಿದರು ॥ 286 ॥

॥ ಭಾಮಿನಿ ॥

ಭೂತಳಾಧಿಪ ಕೇಳು ಶಸ್ತ್ರ ನಿ ।
ಕೇತನದೊಳಿಹ ವೀರಸುಭಟರ ।
ನೀ ತೆರದಿ ರಾಮಾಚ್ಯುತರು ಬಿಲ್ಲುಡಿಯ ಹೊಯ್ಲಿನಲಿ ॥
ಘಾತಿಸಲು ಬಳಿಕೊರ್ವ ಚಾರನು ।
ಭೀತಿಯಲಿ ಕಂಗೆಟ್ಟು ಪರಿತಂ ।
ದಾತತೂಕ್ಷಣ ಕಂಸಭೂಪನೊಳೆಂದನೀ ಹದನ ॥ 287 ॥

॥ ಮುಖಾರಿ – ಏಕ ॥

ನರನಾಥ ಲಾಲಿಸೈ ಬಿನ್ನಪವ । ಆಶ್ರಿತ ಸಂಜೀವ ।
ನರನಾಥ ಲಾಲಿಸೈ ಬಿನ್ನಪವ ॥ ಪ ॥

ಮಿಡುಕುಳ್ಳ ಮಕ್ಕಳೀರ್ವರಿಂದು । ಆಯುಧಶಾಲೆ ।
ಯೆಡೆಗೆ ನಯ ನುಡಿಯಿಂದ ಬಂದು ॥
ಧೃಡ ಚಾಪವನೆರ । ಡುಡಿ ಗೈದೆಡೆ ಕಂ ।
ಡೊಡನದ ಕಾಯ್ದಿಹ । ಕಡುಗಲಿಗಳ ಪೇ ।
ರ್ಬಡೆ ವೇಗದಿ ಬೊ । ಬ್ಬಿಡುತಡ್ಡೈಸಲು ।
ತಡೆಯದವರ ಸದೆ । ಬಡಿದರು ಕ್ಷಣದಿ ॥ 288 ॥

ಕೊಂದು ರಜಕನ ಮಡಿಯನುಟ್ಟು । ಸುಧಾಮನಿತ್ತ ।
ಚೆಂದದ ಪೂಮಾಲೆಗಳ ತೊಟ್ಟು ॥
ಗಂಧವಿತ್ತ ಸೈ । ರಂಧ್ರಿಯಳನು ನೇ ।
ರಂದವ ಗೈದ । ಲ್ಲಿಂದಲಿ ಶಸ್ತ್ರದ ।
ಮಂದಿರದೆಡೆಗೈ । ತಂದೀ ಪಟು ಭಟ ।
ವೃಂದವ ಗೆಲ್ದಾ । ನಂದದೊಳಿಹರು ॥ 289 ॥

॥ ಭೈರವಿ – ಝಂಪೆ ॥

ಚರನೆಂದ ನುಡಿ ಕೇಳಿ । ಭರಿತ ರೋಷದಲಿ ಪ ।
ಲ್ಮೊರೆದು ಗರ್ಜಿಸಿ ಕಂಸ । ಧರಣೀಂದ್ರನಂದು ॥ 290 ॥

ಕರೆದು ನಿಜ ಬಲಕೆಂದ । ನುರುಸಮರ್ಥರಿರ ಕೇ ।
ಳಿರೊ ಶಸ್ತ್ರ ಸದನಕೀ । ರ್ವರು ಮಕ್ಕಳಿಂದು ॥ 291 ॥

ಖುಲ್ಲತನದಲಿ ಬಂದು । ಬಿಲ್ಲನೆರಡುಡಿಯ ಗೈ ।
ದಲ್ಲಿರುವ ಪಟುಭಟರ । ನೆಲ್ಲ ಸದೆಬಡಿದು ॥ 292 ॥

ಮೋದದಿಂದಿರುವರಂ । ತಾ ದುರಾತ್ಮರ ನೀವು ।
ಕಾದಿ ಗೆಲ್ದಪುದೆನುತ । ಲೈದೆ ನೇಮಿಸಿದ ॥ 293 ॥

ಒಡೆಯನಪ್ಪಣೆಯನ್ನು । ದೃಢದಿ ತಲೆಯೋಳಗಾಂತು ।
ತಡೆಯದೈದಿದುದಸುರ । ಪಡೆಯು ಕಾಳಗಕೆ ॥ 294 ॥

॥ ಆಹೇರಿ – ಝಂಪೆ ॥

ಬಂದರಾ ಶಸ್ತ್ರಮಂದಿರಕೆ । ಕಂಸ ।
ನೆಂದ ಮಾತನು ತಲೆಯೊಳಾನುತಲಿ ಧುರಕೆ ॥ ಪ ॥

ಕಾರಿರುಳ ಪಳಿವ ಬಣ್ಣದ ಮೆಯ್ಯವರ್ ಹೊಲಸು ।
ನಾರುವಂದದಿ ಬಾಯ ತೆರೆದವರ್ ಕೆಂಗಿಡಿಯ ।
ತೂರುವಾಲಿಯವರ್ ಮೃಗೇಂದ್ರನೋಲತಿ ತೀಕ್ಷ್ಣ ।
ದೋರುತಿಹ ನಖ ದಂಷ್ಟ್ರದವರು । ಜೋಲ್ವ ।
ಹೇರೊಡಲನಿಡಿದೋಳಿನವರು । ಹರಿಯ ।
ತೋರುತೋರೆಂದೆನ್ನುವವರು । ಸಪ್ತ ।
ವಾರಿನಿಧಿ ತಡಿಯನೊದೆದೈತಪ್ಪತೆರದಿ ॥ ಬಂದರಾ ॥ 295 ॥

ಅಟ್ಟಿರೋ ಬಿಲ್ಮುರಿದ ದಿಟ್ಟನನು ಹಿಡಿತಂದು ।
ರಟ್ಟೆಗಳ ಜೋಡಿಕ್ಕಿ ಕಟ್ಟಿರೋ ಸೆಳೆಗಳಲಿ ।
ಕುಟ್ಟಿರೋ ಕಣ್ಮೊಗವ ನಿಟ್ಟಿಸದೆ ಮದವನಳ ।
ವಟ್ಟಾನೆಯಿಂ ತುಳಿಸಿ ಕೊಲಿರೊ । ಸಕಲ ।
ರಿಟ್ಟಣಿಸಿ ಸಾಲಾಗಿ ನಿಲಿರೊ । ಕರುಳ ।
ನೊಟ್ಟಿ ಹೇಸಿಕೆಗೊಳದೆ ಮೆಲಿರೊ । ಎನುತ ।
ಲಟ್ಟಹಾಸಂ ಗೈವುತತಿ ವೇಗದಿಂದ ॥ ಬಂದರಾ ॥ 296 ॥

ಗಂದೇಭಗಳಲಿ ಜೋದರ್ಕಳಲಿ ರಮ್ಯತರ ।
ಗಂಧರ್ವಗಳಲಿ ವೀರರ್ಕಳಲಿ ಸುಮಣಿಮಯ ।
ಸ್ಯಂದನಂಗಳಲಿ ರಥಿಕರ್ಗಳಡಿಗಡಿಗೆ ಭಾ ।
ಪೆಂದು ಚಿಮ್ಮುತ್ತ ಖಂಡೆಯವ । ಸಕಲ ।
ರೊಂದಾಗಿ ಜಗಕೆ ವಿಸ್ಮಯವ । ಬೀರು ।
ವಂದದಿಂ ಬೊಬ್ಬಿಡುತ ಭಯವ । ಸೂಸು ।
ತಂದಗೆಡಿಸುತ್ತ ಸಜ್ಜನರ ಸಂಚಯವ ॥ ಬಂದರಾ ॥ 297 ॥

॥ **ಭೋಗಷಟ್ಪದಿ** ॥

ಬರುವ ಭೋಜನೃಪನ ದಳವ ।
ಹರಿ ಪ್ರಲಂಬಹರರು ಕಂಡು ।
ಭರದಿ ಸಂಗಡಿಗರಿಗಭಯ । ಕರವ ತೋರುತ ॥
ಮುರಿದ ಬಿಲ್ಲಿನುಡಿಯನೀರ್ವ ।
ರೆರಡನಾಂತು ಭುಜವ ಚ ।
ಪ್ಪರಿಸಿ ಮಾರಾಂತು ನಿಂದ । ರುರು ಸಮರ್ಥರು ॥ 298 ॥

ನಂದತನಯರಿರ ಸುಭಟರ ।
ಕೊಂದೆವೆಂಬ ಬಹಳ ಗರ್ವ ।
ದಿಂದಲಿರ್ಪಿರ್ರೈಸಲೇ ಮ । ದಾಂಧ ತನದಲಿ ॥
ಒಂದು ನಿಮಿಷ ತಾಳ್ದಡೀಗ ।
ಸಂದ ಕಲಿಗಳೊಡನೆ ನಿಮ್ಮ ।
ಹೊಂದಿಸುವೆವೆನುತ್ತ ಕರುಬಿ । ನಿಂದರಾ ಖಳರ್ ॥ 299 ॥

ಖೂಳ ರಕ್ಕಸರಿರ ಬರಿಯ ।
ಜಾಳು ನುಡಿಯಲೇನು ಫಲವು ।
ಸೋಲು ಗೆಲವು ಸಾಹಸಿಗರ । ತೋಳ ಬಲ್ಮೆಯು ॥
ಕಾಳಗದಲಿ ತೋರ್ಪುದೆನುತ ।
ಶ್ರೀಲಲಾಮ ಬಲರು ಬಿಲ್ಲ ।
ಹೋಳ ತಿರುಹಿ ಬಿಸುಟರವರ । ಮೇಲೆ ಭರದಲಿ ॥ 300 ॥

ಕೆಲರು ಮುಗ್ಗಿ ಕರುಳ ಕಾರಿ ।
ಕೆಲರು ಹಿಂಗೈಯನೂರಿ ।
ಕೆಲರು ಮಂಡೆಯೊಡೆಯೆ ಚೀರಿ । ಕೆಲರು ವೇಷ್ಠಿಸಿ ॥
ಹಲವು ದೈತ್ಯರಿಂತು ಭೂ ।
ತಳದೊಳುರುಳಿ ಬಿದ್ದು ಮಡಿದ ।
ರೆಲೆ ಮಹೀಶ ಬಿಸುಟ ಬಿಲ್ಲ । ಹೊಳುಕ ಹೊಯ್ಲಲಿ ॥ 301 ॥

॥ **ವಾರ್ಧಕ** ॥

ಧರಣೀಂದ್ರ ಲಾಲಿಸಿಂತೆಲ್ಲರಂ ಸದೆದು ಬಲ ।
ಮುರಹರರ್ ಬಳಿಕ ರವಿಯಸ್ತಮಿಸಲಾಗಿ ಗೋ ।
ಪರನುಂ ವಿಲಾಸದಿಂದೊಡಗೊಂಡು ಶಸ್ತ್ರಮಂದಿರವನುಂ ಬೀಳುಕೊಟ್ಟು ॥
ಪುರದ ಸಿರಿಯಂ ಕಾಣುತೊಂದಾಗಿ ಬೀಡಿಕೆಗೆ ।
ಪರಿತೋಷದಿಂದಲೈತಂದು ಹಾಲೋಗರವ ।
ಸರಸದಿಂ ಬಳಿದುಂಡು ನಿರ್ವಿಘ್ನದಿಂದ ನಿದ್ರಾಂಗನೆಯೊಳೊಪ್ಪಿರ್ದರು ॥ 302 ॥

॥ **ದ್ವಿಪದಿ** ॥

ಇತ್ತ ನಿಜಬಲವಳಿದ ವಾರ್ತೆಯನು ಕೇಳ್ದು ।
ಚಿತ್ತದಲಿ ಕಂಸನತಿ ಚಿಂತೆಯನೆ ತಾಳ್ದು ॥ 303 ॥

ಹರಿ ಬಲರ ಸಾಹಸವ ನೆನೆದು ಕಂಗೆಟ್ಟು ।
ಮರುಗಿದನು ನಿದ್ರೆ ಬಾರದೆ ಭೀತಿವಟ್ಟು ॥ 304 ॥

ಲಗಂಗೊಟ್ಟಾಪ್ತ ಮಂತ್ರಿಗಳ ಕರೆಸಿ ।
ಆಲೋಚಿಸಿದನವನು ಬಲುದೈನ್ಯವೆರಸಿ ॥ 305 ॥

ಬೀಳ್ಕೊಂಡವರನು ಮೇಣಧಿಕ ಚಿಂತೆಯಲಿ ।
ಕೋಲ್ಗೊಂಡ ತೆರದಿ ನರಳಿದನು ಭ್ರಾಂತಿಯಲಿ ॥ 306 ॥

ಬಳಿಕ ಬಹುವಿಧದ ದುಃಶಕುನವನು ಕಂಡು ।
ಹಳವಿಸುತಲಿರ್ದನೊಡಲಲಿ ತಾಪಗೊಂಡು ॥ 307 ॥

ಹಿಂದೆ ಕಂಬದೊಳುದಿಸಿ ಘೋರ ದೈತ್ಯನನು ।
ಕೊಂದುದಿಲ್ಲವೆ ನೃಸಿಂಹಾಕೃತಿಯೊಳಿವನು ॥ 308 ॥

ಇಂದೆಲ್ಲಿ ಬಹನೊ ತಾನರಿಯೆನೆಂದೆನುತ ।
ನಿಂದಿರ್ದನಖಿಳದಲಿ ಹರಿಯ ಭಾವಿಸುತ ॥ 309 ॥

॥ **ಭಾಮಿನಿ** ॥

ಭಯದಿ ಕಂಸಂಗಖಿಳ ಜಗ ಹರಿ ।
ಮಯವೆನಿಸಿ ತೋರಿತ್ತು ಮೇಣ್ ಸರ ।
ಸಿಯಲಿ ಪಂಕಜವರಳ್ದುದಳಿಮಕರಂದ ವಾರಿಯಲಿ ॥
ಪ್ರಿಯದೊಳಘಮರುಷಣವ ಗೈದುದು ।
ನಯಸರದಿ ಕೋಗಿಲೆಗಳುಲಿದುದು ।
ನಯನಗೋಚರನಾದನಿನನವನೀಶ ಕೇಳೆಂದ ॥ 310 ॥

॥ **ಪರಿವರ್ಧಿನಿ ಷಟ್ಪದಿ** ॥

ತರಣಿಯುದಯದೊಳ್ ಕಂಸಂ ಸ್ವಜನರ್ ।
ವೆರಸಿ ಮಹಾರಂಗಸ್ಥಳಕೈತಂ ।
ದುರುತರ ಮಂಚದಿ ಮಂಡಿಸಿ ಕೊಬ್ಬಿದ । ಕುರಿ ಕೋಣಗಳನ್ನು ॥

ತರಿಸಿ ಕಡಿದು ರಣಭೂತಕೆ ಬಲಿಗೊ ।
ಟ್ಟರಿತಕೆ ಬೆದರದ ಕುವಲಯಪೀಡನ ।
ನಿರಿಸಿದನಾ ರಂಗದ್ವಾರದಿ ಮುರ । ಹರನೊಳ್ ಕಾದಲ್ಕೆ ॥ 311 ॥

॥ ಸೌರಾಷ್ಟ್ರ – ತ್ರಿವುಡೆ ॥

ಅತ್ತಲುಪವನದಿಂದ ಗೋಪರ ।
ಮೊತ್ತವೈತಂದರಸನನು ಕಂ ।
ಡುತ್ತುಮಾಂಗವನೆರಗಿ ಕಾಣಿಕೆ ।
ಇತ್ತು ಭರದಿ ॥ 312 ॥

ರಂಗವನು ಬಳಸಿಕ್ಕಿದುರು ಮಂ ।
ಚಂಗಳಲಿ ಕುಳ್ಳಿರಲು ಬಳಿಕ ರ ।
ಥಾಂಗಧರ ಬಲಭದ್ರರಿತ್ತ ಬೆ ।
ಡಂಗಿನಿಂದ ॥ 313 ॥

ಪೊರಟು ಬೀಡಿಕೆಯಿಂದ ಕೆಳೆಯರ ।
ವೆರಸಿ ಪರಿತೋಷದಲಿ ನಗರದ ।
ಸಿರಿಯ ಕಾಣುತ ಬಂದರಾ ಶುಭ ।
ಚರಿತರಂದು ॥ 314 ॥

॥ ಚಂಪಕಮಾಲಾ ವೃತ್ತ ॥

ಬರುತಿಹ ರಾಮಕೃಷ್ಣರನುಂ ರಂಗದ ಬಾಗಿಲೊಳೀರ್ಪ ಗಂಧ ಬಂ ।
ಧುರ ಗಜವಾಹಕಂ ಮಿಗೆ ನಿರೀಕ್ಷಿಸುತಂ ಕಂಡು ಬೇಗದಿಂದಲಂ ।
ದುರುನಿಶಿತಾಗ್ರದಂಕುಶದಲಾಮದಲಾ ಮದಸಾಮಜಮಂ ಪ್ರತಾಪದಿಂ ।
ದಿರಿದಬುಜಾಕ್ಷ ರಾಮರಿದಿರಿಂಗೆ ಮಹೋಗ್ರತೆಯಿಂದ ನೂಕಿದಂ ॥ 315 ॥

॥ ಕಂದಪದ್ಯ ॥

ರಂಜಿಪ ಗಜಮಂ ಕಾಣುತ ।
ಕಂಜಾಕ್ಷ ಕಾಮಪಾಲಕರೆದೆಗೆಡದಾಗಳ್ ॥
ಮುಂಜೆರಗಂ ಸಂವರಿಸುತ ।
ಕುಂಜರವಾಹಕನೊಳೆಂದರತಿ ನಿಷ್ಠುರದಿಂ ॥ 316 ॥

॥ ಭೈರವಿ – ಅಷ್ಟ ॥

ಎಲವೊ ಬಾಲಕನೆ ನೀನು । ಹಾದಿಯ ಬಿಟ್ಟು ।
ತೊಲಗಿಸೊ ದಂತಿಯನು ॥
ಕೊಲುವೆವಲ್ಲದಡೆ ನಿನ್ನನು ಕುಂಭಿ ಸಹಿತಲೆಂ ।
ದುಲಿದರು ಬಲ ಕೃಷ್ಣರು ॥ 317 ॥

ಎನಲಾ ಮಾತನು ಕೇಳುತ್ತ । ಹಸ್ತಿಪನಂದು ।
ಮನದಿ ಖಾತಿಯ ತಾಳುತ್ತ ॥
ವನರುಹದಳಲೋಚನ ಬಲಭದ್ರರೊಳ್ ।
ಕನಲುತ್ತಲಿಂತೆಂದನು ॥ 318 ॥

ಅಹುದಲಾ ಬಳಿಕೇನು । ಸಾಸಿಗರಹಿ ।
ರಹಿರೊ ಮಕ್ಕಳಿರಾ ನೀವು ॥
ಮಹಿಯೊಳು ನಿಮಗೆ ಪಾಸಟಿಗಾಣೆ ಚೋರರೊಳ್ ।
ಸಹಜವೀ ಮಾತೆಂದನು ॥ 319 ॥

ಎಂದಾ ಮಾವಂತಿಗನು । ಕೂರ್ಮೆಯೊಳಿರಿ ।
ದಂದಾ ಮಧೇಭವನು ॥
ಕಂದರ್ಪಜನಕನ ಪಡಿಮುಖಕತಿವೇಗ ।
ದಿಂದಲಿ ನಡೆಸಿದನು ॥ 320 ॥

॥ ಮಾರವಿ – ಏಕ ॥

ಧರಣಿಪ ಕೇಳಾ । ಕರಿಮಾವಂತಿಗ ।
ನಿರಿಯಲು ಕಂಗಳೊ । ಳುರಿಗೆದರುತ ಮುಂ ।
ಬರಿದಸುರಾರಿಯ । ಭರದಿಂ ಸೊಂಡಿಲೊ ।
ಳೆರಗಿ ಹಿಡಿದುದೊಂ । ದರೆನಿಮಿಷದಲಿ ॥ ಏನನೆಂಬೆ ॥ 321 ॥

ಕಡುಗೋಪದಿ ಗಜ । ವಿಡಿದಿರೆ ಯತ್ನದಿ ।
ಬಿಡಿಸಿಕೊಂಡು ಜಗ । ದೊಡೆಯನದರ ತಲೆ ।
ಯೊಡೆವಂದದಿ ಬಡಿ । ದಡಗಿದನಾನೆಯ ।
ತೊಡೆಗಳೆರಡರೆಡೆ । ನಡುವಿನೊಳಂದು ॥ ಏನನೆಂಬೆ ॥ 322 ॥

ಮತ್ತೆ ಕೆರಳ್ದಾ । ಮತ್ತಗಜವು ತುಡು ।
ಕುತ್ತಿರೆ ಬಿಡಿಸಿಕೊ । ಳುತ್ತಿನಿವಿಲ್ಲನ ।
ಪೆತ್ತಯ್ಯನು ಮಿಗೆ । ಸತ್ವದಿ ಬಾಲವ ।
ಹಸ್ತದೊಳಾಂತ । ತ್ತತ್ತಲೆಳೆದನು ॥ ಏನನೆಂಬೆ ॥ 323 ॥

॥ **ಭಾಮಿನಿ** ॥

ಧರಣಿಪತಿ ಕೇಳಿಂತು ಕೃಷ್ಣನು ।
ಹುರುಳುಗೆಡಿಸಿದನಾ ಗಜವ ಗಜ ।
ವಿರದೆ ಕೃಷ್ಣನ ಕೂಡೆ ಬಹುವಿಧದಿಂದ ಹೆಣಗಿದುದು ॥
ಧರೆ ರಸಾತಳಕಿಳಿದುದಹಿಪನು ।
ಶಿರವ ತಗ್ಗಿಸಿ ಕೊಂಡನಂದಾ ।
ವರ ಕಮಠನೆದೆಗೆಟ್ಟನದುಭುತವಾಯ್ತು ಸಮರಂಗ ॥ 324 ॥

॥ **ಕಂದಪದ್ಯ** ॥

ಜೋದನ ಕೊಂದಲ್ಲದೆ ಬರಿ ।
ದೀ ದಂತಿಯು ಮಣಿಯದೆನುತಲಂಬುಜನಾಭಂ ॥
ಕ್ರೋಧೋದ್ರೇಕದಿ ಕಾಲ್ಪಿಡಿ ।
ದಾ ದುರುಳನನವನಿತಳದಿ ಬಡಿದೊರಗಿಸಿದಂ ॥ 325 ॥

॥ **ಭೈರವಿ – ಏಕ** ॥

ಯಂತ್ರವು ಮಡಿಯಲು ಕಂಡು । ಮದ ।
ದಂತಿ ಮನದಿ ಖತಿಗೊಂಡು ॥
ಕಂತುಪಿತನ ಬೆನ್ನಟ್ಟಿ । ಬಲು ।
ಹಿಂತುಡುಕಿತು ಮೈಮುಟ್ಟಿ ॥ 326 ॥

ಭಯದಲಿ ನಿರ್ಜರತತಿಯು । ಜಯ ।
ಜಯವೆನುತಿರೆ ಶ್ರೀಪತಿಯು ॥
ದಯದಿಂದಭಯವ ನೀಡಿ । ಖಾ ।
ತಿಯೊಳಿಭವನು ಮಿಗೆ ನೋಡಿ ॥ 327 ॥

ಥಟ್ಟನೆ ಸೊಂಡಿಲ ಹಿಡಿದು । ಕಿರಿ ।
ಗುಟ್ಟಲು ಧರೆಯಲಿ ಬಡಿದು ॥
ದುಷ್ಟಗಜವ ಯಮಪುರಕೆ । ಬೀ ।
ಳ್ಕೊಟ್ಟನು ಹರಿಯಾಕ್ಷಣಕೆ ॥ 328 ॥

॥ ಭಾಮಿನಿ ॥

ದಂತಿಯನು ಸದೆದದರ ದಂತವ ।
ಸಂತಸದಿ ಕಿತ್ತಾಂತು ಹೆಗಲಲಿ ।
ಕಂತುಪಿತ ಸಂಕರುಷಣರು ಸುರರೋಳಿ ಭಾಪೆನಲು ॥
ಹಂತಿ ಹಿಡಿದಿಹ ಗೋಪಕುವರರ ।
ತಿಂಥಿಣಿಯನೊಡಗೊಂಡು ಬಂದೋ ।
ರಂತೆ ರಂಗದ್ವಾರದೊಳಪೊಕ್ಕರು ವಿಲಾಸದಲಿ ॥ 329 ॥

॥ ಘಂಟಾರವ – ಅಷ್ಟ ॥

ಬಂದರು ಕಂಸಭೂಪನೊಡ್ಡೋಲಗ ।
ದಂದವನು ಕಾಣುತ್ತ ರಾಮ ಮು ।
ಕುಂದರತಿ ಸಂಭ್ರಮದಲಿ ॥ 330 ॥

ಪುರದ ಸ್ತ್ರೀಜನರೊಂದೆಸೆಯಲಿ ಪೌರ ।
ಪುರುಷ ಜನರೊಂದೆಡೆಯೊಳುರೆ ಶೃಂ ।
ಗರದೊಳೊಪ್ಪಿರೆ ಮಂಚದಿ ॥ 331 ॥

ಅಗಿವ ಚಾಮರ ಛತ್ರ ಪತಾಕೆಗ ।
ಳಗಲದಲಿ ಶೋಭಿಸಲು ಕೈವಾ ।
ರಿಗಳು ಪೊಗಳುತ ನಿಂದಿರೆ ॥ 332 ॥

ವಿಗಡನುನ್ನತವಾದ ಮಂಚದಲಿ ಕಾ ।
ಳಗವ ನೋಡುವೆನೆಂದು ಹೃದಯದ ।
ದುಗುಡದಿಂದಲಿ ಕುಳಿತಿರೆ ॥ 333 ॥

॥ ಕಲ್ಯಾಣಿ – ಝಂಪೆ ॥

ರಾರಾಜಿಸಿದ ಹರಿಯು ರಂಗಮಧ್ಯದಲಿ ।
ಮೂರುಲೋಕವನು ಮೋಹಿಸುವ ರೂಪಿನಲಿ ॥ ಪ ॥

ಬಲದ ಭಾಗದಲಿ ಬಲಭದ್ರನೊಪ್ಪಿರಲೆಡದಿ ।
ಗೆಳೆಯ ಗೋಪಾಲರೊಗ್ಗಿಲಿ ನಿಂದಿರೆ ॥
ನಲವಿಂದ ನಡುವೆ ಮೃದುವೇಣುನಾದಂ ಗೈವು ।
ತಲಿ ಮುಗುಳ್ನಗೆಯ ಜೊನ್ನಂ ಸೂಸುತ ॥ 334 ॥

ಪೆರೆನೊಸಲ ಕಸ್ತುರಿಯು ತೊಳಗೆ ಭ್ರೂಲತೆಯಲುಗೆ ।
ಕಿರುಮುತ್ತಿನಂದದ ಬೆಮರ್ವನಿಗಳು ॥
ಸಿರಿಮೊಗದಿ ಹೊಳೆಯೆ ಕೆಂಗುರುಳ್ಗಳೊಯ್ಯನೆ ನಲಿಯೆ ।
ನರನಾಟಕವ ಬಿತ್ತಿ ಜನರ ಕಣ್ಗೆ ॥ 335 ॥

ಮಲ್ಲರನು ತಲೆಗೊಂಬ ವಜ್ರದಂಡವು ನೋಳ್ಪ ।
ಫುಲ್ಲಲೋಚನೆಯರಿಂಗಲರಂಬನು ॥
ಖುಲ್ಲಜನರುಗಳ ಸಂತತಿಗೆ ಶಾಸಕನು ಮೇ ।
ಣೆಲ್ಲರಿಗೆ ಪರಮಬಾಂಧವ ತಾನೆನೆ ॥ 336 ॥

॥ **ಭಾಮಿನಿ** ॥

ಉತ್ತರಾಸುತ ಲಾಲಿಸಿಂತೆಸೆ ।
ವೃತ್ತಮೋತ್ತಮರಾಕೃತಿಯ ಕಂ ।
ಡುತ್ತರಿಸಿ ಧೈರ್ಯವನು ಕಂಸನು ಧರಣಿಪರ ನಡುವೆ ॥
ಚಿತ್ತದಲಿ ಭಯಗೊಂಡು ಮಿಗೆ ಮರು ।
ಗುತ್ತ ಕುಳ್ಳಿರೆ ಬಳಿಕ ಸುಜನರ ।
ಮೊತ್ತ ವೀಕ್ಷಿಸುತಿರ್ದುದಖಿಳ ಸುರೌಘವಂದಿತನ ॥ 337 ॥

॥ **ಶಂಕರಾಭರಣ – ಅಷ್ಟ** ॥

ಕಂಡರು ಕಮಲಪತ್ರಾಯತ ನೇತ್ರನ ।
ಖಂಡಪರಶು ಮಿತ್ರನ । ಸುಚರಿತ್ರನ ॥
ಕಂಡರು । ಸಜ್ಜನರೆಲ್ಲ । ಕೃಷ್ಣನ । ಕಂಡರು ॥ ಪ ॥

ಶಂಬರಾರಿಯ ವರಪಿತನ । ಚಂದ್ರ ।
ಬಿಂಬಾನನನ ಸುಸ್ಮಿತನ । ಚಾರು ।
ಬಿಂಬಾಧರನ ಶಾಶ್ವತನ ॥

ಕಂಬುಕಂಧರನ ಕಾಳಿಯ ದರ್ಪಶಮನನ ।
ತುಂಬರ ಗಾನಲೋಲನ । ಗೋಪಾಲನ ॥ ಕಂಡರು ॥ 338 ॥

ನವಮಣಿ ಮಕುಟಾಲಂಕೃತನ । ಪದ್ಮ ।
ಭವಮುಖ್ಯ ತ್ರಿದಶಪೂಜಿತನ । ಶ್ರೀ ।
ಧವನ ತ್ರೈಲೋಕ್ಯವಂದಿತನ ॥
ಕುವಲಯದಳನೀಲನ ಕುಂದರದನನ ।
ರವಿಕೋಟಿ ಸಂಕಾಶನ । ಗತದೋಷನ ॥ ಕಂಡರು ॥ 339 ॥

ಪೀತಕೌಶೇಯಾಂಬರನ । ಜಗ ।
ನ್ನಾಥನ ದೈತ್ಯಸಂಹರನ । ಸರ್ಪಾ ।
ರಾತಿವಾಹನನ ಸುಂದರನ ॥
ಶ್ರೀತುಳಸೀ ಸೇವಿತ ಪಾದಯುಗಳನ ।
ಮಾತುಳಾಂತಕನ ಮಾಯಾನರವೇಷನ ॥ ಕಂಡರು ॥ 340 ॥

॥ ಕಂದಪದ್ಯ ॥

ಕಂಗಳೊಳಂ ಕಮಲಾಂಬಕ ।
ನಂಗಸುಧಾರಸವನೀಂಟುತಂ ಜನರಾಗಳ್ ॥
ಹಿಂಗದೆ ತೀವಿದ ಹರುಷದಿ ।
ಹೊಂಗುತ ಸುಖವಾರ್ಧಿಯೊಳಗೆ ಮುಳುಗುತ ನುಡಿದರ್ ॥ 341 ॥

॥ ಸೌರಾಷ್ಟ್ರ – ಅಷ್ಟ ॥

ತಮನ ಮಥಿಸಿ ಶ್ರುತಿಯನಜಗಿ । ತ್ರಾತನೀತ । ಗಿರಿಯ ।
ನಮಲ ಪೃಷ್ಟದಿಂದ ಪೊ । ತ್ರಾತನೀತ ॥
ಕ್ಷಮೆಯನೊಯ್ದ ಖಳನ ಮಡುಹಿ । ದಾತನೀತ । ಪಸುಳೆ ।
ಭ್ರಮಿಸಿ ಕರೆಯೆ ಕಂಭದಿ ಬಂ । ದಾತನೀತ ॥ 342 ॥

ಬಲಿಯೊಳು ದಾನವ ಬೇಡಿ । ದಾತನೀತ । ತಾಯ ।
ತಲೆಯ ಕೊಡಲಿಯಿಂದ ಕಡಿ । ದಾತನೀತ ॥
ಶಿಲೆಯ ಮೆಟ್ಟಿ ಸತಿಯ ಮಾಡಿ । ದಾತನೀತ । ವಿಷದ ।
ಮೊಲೆಯೂಡಿದಾಕೆಯ ಮಡುಹಿ । ದಾತನೀತ ॥ 343 ॥

ಸತಿಯರ ವ್ರತವ ಭಂಗಿಸಿ । ದಾತನೀತ । ಮ್ಲೇಂಛ ।
ತತಿಯನು ಸವರಿ ಭಂಗಿಸಿ । ದಾತನೀತ ॥
ಜತಿಗಳ ಬಗೆಗೆ ಕೈಸೇರ । ದಾತನೀತ । ಪೂರ್ವ ।
ಕೃತ ಪುಣ್ಯದಿಂದೆಮಗೆ ದೊರಕಿ । ದಾತನೀತ ॥ 344 ॥

॥ ಭಾಮಿನಿ ॥

ಇಂತೆನುತ ಜನನಿವಹವಾ ಶ್ರೀ ।
ಕಾಂತನನು ನೆನೆವುತ್ತ ತಮ್ಮೊಳು ।
ಸಂತಸುಖದಿಂದಿರೆ ಬಳಿಕ ಹರಿಬಲರು ಇದಿರಾಗಿ ॥
ಅಂತ್ಯಕಾಲದ ರುದ್ರ ಬಹುರೂ ।
ಪಾಂತು ಬಂದನೆನಲ್ಕೆ ಮಲ್ಲರ ।
ತಿಂಥಿಣಿಯ ತನಿ ರೌದ್ರರಸರಂಜಿಸಿತು ರಂಗದಲಿ ॥ 345 ॥

॥ ಸುರುಟಿ – ಪಂಚಘಾತ ಮಟ್ಟೆ ॥

ಘಳಿಲನೆ ಬಂದರ್ ಬಲು ಬಲವಂತರ್ । ನಳಿನಾಂಬಕ ಬಲರೊಳ್ ॥
ಕೊಳಗುಳಕೆಂದೆನುತಾಗಳ್ [ಖಳಕುಲ ಸಾಹಸಿಗಳ್] ॥ ಪ ॥

ಘೋರೆಂಬ ಮಹಾವಾದ್ಯ ಗ । ಘೋರಣದಲಿ ಮೆರೆಯೆ ॥
ತೋರುವ ದಿಗುಭಿತ್ತಿಯ ಭೇ । ರೀರವವಳ್ಳಿರಿಯೆ ॥ 346 ॥

ಮಾರ್ಮಲೆವುತ ಕಡಲಂದದಿ । ಘೂರ್ಮಿಸುತಡಿಗಡಿಗೆ ।
ಕಾರ್ಮುಗಿಲಂತಿಹ ಮಲ್ಲರ್ । ಪೆರ್ಮೆಯೊಳಾ ಕಡೆಗೆ ॥ 347 ॥

ಕೊಬ್ಬಿದ ಕೊರಳಿನವರ್ ಬೆಳೆ । ದುಬ್ಬಿದ ಭುಜದವರು ॥
ಕಬ್ಬೊಗೆ ಸೂಸುವ ಸುಯ್ಲಿನ । ವರ್ಬಿಂಕವನಾಂತು ॥ 348 ॥

॥ ಕಂದಪದ್ಯ ॥

ಬಂದಾ ಮಲ್ಲರೊಳಗ್ಗಳ ।
ನೆಂದೆನಿಸಿಯೆ ಮೆರೆವ ವೀರ ಚಾಣೂರಾಖ್ಯಂ ॥
ಅಂದಾ ಮಾಧವನಿದಿರೊಳ್।
ನಿಂದಾರ್ಭಟಿಸುತ್ತ ಭುಜವನೊದರಿಸುತೆಂದಂ ॥ 349 ॥

॥ **ಸೌರಾಷ್ಟ್ರ – ಅಷ್ಟ** ॥

ಅರರೆ ಕರುವ ಕಾವ ಗೊಲ್ಲ । ರೆರೆಯ ಕೇಳೊ ಜಗದಿ ನಿನ್ನ ।
ಧುರಸಮರ್ಥನೆಂಬರೆಂದು । ಧರಣೀಶನಿಂದು ॥
ಹರುಷದಿಂದಲಳಿಯಂದಿರ । ಸರಸವಾಟವನ್ನು ನೋಳ್ಪ ।
ಡುರುತರ ಕೌತುಕವನಾಂತು । ಕರೆಸಿಹನಿಂತು ॥ 350 ॥

ಬಲ್ಲತೆರದಿಂದಲೆಮ್ಮೊಳು । ಮಲ್ಲಶ್ರಮವ ತೋರ್ದುರ್ವ ಪೃಥ್ವಿ ।
ವಲ್ಲಭನ ಕಣ್ಗೆ ಸೊಬಗ । ಚೆಲ್ಲ ಬಾರದೆ ॥
ನಿಲ್ಲಲೇಕೆಂದು ಪೇಳಲಾ । ಸೊಲ್ಲಿಗಂದು ಮಾರುತ್ತರವ ।
ಫುಲ್ಲನಾಭನಿತ್ತನು ಸ । ಮುಲ್ಲಸದಲಿ ॥ 351 ॥

॥ **ಕುಸುಮಷಟ್ಪದಿ** ॥

ಮಲ್ಲರರಸನೆ ಧರಾ ।
ವಲ್ಲಭನು ಮರುಳಲಾ ।
ಹಳ್ಳಿಯೊಳಗೀಪರ್ವಾವುಗಳನು ಕಾವ ॥
ಗೊಲ್ಲರಿಂಗೀ ಮಹಾ ।
ಮಲ್ಲಾಂಗ ವಿದ್ಯೆಗಳ ।
ದೆಲ್ಲಿಯದು ಹಸುಮಕ್ಕಳಿಗೆ ಶಿವಶಿವಾ ॥ 352 ॥

ಧುರಧೀರ ನಾನಹುದು ।
ಕರೆಸಿಬಿಡು ಸರಿಗದನು ।
ಥರವಲ್ಲ ನಮಗೀರ್ವರಿಂಗೆ ಸಮರ ॥
ಬರಿದೆ ಕಲಹದ ಮಾತ ।
ನರುಹ ಬೇಡೆನ್ನೊಳೆಂ ।
ದುರಗಶಯನಂ ಪೇಳ್ದಡಾತನೆಂದಂ ॥ 353 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಆರಿಗಾಡುವೆ ಕೃಷ್ಣ ಗೋಪಕು ।
ಮಾರಕನೆ ದಿಟ ನೀನು ಹಸ್ತಿಯ ।
ನೇರುಗಾಣಿಸಿದವನದಾರ್ಕೆ ।
ಶೂರತನದಿ ॥ 354 ॥

ಶಕಟ ವೃಷ ವರವತ್ಸ ಬಕ ಧೇ ।
ನುಕ ತುರಂಗಮ ದೈತ್ಯ ಮೊದಲಾ ।
ದಖಿಳ ಪಟುಭಟರಸುಗಳಿಗೆ ಕಂ ।
ಟಕನದಾರೈ ॥ 355 ॥

ರಣದಿ ನೀನತಿಧೀರನಲ್ಲವೆ ।
ಬಣಗುಗಳೆ ಮಡಿದವರು ಕಾಳಗ ।
ಕೆಣೆಯಹುದು ನಮ್ಮೀರ್ವರಿಂಗೀ ।
ಕಣದೊಳಿಂದು ॥ 356 ॥

ಹಳಚು ನೀನೆನ್ನೊಡನೆ ಮುಷ್ಟಿಕ ।
ಹಲಧರರು ತಮ್ಮೊಳಗೆ ಕಾದಲಿ ।
ಸಲಲಿ ಕಂಸನೃಪಾಲನರ್ತಿಯು ।
ನಲವಿನಿಂದ ॥ 357 ॥

ಅಳುಕಬೇಡಿದಿರಾಗು ನಿಜಕರ ।
ನಳಿನವನು ತಾರೆನುತಲಾಂತನು ।
ಕಳವನಾ ಚಾಣೂರ ಮುಷ್ಟಿಕ ।
ಬಲನ ಹಿಡಿದ ॥ 358 ॥

॥ ಶಂಕರಾಭರಣ – ಪಂಚಘಾತ ಮಟ್ಟೆ ॥

ರೂಢಿಪತಿಯೆ ಲಾಲಿಸುಭಯ ಭಟರು ಕಣದಲಿ ।
ಹೂಡಿ ದಂಡೆಗಳನು ಮಡುಹ ಹೊಯ್ದು ರಣದಲಿ ॥
ಕೂಡೆ ಭಾಪು ಭಳಿರೆ ಪೂತು ಮಝುಯೆನುತ್ತಲಿ ।
ಪಾಡುಪಂಥದಿಂದ ಹಳಚಿದರು ಸಗಾಢದಿ ॥ 359 ॥

ಹೊಗುವ ಹೊರಟು ಹತ್ತಿಲಾಗಿಸುವ ನಿಲ್ಲುವ ।
ಮಗುಳೆ ಹಿಡಿವ ಹಾವಿನಂತೆ ಬಿಗಿವ ಬಿಚ್ಚುವ ॥
ಮಗುಚಿ ಕೆಡವ ಘಳಿಲನೇರ್ವ ತುಡುಕಿ ತೊಡರುವ ।
ಗಗನತಳಕೆ ಭರದಿ ಲಂಘಿಸುವ ಕುಶಲವ ॥ 360 ॥

ತೋರುತುಭಯ ಭಟರು ತಮ್ಮೊಳಗೆ ಖತಿಯಲಿ ।
ಹೋರುತಿರಲು ಭಯವು ತೋರ್ದುದಾಗ ಕ್ಷಿತಿಯಲಿ ॥
ವಾರಿನಿಧಿಯು ಭಾಂಡಜಲದ ತೆರೆದೊಳುಕ್ಕಿತು ।
ತಾರಕಿಗಳು ಬಾಂದಳದಲಿ ನಿಲದೆ ತುಕ್ಕಿತು ॥ 361 ॥

॥ ಭಾಮಿನಿ ॥

ಭೂರಮಣ ಕೇಳ್ ಮುರಮಥನ ಚಾ ।
ಣೂರರೊಂದೆಸೆಯೊಳ್ ಹಲಾಯುಧ ।
ವೀರ ಮುಷ್ಟಿಕರೊಂದೆಡೆಯೊಳೀ ತೆರದಿ ತಮ್ಮೊಳಗೆ ॥
ಹೋರುತಿರೆ ಕಂಡಿದನು ನೆರೆದಿಹ ।
ನಾರಿಯರು ಹಾ ಶಿವಶಿವೀ ಸುಕು ।
ಮಾರರಿದಿರೇ ಕ್ರೂರಮಲ್ಲರೊಳೆನುತ ಮರುಗಿದರು ॥ 362 ॥

॥ ಸೌರಾಷ್ಟ್ರ – ಏಕ ॥

ಅಕಟೀ ಕರ್ಕಶರೊಡನೆ । ಹಸ್ತಾಹಸ್ತಿಗೀ ।
ಸುಕುಮಾರರಿವರ ಪಾಡೇನೆ ॥
ಇಕೊ ನೋಡೆ ನೆರೆದ ನೃಪರೆಲ್ಲಾ । ಕರುಣವಿಲ್ಲದೆ ।
ಸುಖವೆತ್ತು ನೋಳ್ಪರಲ್ಲಾ ॥ 363 ॥

ಕೊಲಲೆಂದೇ ಹಸುಳೆಗಳನು । ಕರೆಸಿಹನಿಂತು ।
ಕಲುಹೃದಯದ ಕಂಸನು ॥
ಬಲುಪಾತಕಿಗಳಹೆವು ನಾವು । ಈ ವಿಧಿಯನಿಂ ।
ದಿನಲಿ ಕಾಂಬವರಾದೆವು ॥ 364 ॥

ಲೋಕವೆಲ್ಲವನು ಮೋಹ । ಗೊಳಿಸುವ ಚೆಲ್ವಿ ।
ನೀ ಕುಮಾರಕರ ರೂಹ ॥
ಯಾಕೆ ತೋರಿದೆ ಪ್ರಾಪ್ತಿಯೆ । ಮತ್ತೆ ಸಂಗರಕೆ ।
ನೂಕಲೇಕಯ್ಯೋ ವಿಧಿಯೆ ॥ 365 ॥

॥ ಭಾಮಿನಿ ॥

ಎನುತಲೀ ತೆರದಿಂದ ತಮ್ಮೊಳು ।
ಘನತರದ ಕ್ಲೇಶದೊಳು ಮರುಗುವ ।

ವನಿತೆಯರನಾ ದೇವಕೀಹೃದಯಾಬ್ಧಿಚಂದ್ರಮನು ॥
ಜನಿತ ನಿಜ ಕರುಣಾಕಟಾಕ್ಷದೊ ।
ಳನಿತರನು ಕುಸ್ತರಿಸಿ ಬವರದಿ ।
ಮುನಿದು ಕಾದುವ ಶತ್ರುವನು ಹರಿಸಲ್ಕೆ ಮನದಿಂದ ॥ 366 ॥

॥ **ಕಂದಪದ್ಯ** ॥

ಖತಿಯಿಂದಂ ಕಮಲಾಕ್ಷಂ ।
ಪ್ರತಿಭಟ ಚಾಣೂರನದಟನುಂ ನಿಲಿಸುವೆನೆಂ ॥
ದತಿ ಬಲುಭುಜದಿಂ ತಿವಿಯಲ್ ।
ವ್ಯಥಿತಾಂತಃಕರಣನಾಗುತಿಂತೆಂದನವಂ ॥ 367 ॥

॥ **ಮಾರವಿ – ಏಕ** ॥

ಕಂಡ ತೆರದೊಳೆರಗದಿರೆಲೊ ಕಷ್ಣನೆ ।
ಭಂಡತನವು ಸಾಕೊ ॥
ಗಂಡಸು ನೀನಾದೊಡೆಯೊಂದನು ಕೈ ।
ಗೊಂಡು ಪರಿಕಿಸೆಂದ ॥ 368 ॥

ತಿವಿತಿವಿಯೋ ನೀ ಮೊದಲಲಿ ಮಲ್ಲಾ ।
ಹವದಲಿ ಮಾನ್ಯನಲಾ ॥
ಬವರವು ಬಳಿಕಿನೊಳೆಮ್ಮದೆನುತ ಮಾ ।
ಧವನಾತನಿಗೆಂದ ॥ 369 ॥

ಮುಷ್ಟಿಯ ಹವಣಿಸಿ ಕೊಂಡಾರ್ದಾ ಜಗ ।
ಜಟ್ಟಿಯು ಮೇಲ್ವಾಯ್ದು ॥
ದಿಟ್ಟತನದೊಳೆರಗಿದನಾ ದೈತ್ಯ ಘ ।
ರಟ್ಟಿನ ಪೇರುರವ ॥ 370 ॥

ತಡೆದೆನು ನಿನ್ನಯ ತಿವಿಗಳನೆನ್ನೀ ।
ದೃಢತರ ಮುಷ್ಟಿಯನು ॥
ಹಿಡಿಹಿಡಿಯೆಂದಚ್ಯುತನೆರಗಿದನಾ ।
ಧಡಿಗ ಮಲ್ಲನೆದೆಯ ॥ 371 ॥

॥ **ಭಾಮಿನಿ** ॥

ಆಸುರವೈರಿಯ ಮುಷ್ಟಿಹತಿಯಿಂ ।
ದಸುವಳಿದು ಚಾಣೂರನೆಂಬುವ ।
ನುಸುರಡಗಿ ಧರಣಿಯಲಿ ಬೀಳಲು ವಿಕಟರೂಪಿನಲಿ ॥
ಪೊಸತೆನಿಪ ಮಲ್ಲಿಗೆಯ ಮಳೆಯಾ ।
ಗಸದಿ ಸುರಿದುದು ಕಿರುವೆಲರು ನಿ ।
ಪ್ಪಸರದಲಿ ಬೀಸಿದುದು ವಸುಧಾನಾಥ ಕೇಳೆಂದ ॥ 372 ॥

॥ **ಶಂಕರಾಭರಣ – ಮಟ್ಟೆ** ॥

ಬಲನೊಳಿತ್ತ ಮುಷ್ಟಿಕಾಖ್ಯನಧಿಕ ಬಲದಲಿ ।
ಮಲೆತು ಮಾರಾಂತು ಕಾದುವಾ ಸಮಯದಲಿ ॥
ಪ್ರಳಯಕಾಲದತುಲ ಭೈರವನ ತೆರದಲಿ ।
ಮುಳಿದು ರಾಮನಂದು ಸುದೃಢ ಮುಷ್ಟಿಯಿಂದಲಿ ॥ 373 ॥

ಉರವನೆರಗೆಯೊದರಿ ಮುಷ್ಟಿಕನು ಬಾಯಲಿ ।
ಕರುಳ ಕಾರಿ ಬಿದ್ದು ಮಡಿಯೆ ಧರಣಿತಳದಲಿ ॥
ಕೆರಳಿ ಬಳಿಕ ಫಡಫಡಾನಿಹೆನೆನುತ್ತಲಿ ।
ದುರುಳಕೂಟಾಖ್ಯ ಸೆಣಸಿ ಯುದ್ಧಮುಖದಲಿ ॥ 374 ॥

ಮಡಿಯೆ ಬಲನ ಮುಷ್ಟಿಹತಿಗೆ ಕೂಟನಿತ್ತಲು ।
ಕಿಡಿಯನುಗುಳುತತ್ತ ಕೋಸಲನು ಹರಿಯೊಳು ॥
ಕಡುಗಿ ಕಾದುತಿರಲು ಕಿನಿಸಿನಿಂದ ಕೃಷ್ಣನು ।
ಎಡದ ಕಾಲಿನಿಂದಲೊದೆದು ಕೊಂದನವನನು ॥ 375 ॥

॥ **ಭಾಮಿನಿ** ॥

ಅಸಮಬಲ ಚಾಣೂರ ಮುಷ್ಟಿಕ ।
ರಸುವಳಿಯೆ ಕೂಟಾಖ್ಯನೊಡಲನು ।
ಬಿಸುಟು ಪೋಗಲು ಮಿಕ್ಕ ಮಲ್ಲರು ಜೀವದಾಸೆಯಲಿ ॥
ಮುಸುಡ ತಿರುಹುತಲೋಡಿದರು ದೆಸೆ ।
ದೆಸೆಗೆ ಮುರಹರ ರೌಹಿಣೇಯರ ।
ಘಸಣಿ ನಮಗೇಕೆಂದೆನುತ ತಮತಮಗೆ ತವಕದಲಿ ॥ 376 ॥

॥ ಮಧುಮಾಧವಿ – ತ್ರಿವುಡೆ ॥

ಸೊಲ್ಲೆವೋಡದಿರೋಡದಿರಿ ನೀವ್ ।
ನಿಲ್ಲಿರೈ ಪರಿವಾರ ಪಗೆ ನಮ ।
ಗಲ್ಲ ಭಯಬೇಡೆಂದಭಯಕರ ।
ಪಲ್ಲವವ ತೋರುತ್ತಲಿ । ಕೃಷ್ಣ ಬಲರು ॥ 377 ॥

ಹೊನ್ನಗಂಟೆಗಳುಲಿಯಲಾಡಿದ ।
ರುನ್ನತೋನ್ನತರೂಪು ಗುಣಸಂ ।
ಪನ್ನರಾ ವನರಂಗ ಮಧ್ಯದಿ ।
ಬಿನ್ನಣವ ಬೀರುತ್ತಲಿ । ತೋಷದಿಂದ ॥ 378 ॥

ಧಿರುರೆ ಧಣುಧಣು ಭಾಪು ಮಝು ಪೂ ।
ತುರೆ ಪರಾಕ್ರಮಶಾಲಿಗಳಿರೆಂ ।
ದುರಗಶಯನ ಹಲಾಯುಧರ ಪೊಗ ।
ಳ್ದರು ಘನ ತರವಿಲಾಸದಿ । ಸಕಲಜನರು ॥ 379 ॥

॥ ಕಾಂಭೋದಿ – ಝಂಪೆ ॥

ಕದನ ಚೌಪಟರಾದ ಚಾಣೂರ ಮುಖ್ಯರಳಿ ।
ದುದ ಕಂಡು ಕಂಸನೃಪನಂದು ॥
ಮದನಾರಿಯಂದದಿಂ ಖತಿಗೊಂಡು ಗದ್ದುಗೆಯ ।
ನೊದೆದೆದ್ದು ಕೈವೀಸುತೆಂದ ॥ 380 ॥

ಯಾಕೆ ಕಂಗೆಟ್ಟೋಡುವಿರೊ ನಿಮಗೆ ಬಿಡುವೆನಾ ।
ಗೋಕುಲವ ಕೈಸೂರೆಯನ್ನು ॥
ಕಾಕ ಬಳಸುವ ಹುಡುಗರನು ಹೊಳಲ ಹೊರಹಿಂಕೆ ।
ನೂಕಿರೋ ಭೀತಿಬೇಡಿನ್ನು ॥ 381 ॥

ಪಿಸುಣ ನಂದನ ಹಿಡಿದು ಹೆಡಮುಡಿಯ ಕಟ್ಟಿರೋ ।
ವಸುದೇವ ಕುಹಕಿಯನು ಕೊಲಿರೊ ॥
ಕುಸುರಿವರಿದುಗ್ರಸೇನ ಪ್ರಮುಖ ಯಾದವರ ।
ಪೆಸರನಿಂದಿನಲಿ ಮಾಣಿಸಿರೊ ॥ 382 ॥

॥ ಕಂದಪದ್ಯ ॥

ಎಂದೆನುತಂ ನಿಜಸೈನಿಕ ।
ಮಂ ದುರ್ಮತಿ ಕಂಸಧರಣಿಪಂ ಕರೆವುದನುಂ ॥
ಇಂದಿರೆಯರಸಂ ಕಂಡಾ ।
ನಂದದೊಳುಂ ನುಡಿದನೊಂದನಾ ರಾಮನೊಳಂ ॥ 383 ॥

॥ ಭೈರವಿ- ಪಂಚಘಾತ ಮಟ್ಟೆ ॥

ಅಣ್ಣ ನೀವು ಕೇಳ್ದಿರಲ್ಲ ಕುನ್ನಿ ಕಂಸನು ।
ಎಣ್ಣಿದಂತೆ ಬಗುಳುತೀರ್ಪ ನುಡಿಯದೀಸನು ॥
ಹಣ್ಣಿ ಬರುವೆನಿದಕೆ ತಾ ತಕ್ಕುದೊಂದನು ।
ಮಿಣ್ಣನಾ ವಿಚಿತ್ರವನ್ನು ನೋಳ್ಪುದೆಂದನು ॥ 384 ॥

॥ ತಾರಾವಳಿವೃತ್ತ ದಂಡಕ ॥

ಪೊಡವಿಪ ಕೇಳ್ ಬಲ ।
ನೊಡನಿಂತೆಂದೊರೆದು ಪಾ ।
ಲ್ಗಡಲಳಿಯನು ಪ್ರಳಯ ।
ದುಡುಪತಿಧರನಂತೆ ।
ಕಡುಗಿ ರಕ್ಕಸರಾಯ ।
ನಡದಿದುನ್ನತ ಮಂಚ ।
ದೆಡೆಗೆ ಲಂಘಿಸೆ ಕಂಡು ।
ಕಡುಗೋಪದಿಂದಲಾ ।
ಧಡಿಗ ಕಂಸನು ಬೇಗ ।
ಕಡಿ ತಲೆ ಹರಿಗೆಯ ।
ಪಿಡಿದು ಧಿಕ್ಕನೆ ನೆಲ ।
ನೊಡೆವಂತೆ ಪಿರಿದು ಬೊ ।
ಬ್ಬಿಡುತ ಕಂಗಳಲಿ ಕೆಂ ।
ಗಿಡಿಗರೆವುತ್ತೊಡ ।
ನೊಡಗಚ್ಚಿ ಸಮರಕು ।
ಗ್ಗಡಿಸಿ ನಿಂದಿರೆ ಕೂಡೆ ।

ತಡೆಯದೆ ಹೆಮ್ಮರ ।
ನುಡಿದು ಬಿದ್ದವು ಸಿಡಿಲ್ ।
ಬಡಿದಂತೆ ಜನರು ಕಂ ।
ಗೆಡುತೀರ್ದರಂದು ಸೊಲ್ ।
ಮಡದಿಯಾಣ್ಮನು ನಡು ।
ನಡುಗಿದನನಿಮಿಷ ।
ರೊಡೆಯ ಬೆಚ್ಚಿದನಡಿ ।
ಗಡಿಗೆ ಫಣೀಂದ್ರನು ।
ಹೆಡೆಯ ತಗ್ಗಿಸಿಕೊಂಡನು । ಕೂರುಮ ತ ।
ನ್ನೊಡಲೊಳುಬ್ಬಸವೆತ್ತನು । ದಿಗ್ದಂತಿಗ ।
ಳುಡುಗಿಸಿದುದು ಬೆನ್ನನು । ಒಂದೇ ಕ್ಷಣ ।
ಕಡಿ ಮೊಗಚಿದುದು ಲೋಕಂಗಳು ಬರತಾದು ।
ದೇನೆಂಬೆನದ್ಭುತವ ॥ 385 ॥

॥ **ಕಂದಪದ್ಯ** ॥

ಈ ರೀತಿಯೊಳಂ ಮಂಚದಿ ।
ಘೋರಾರ್ಭಟೆವೆತ್ತು ನಿಂದ ಕಂಸನ ಕಂಡಾ ॥
ಮಾರಪಿತಂ ಪನ್ನತಿಕೆಯ ।
ತೋರೆಂದೆನುತಾಂತನವನ ಮುಂಜಾಡಿಕೆಯಂ ॥ 386 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಗರುಡನುರಗನನೌಕಿ ಹಿಡಿವಂ ।
ತರಿಭಟನನಾಹವದೊಳಿರಿದ ।
ಬ್ಬರಿಸಿ ಮುಂದಲೆವಿಡಿದು ಪೀತಾಂ ।
ಬರನು ಭರದಿ ॥ 387 ॥

ಕೆಡೆಯೆನುತಲುಬ್ಬರದ ಸತ್ವದಿ ।
ಪೊಡವಿಗೀಡಾಡಿದನವನ ಕರು ।
ಳೊಡನೆ ಚೆಲ್ಲಲು ಮೇಲೆ ಬಿದ್ದನು ।
ತಡೆಯದಂದು ॥ 388 ॥

ಕಳೆದುದಸು ಕಾಯವನು ಕಂಸನ ।
ಬಳಗ ಬಾಯ್ಬಿಡೆ ಬರಿ ಹೆಣನನೆಳ ।
ದೆಳೆದು ಕುಣಿದಾಡಿದನು ತಾ ಕಡು ।
ಮುಳಿಸನಾಂತು ॥ 389 ॥

॥ **ಭಾಮಿನಿ** ॥

ಎಲೆ ಪರೀಕ್ಷಿತ ಲಾಲಿಸಾ ಖಳ ।
ತಿಲಕನವನಿಗೆ ಬೀಳೆ ಪೂಸರ ।
ವಳೆಗರೆದರಚ್ಯುತನ ಮಕುಟದಿ ಸುರರುಘೇಯೆನಲು ॥
ಬಳಿಕ ಪತಿಯಳಿವನು ನಿರೀಕ್ಷಿಸಿ ।
ಬಳುಕಿ ಬೀಳುತಲೇಳುತ್ತೈತಂ ।
ದಳಲಿದರು ಕಳೆಗುಂದಿಯಸ್ತಿಪ್ರಾಸ್ತಿಯೆಂಬವರು ॥ 390 ॥

॥ **ವಸಂತಭೈರವಿ – ಏಕ** ॥

ಏತಕೀ ರಣರಂಗ ಮಧ್ಯದಿ ಪವಡಿಸೀರ್ಪೆ । ನೀರ ।
ಮಾತನಾಡದೆ ಮೌನಮಂದಳೆ ।
ದೀ ತೆರದಿ ಮಿಗೆ ಧಾತುಗುಂದಿಹೆ ॥ ಪ ॥

ಚಾರುಚಂದನ ಲೇಪವನು ತೊರೆ । ದೀ ರಕುತವ ಪೂಸಿ ॥ ಅಂಚೆಯ ।
ಸಾರತುಳ ಮೃದುವಾಸನೊಲ್ಲದೆ । ಧಾರಿಣಿಯನು ಬಯಸಿ ॥ ನಂಬಿದ ।
ನಾರಿಯರ ಕೈಬಿಟ್ಟು ಮರಣವ । ನೇರದೊಳಂಗೈಸಿ ॥ ಸಂಗರ ।
ಧೀರ ನೀನವಿ । ಚಾರದಿಂದೀ । ಭೂರಿ ರಾಜ್ಯದ । ಭಾರ ಬೇಡೆಂ ।
ದೇತಕೀ ರಣ ॥ 391 ॥

ಅಂತ್ಯವಿಲ್ಲದ ದುಃಖ ಕೂಪದಿ । ಮುಂತಿಳಿಯದೆ ಮೂಡಿ ॥ ಮುಳುಗುವ ।
ಕಾಂತೆಯರ ಕರುಣಾಕಟಾಕ್ಷದೊ । ಳಂತರಿಸದೆ ನೋಡಿ ॥ ಕಂಬನಿ ।
ಯಂ ತೊಡೆದು ತೆಗೆದಪ್ಪಿಯತಿ ಗೆಲ । ವಾಂತು ಮುತ್ತನು ನೀಡಿ ॥ ನಮ್ಮನು ।
ಸಂತವಿಡದೆದು । ರಂತ ಕೋಪವ । ನುಂ ತಳೆದು ಜಡ । ರಂತೆ ಮಿಸುಗದ ।
ದೇತಕೀ ರಣರಂಗ ॥ 392 ॥

ಹೊಂದಿದಬಲೆಯರನ್ನು ನಿಟ್ಟಿಸೆ । ನೆಂದು ತಾಳ್ದ ಮುನಿಸೊ ॥ ಸ್ವರ್ಗದ
।ಸುಂದರ ಸ್ತ್ರೀಯರಿಂಗಳುಪಿ ಕರು । ಗಂದನಾಂತ ಮನಸೊ ॥ ನಂದನ
।ಕಂದನೊಳು ಸೆಣೆಸಲ್ಕೆಯಪಜಯ । ಬಂದಿತೆಂಬ ನೆನಸೊ ॥ ಪೇಳ್ಮಕ ।
ರಂದ ಸವಿನುಡಿ । ಯಿಂದಲರಿಯೆವ । ದೊಂದನೆಲೆ ಗುಣ । ವೃಂದ ಸುಮ್ಮನ ।
ದೇತಕೀರಣ ರಂಗ ॥ 393 ॥

॥ **ಆನಂದಭೈರವಿ – ಏಕ** ॥

ಇಂತೆಂದಾ ಕಮಲಾಕ್ಷಿಯರ ।
ತ್ಯಂತ ಶೋಕ ಜಲನಿಧಿಯೊ ।
ಳಾಳುತ್ತಾ । ನೋವ । ತಾಳುತ್ತಾ ॥ 394 ॥

ತುರುಬಿನೊಳ್ಮುಡಿದ ಪೂಸರವ ।
ಹರಿದು ಬಿಸುಟರ್ ಕಂಡಡಾ ವಿ ।
ನುತಿಗಾಗ । ಸತಿಯ । ರತಿಬೇಗ ॥ 395 ॥

ಝುಗಝುಗಿಪ ವಜ್ರದೋಲೆ ।
ಮಿಗಿಲಾದ ಪೊಂದೊಡವುಗಳನು ।
ತೆಗೆದರು । ಕೆಲದೊ । ಳೊಗೆದರು ॥ 396 ॥

ಹರಿಬಲರ ತೋಟಿ ಬೇಡೆಂ ।
ದೊರೆದರೆ ನಮ್ಮ ಮಾತನೋ ।
ಕರಿಸದೆ । ಅವರ । ಕರೆಸಿದೆ ॥ 397 ॥

ಆರಿಗೊಪ್ಪಿಸಿ ಪೋದೆ ನ ।
ಮ್ಮೀರುವರನೆಂದು ನೆಲದಿ ।
ಕೆಡೆದರು । ಮೂರ್ಛೆ । ಯೊಡೆದರು ॥ 398 ॥

॥ **ಕಂದಪದ್ಯ** ॥

ಧರಣಿಪ ಕೇಳ್ ಕಂಸಾನುಜ ।
ರಿರುವರ್ ನ್ಯಗ್ರೋಧಕಾದಿ ವಸುಸಂಖ್ಯಾತರ್ ॥
ಭರದಿಂದೈತಂದೀ ಸತಿ ।
ಯರ ಸಂತಾಪವನು [ಕಂಡು ಮಗುಳಿಂ]ತೆಂದರ್ ॥ 399 ॥

॥ ಮಾರವಿ – ಏಕ ॥

ಬಿಡಿರೌ ದುಃಖವ । ಕೊಡಿರೌ ನೇಮವ ।
ತಡೆಯದೆ ಪೂರ್ವಜನ ॥
ಮಡುಹಿದ ದುರ್ಮದ । ರೊಡಲಡಗನು ಬಲಿ ।
ಕೊಡುವೆವು ಮರುಳ್ಗಣಕೆ ॥ 400 ॥

ಶೂಲಿಯೆ ಕಾಯ್ದುಕೊಳಲಿ ಬೆಂಬಲಕೆ ಸು ।
ರಾಳಿಯೆ ನಿಂದಿರಲಿ ॥
ಖೂಳತನದೊಳಣ್ಣನ ಕೊಂದವರನು ।
ಸೀಳುವೆವೀಕ್ಷಣದಿ ॥ 401 ॥

ಎಂದಾ ಕಂಸಾನುಜರಾ ಸತಿಯರ ।
ನಂದದೊಳೊಡಬರಿಸಿ ॥
ನಿಂದರು ಕಲಹವ ಬಯಸುತ ರಾಮ ಮು ।
ಕುಂದರಿಗಿದಿರಾಗಿ ॥ 402 ॥

॥ ಭೋಗಷಟ್ಪದಿ ॥

॥ ಶಂಕರಾಭರಣ – ಪಂಚಘಾತ ಮಟ್ಟೆ ॥

ಕಲಹಕಾತುರ್ಯದಿಂದ ।
ಮಲೆವ ಭಟರ ಕಂಡು ಕೋಪ ।
ಕಲಿತ ಚಿತ್ತನಾಗುತಂದು । ಬಲನು ಸುಠಿಯಲಿ ॥
ಭಳಿರೆ ಭಾಪುರೆನುತ ತನ್ನ ।
ಬಲುಭುಜಗಳನೊದರಿಸುತ್ತ ।
ಕೊಳುಗುಳಕ್ಕೆ ನಿಂದನವರೊ । ಳಲಘು ಸತ್ವದಿ ॥ 403 ॥

ಕೊಚ್ಚಿ ಕೊಲ್ಲಿರಿರಿಯಿರಿವನ ।
ಚುಚ್ಚಿ ಬಾಣದಿಂದ ಥ ।
ಟ್ಟಿಚ್ಚಿ ಕರುಳನೆನುತ ಬಾಯೊ । ಳುಚ್ಚರಿಸುತಲಿ ॥
ಕಿಚ್ಚನುಗುಳುತ್ತೈದೆ ಕಣ್ಣೊ ।
ಳಚ್ಯುತಾಗ್ರಭವನ ಬಂದು ।
ಮುಚ್ಚಿಕೊಂಡರೇನ ಪೇಳ್ವೆ । ನಚ್ಚರೀಯನು ॥ 404 ॥

ಕುರಿಗಳೊಂದುಗೂಡಿ ಹುಲಿಯೊ ।
ಳುರುಬಿ ಜೀವಿಸುವುದೆ ಬಲನ ।
ತರುವಲೆಗಳು ಕೆಣಕಿ ಬದುಕು । ವರೆ ರಣಾಗ್ರದಿ ॥
ಕೆರಳಿ ಫಡಫಡೆನುತ ಬೊ ।
ಬ್ಬಿರಿದು ದೃಢ ಸುಮುಷ್ಟಿಯಿಂದ ।
ಲೆರಗಿ ಯವರನೆಲ್ಲ ಜವನ । ಪುರಕೆ ಕಳುಹಿದ ॥ 405 ॥

॥ **ವಾರ್ಧಕ** ॥

ಪೃಥಿವೀಶ ಲಾಲಿಸಾ ನ್ಯಗ್ರೋಧಕಾದಿಗಳ ।
ಸತಿಯರನು ಕೂರ್ಮೆಯಿಂ ಬೇರೆ ಬೇರೊಡಬಡಿಸಿ ।
ಮೃತವಿಟ್ಟವರ್ಗೆ ಮೇಲಾಹ ಸಂಸ್ಕಾರಮಂ ವಿಧ್ಯುಕ್ತದಿಂ ಮಾಡಿಸಿ ॥
ಶತಪತ್ರನೇತ್ರ ರಾಮರ್ ಬಳಿಕ ಸೆರೆಮನೆಯೊ ।
ಳತಿಕೃಶಂವಡೆದೀರ್ಪ ತಂದೆತಾಯ್ಗಳ ಬಿಡಿಸಿ ।
ನತರಾಗಿ ಕಂಬನಿಯದುಂಬುತಾ ಶೌರಿ ದೇವಕಿಯೊರೊಡನಿಂತೆಂದರು ॥406॥

॥ **ಶಂಕರಾಭರಣ – ತ್ರಿವುಡೆ** ॥

ಪಿರಿದು ದುಃಖಂಬಡಿಸಿದನಲಾ ।
ದುರುಳ ಕಂಸನು ನಿಮ್ಮನಕಟೀ ।
ತೆರದಿ ನೆರೆ ಸಂಕಲೆಗಳಲಿ ನಿ ।
ಷ್ಕರುಣಿಯಾಗಿ ॥ 407 ॥

ಬರಿದೆ ಪೋದವು ದಿವಸವಿನ್ನೆಗ ।
ಸೆರೆಯಲೀರ್ದಿರಿ ನೀವು ದೇಶಾಂ ।
ತರಕೆ ನೂಕಿದುದೆಮ್ಮ ವಿಧಿವಶ ।
ತೆರಹುಗೊಡದೆ ॥ 408 ॥

ಎಂದ ಘನಸಂತಾಪ ಬಡುತಿಹ ।
ನಂದನರ ತೆಗೆದಪ್ಪಿ ಪೇಳ್ದರು ।
ಮುಂದಲೆಯ ವಾಸನಿಸುತಧಿಕಾ ।
ನಂದದಿಂದ ॥ 409 ॥

ತೀದುದಂತರ್ವ್ಯಥೆಯು ಮುನ್ನಿನ ।
ಭೇದವೆಲ್ಲವು ನಿಮ್ಮನೋಡಲು ।
ಪೋದುದೆಲೆ ಮಕ್ಕಳಿರ ಸಂತಸ ।
ವಾದುದೊಡನೆ ॥ 410 ॥

ಎನುತ ತೊಡೆಯಲಿ ಕುಳ್ಳಿರಿಸಿಕೊಂ ।
ಡನುಪಮರನಾನಂದ ಬಾಷ್ಪದಿ ।
ತನುವ ನಾದುತಲೀರ್ದರಂದಾ ।
ಜನನಿ ಪಿತರು ॥ 411 ॥

॥ ಭಾಮಿನಿ ॥

ಲಾಲಿಸೈ ನರನಾಥ ಕೃಷ್ಣನ ।
ಲೀಲೆಯನು ಬಳಿಕುಗ್ರಸೇನನ ।
ಕಾಲಸಂಕಲೆಯನು ಕಡಿಸಿ ದೇವಕನ ಹೆಡೆಮುರಿದ ॥
ತೋಳ ಬಿಗುಹಿನ ಬಂಧನವ ಸುಜ ।
ನಾಳಿ ನಲಿಯಲು ಬಿಡಿಸಿ ಪರಮ ಕೃ ।
ಪಾಳು ವಿನಯದಿ ಸಂತವಿಟ್ಟನು ಸಕಲ ಬಾಂಧವರ ॥ 412 ॥

॥ ದ್ವಿಪದಿ ॥

[ಮತ್ತೆ] ಮುರಹರನುಗ್ರಸೇನನಿಂಗಂದು ।
ಪೃಥ್ವಿಪಾಸನವನ್ನು ಪಾಲಿಸುವೆನೆಂದು ॥ 413 ॥

ಕರೆಸಿ ಜೋಯಿಸರೊಡನೆ ಲಗ್ನವನು ಕೇಳ್ದು ।
ಪರಮಸಂತೋಷವನು ಚಿತ್ತದಲಿ ತಾಳ್ದು ॥ 414 ॥

ಮಂಗಳಸ್ನಾನಮಂ ಗೈಸಿ ಮುದವೆತ್ತು ।
ಸಿಂಗರಿಸಿ ವಸ್ತ್ರಭೂಷಣವ ಮನವೊತು ॥ 415 ॥

ಕರೆತಂದು ಸಿಂಹಪೀಠದಲಿ ವೃದ್ದನನು ।
ಸರಭಸದಿ ಕುಳ್ಳಿರಿಸಿದನು ರಮಾಧವನು ॥ 416 ॥

ನಾರಿಯರು ಮಂಗಳಾರತಿಯನೆತ್ತಿದರು ।
ಹಾರುವರು ಮಂತ್ರದಕ್ಷತೆಯ ಬಿತ್ತಿದರು ॥ 417 ॥

ಬಳಿಕ ಬಹುದೇಶದರಸುಗಳು ಕಾಣಿಕೆಯ ।
ನಲವಿಂದ ನೀಡಿ ಕಂಡರು ಮಹೀಪತಿಯ ॥ 418 ॥

॥ ಸಾಂಗತ್ಯ – ರೂಪಕ ॥

ಇಂತೀ ವೈಭವದಿಂದಲುಗ್ರಸೇನಗೆ ನಲ ।
ವಾಂತು ಪಟ್ಟವಗಟ್ಟಿ ಹರಿಯು ॥
ಪಿಂತೆ ಕಂಸನ ಭಯದಿಂದೂರ ಬಿಟ್ಟು ದೇ ।
ಶಾಂತರ ಪೋದ ಯಾದವರ ॥ 419 ॥

ವಿನಯದಿ ಕರೆಸಿ ಮತ್ತವರವರುಗಳ ಮು ।
ನ್ನಿನ ಗೃಹ ಧನ ಕನಕಗಳ ॥
ಅನಿತುವನೊಲಿದವರವರಿಗೆ ಕೊಡಿಸಿ ಸ್ಥಾ ।
ಪನೆಯ ಗೈದನು ಮುನ್ನಿನಂತೆ ॥ 420 ॥

ಏನನೆಂಬೆನು ಭೂಪ ಯಾದವರುಗಳ ಸು ।
ಮ್ಮಾನದ ಸುಖದ ಸುಗ್ಗಿಯನು ॥
ಸ್ಥಾನಮಾನಾದಿಗಳಿಂದಲೊಪ್ಪಿದರಂದಾ ।
ದಾನವಾರಿಯ ಕರುಣದಲಿ ॥ 421 ॥

ಬಳಿಕ ಶ್ರೀಕೃಷ್ಣ ರಾಮರು ನಂದಗೋಪನ ।
ಬಳಿಗೆ ಬೇಗದಿ ನಡೆತಂದು ॥
ತಲೆವಾಗಿ ನಮ್ರೋಕ್ತಿಯಿಂದ ಪೇಳ್ದರು ತೊಳ ।
ತೊಳಗಲಾದಂತ ಪಂಕ್ತಿಗಳ ॥ 422 ॥

॥ ಕಾಂಭೋದಿ – ಏಕ ॥

ತಂದೆ ನೀ ಪೋಗು ಗೋಪ ।
ವೃಂದವ ನೊಡಗೊಂಡು ।
ನಂದಗೋಕುಲಕೆ ಸಾ ।
ನಂದದಿಂದಿಂದು ॥ 423 ॥

ಪಡೆದ ತಂದೆಯಿಂದ ನಾ ।
ಲ್ಮಡಿ ಮೋಹದಿಂದಲೆಮ್ಮ ।

ಬಿಡದೆ ರಕ್ಷಿಸಿದಿರಿ ।
ನುಡಿಯಲೇನಿನ್ನು ॥ 424 ॥

ಎನೆ ಕೇಳ್ದು ನಂದನು ಕಂ ।
ಬನಿಯದುಂಬುತಲಂದಾ ।
ದನುಜಮರ್ದನನೊಳು ।
ವಿನಯದಿಂದೆಂದ ॥ 425 ॥

॥ ನೀಲಾಂಬರಿ – ಅಷ್ಟ ॥

ಎಂತು ಪೋದಪೆನು ಗೋಕುಲಕಾನು । ಸಾಕ್ಷಾ ।
ದಂತರಾತ್ಮನೆ ನಿನ್ನ ಬಿಟ್ಟಿನ್ನು ॥
ಮುಂತಾರು ಗತಿಯೆನಗೆಂದೆನ್ನು । ತತಿ ।
ಚಿಂತಿಸಿ ನುಡಿದನಾ ನಂದನು ॥ 426 ॥

ನೆನೆವರ ಹೃದಯ ಮಂದಿರದೊಳಾ । ಗನು ।
ದಿನ ನೆಲೆಸೀರ್ಪೆ ತಾತನೆ ಕೇಳಾ ॥
ಮನದಿ ಸಂಶಯ ಬೇಡವೆನುತಲಿ । ಕಾಮ ।
ಜಕಕನುಸುರ್ದ ನಗುತಲಿ ॥ 427 ॥

॥ ಭಾಮಿನಿ ॥

ಎಂದು ಸುಪ್ರೇಮದಲಿ ಗೋಪರ ।
ವೃಂದವನು ನೆರೆ ತಿಳುಹಿ ತಮ್ಮಯ ।
ತಂದೆಯನು ಕಾತರಿಸದಿರಿ ನೀವೆನುತ ಸಂತೈಸಿ ॥
ಇಂದಿರಾಪತಿ ರಾಮರಧಿಕಾ ।
ನಂದಜಲ ಪಡಿಲುಳಿತಲೋಚನ ।
ದಿಂದ ಕಳುಹಿದರುಚಿತವಹ ಸತ್ಕಾರಗಳ ಮಾಡಿ ॥ 428 ॥

॥ ಮಧುಮಾಧವಿ – ತ್ರಿವುಡೆ ॥

ಮತ್ತೆ ಶೂರಕುಮಾರಕನು ನಿಜ ।
ಪುತ್ರರಿಂಗುಪನಯನವನು ತಾಂ ।
ಬಿತ್ತರಿಪೆನೆಂದೆನುತ ಸಂತಸ ।
ವೆತ್ತು ಗಾರ್ಗ್ಯಮುನೀಂದ್ರನ ॥ 429 ॥

ಕರೆಸಿ ವಿಧಿಪೂರ್ವಕದೊಳಾ ಶ್ರುತಿ ।
ಶಿರವಿರಾಜಿತಚರಣರಿಗೆ ಸಾ ।
ದರದಿ ಮುಂಜಿಯ ಕಟ್ಟಿದನು ಶುಭ ।
ತರವೆನಿಸಿ ಸುಮುಹೂರ್ತದಿ ॥ 430 ॥

ಮಣಿಕನಕ ಗೋಧನ ವಸನಗಳ ।
ನೆಣಿಕೆಯಿಲ್ಲದೆ ಭೂಸುರರ ಸಂ ।
ದಣಿಗೆ ಕೊಟ್ಟನು ಕಲ್ಪವೃಕ್ಷವ ।
ತೃಣಕೆ ಸರಿಗೈದಂದದಿ ॥ 431 ॥

ಆ ಸಮಯದಲಿ ತೋಷವೆತ್ತು ಸು ।
ವಾಸಿನಿಯರೊಂದಾಗಿ ಪರಮ ವಿ ।
ಲಾಸದಲಿ ಪೊಂಬಟ್ಟೆಯನು ಹಸೆ ।
ಹಾಸಿ ಮುರಹರ ಬಲರನು ॥ 432 ॥

ಜೋಡಿನಲಿ ಕುಳ್ಳಿರಿಸಿ ಪೊಸ ಕೈ ।
ವಾಡದಾರತಿಯನ್ನು ತಂದಾ ।
ಗಾಡಿಗಾತಿಯರೆತ್ತಿದರು ಮಿಗೆ ।
ಪಾಡುತಲಿ ಸಂಭ್ರಮದಲಿ ॥ 433 ॥

॥ **ಶೋಭಾನೆ** ॥

ಸುರನುತ ಪಾದಪದ್ಮನಿಗೆ ।
ಹರಿಗೆ ಕಾರುಣ್ಯಸದ್ಮನಿಗೆ ॥
ಪುರಹರಮಿತ್ರಗೆ ಕೋಮಲಗಾತ್ರಗೆ ।
ಪರಮಾನಂದಗೆ ಸದ್ಗುಣವೃಂದಗೆ ।
ಮುರಮಥನಗೆ ಸತ್ಕಥನಗೆ ಸತಿಯರು ।
ಕುರುಜಿನಾರತಿಯಽ ಬೆಳಗಿದರೆಽ ॥ ಶೋಭಾನೆಽ ॥ 434 ॥

ಶೇಷಸ್ವರೂಪಗೆ ಶುಭಕರಗೆ ।
ಕೇಶವಾಗ್ರಜಗೆ ಸುಂದರಗೆ ॥

ದೋಷರಹಿತಗೆ ಧರಾರಾಮರ ವಂದ್ಯಗೆ ।
ಭಾಸುರ ಮಣಿಗಣಭೂಷಗೆ ಕರುಣಾ ।
ರಾಶಿಯೆನಿಪ ಬಲಭದ್ರಗಬಲೆಯರು ।
ಬಾಸಿಗದಾರತಿಯಃ ಬೆಳಗಿದರೆಃ ॥ ಶೋಭಾನೆಃ ॥ 435 ॥

ಬಡನಡು ಬಳುಕೆ ಕಣ್ಪೊಳೆಯೆ । ಪೊಂ ।
ಗೊಡಮೊಲೆಗಳು ನಲಿನಲಿಯೆ ।
ಒಡಲಕಾಂತಿ ಥಳಥಳಿಸೆ ತುರುಬಿನೊಳು ।
ಮುಡಿದಿಹ ಪೂವುಗಳುದುರೆ ನೋಳ್ಪರಿಗುರೆ ।
ಬೆಡಗನುದೋರುತ ಕಡುಜವ್ವನೆಯರು ।
ಪಡಿಗದಾರತಿಯಃ ಸುಳಿದರೆಃ ॥ ಶೋಭಾನೆಃ ॥ 436 ॥

॥ **ವಾರ್ಧಕ** ॥

ಅರಸ ಕೇಳ್ಕೈ ಬಳಿಕ ಹರಿಬಲರ್ ಸಾಂದೀಪ ।
ಗುರುವಿನೆಡೆಗೈತಂದು ಸಕಲವಿದ್ಯವ ಕಲಿತು ।
ಪರವಶವ ವಡೆದೀರ್ಪ ಸುತನನಾ ಮುನಿಗೆ ತಂದಿತ್ತು ಸಂಪ್ರೀತಿಯಿಂದ ॥
ಕರುಣದಿಂ ಮೇಣುದ್ಧವನ ಗೋಕುಲಕೆ ಕಳುಹಿ ।
ವಿರಹದಿಂದಿರ್ಪ ಗೋಪಸ್ತ್ರೀಯರನು ಭಕ್ತ ।
ರೆರೆಯನ ಮುಖದೊಳೊಡಂಬಡಿಸಿದರ್ ನಂದಾದಿ ಸಕಲ ಗೋಪಾಲಕರನು॥437॥

ಮತ್ತೆ ಕಮಲಾಂಬಕಂ ಮುನ್ನ ಸೈರಂಧ್ರಿಗೊಲಿ ।
ದಿತ್ತ ಭಾಷೆಯ ತಿದ್ದಿ ಮೇಲೆ ಗಾಂಧಿನಿಯ ಸುತ ।
ನುತ್ತಮಾಲಯಕೆ ಬಂದವನಿಷ್ಟಮಂ ಸಲಿಸಿ ಪರಮಕಾರುಣ್ಯದಿಂದ ॥
ಚಿತ್ತಶುದ್ಧಿಯಲಿ ನಿಚ್ಚಂ ತನ್ನ ನೆನೆವರಂ ।
ಪೊತ್ತು ರಕ್ಷಿಸುವ ಬಿರಿದುಳ್ಳವಂ ತಾನೆನಿಸಿ ।
ಸ್ವಸ್ಥದಿಂ ಸಕಲಬಾಂಧವರನೊಡಗೂಡಿಯಧಿಕಾನಂದದಿಂದೆಸೆದನು ॥ 438 ॥

ಎಲೆ ಪರೀಕ್ಷಿತ ಧರಾಧೀಶ್ವರನೆ ನೀನೆನ್ನೊ ।
ಳಲಘುತರ ಭಕುತಿಯಿಂ ಬೆಸಗೊಂಡ ಕಾರಣಂ ।
ತಿಳಿವಂತೆ ಶ್ರೀಕೃಷ್ಣನತುಲಕಾರುಣ್ಯದಿಂದೊಲಿದು ಪೇಳಿದೆನಲ್ಲದೆ ॥
ಸುಲಭದಿಂ ವಶ್ಯಮಹುದೇ ಲೋಗರಿಂಗೆ ಮಂ ।
ಗಲತರಮೆನಿಪ್ಪೀ ಕಥಾಮೃತಂ ಪೂರ್ವಕೃತ ।
ಫಲದಿಂದ ಕೈಸಾರ್ದುದೆನುತ ನರನಾಥನಂ ಪೊಗಳ್ದನಾ ಮುನಿನಾಥನು ॥439॥

॥ **ಭಾಮಿನಿ** ॥

ನಿರತಮೀ ಸತ್ಕಥೆಯ ಕೇಳ್ವರ ।
ದುರಿತಹರವಜ್ಞಾನನಾಶನ ।
ಕರೆವನಂತಾಭ್ಯುದಯವೈಶ್ವರ್ಯಾಭಿವರ್ಧನವು ॥
ಪರಮಪುಣ್ಯಪ್ರದವೆನುತ ಸ ।
ತ್ಕರುಣದಲಿ ಶುಕಮುನಿಪನಂದಾ ।
ಧರಣಿಪಾಲ ಪರೀಕ್ಷಿತಂಗುಸುರಿದನು ಮನವೊಲಿದು ॥ 440 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಈ ಪರಿಯಲೆಸೆದಿರ್ಪುದೆಂಬ ರ ।
ಮಾಪತಿಯ ಚರಿತವನು ಶುಕಮುನಿ ।
ಯಾ ಪರೀಕ್ಷಿತಗೊರೆದುದನು ಸಂ ।
ಪ್ರೀತಿಯಿಂದ ॥ 441 ॥

ವಿರಚಿಸಿದೆನಿದ ಯಕ್ಷಗಾನದಿ ।
ಮೆರೆವ ಕನ್ನಡಭಾಷೆಯಲಿ ವ್ರಜ ।
ಪುರದೊಡೆಯ ಶ್ರೀಲೋಕನಾಥನ ।
ಕರುಣದಿಂದ ॥ 442 ॥

ಸೂರಭಟ್ಟಭಿಧಾನ ದ್ವಿಜಸುಕು ।
ಮಾರನಾಗಿಹ ರಾಮಶರ್ಮನು ।
ಧಾರಿಣಿಯೊಳೀ ಕಥೆಯ ಕೇಳ್ವುದು ।
ಸೂರಿಜನರು ॥ 443 ॥

॥ ಸೌರಾಷ್ಟ್ರ – ಏಕ ॥ ಮಂಗಲಪದ ॥

ಶ್ರೀಮದಗಜೆಯರಸಗೆ ಹರಗೆ ।
ಸಾಮಜಚರ್ಮಾಂಬರಧರಗೆ ॥
ಕಾಮಮಥನಗೆ ಕುಮಾರ ಪಿತಗೆ ಸು ।
ತ್ರಾಮ ಮುಖ್ಯಾಮರಸೇವಿತಗೆ ॥
ಮಂಗಲಂ ಜಯ ಮಂಗಲಂ ॥ 444 ॥

ಬಾಲಾರ್ಯಮ ಶತಭಾಸನಿಗೆ ।
ಜ್ವಾಲಾಂಬಕಗೆ ಮಹೇಶನಿಗೆ ॥
ಕಾಲಾಂತಕಗೆ ಕೃಪಾವಾರಿಧಿಗೆ ಕ ।
ಪಾಲಕರಗೆ ಭವಭಯ ಹರಗೆ ॥
ಮಂಗಲಂ ಜಯ ಮಂಗಲಂ ॥ 445 ॥

ದೋಷವಿದೂರಗೆ ಶರ್ವನಿಗೆ ।
ಕೇಶವಸಖಗೆ ಸನಾತನಗೆ ॥
ಈಶಾನಗೆ ಶ್ರೀಗೋಷ್ಟಪುರವರಾ ।
ಧೀಶ ಶ್ರೀಲೋಕನಾಥೇಶನಿಗೆ ॥
ಮಂಗಲಂ ಜಯ ಮಂಗಲಂ ॥ 446 ॥

* * * * *

ಶಬ್ದಾರ್ಥಸೂಚಿ

[ಆವರಣದಲ್ಲಿ ಪ್ರಸಂಗಸಂಖ್ಯೆ ಮತ್ತು ಪದ್ಯಸಂಖ್ಯೆಯನ್ನು ಕೊಟ್ಟಿದೆ]

ಅಂಗರೇಕ (3–243) – ನಿಲುವಂಗಿ
ಅಜಸ್ರ (4–78) – ಸತತ
ಅರ್ಭಕ (1–152) – ಮಗು
ಅಶನಿ (4–159) – ಗುಡುಗು
ಅಹಿತಲ್ಪ (1–11) – ಶೇಷಶಾಯಿ
ಆಣ್ಮ (2–19) – ಒಡೆಯ
ಆಮ್ನಾಯ (4–66) – ವೇದ
ಆರಾಮ (4–128) – ಉಪವನ
ಇನಜನೂರು (3–285) – ಯಮನ ಪಟ್ಟಣ
ಇಭವಾಹ (1–134) – ದೇವೇಂದ್ರ
ಉಡೆ (3–156) – ಬಟ್ಟೆ
ಎರೆಯ (1–55) – ಕಾಂತ
ಎಲರಶನ (1–105) – ಶೇಷ, ಬಲರಾಮ
ಕಂಧರ (3–338) – ಕೊರಳು
ಕಪರ್ದಿನಿ (4–108) – ಪಾರ್ವತಿ
ಕಪ್ಪಡ (3–235) – ಬಟ್ಟೆ
ಕಬಳ (3–222) – ತುತ್ತು
ಕರುವಳ (3–52) – ಕರುಗಳನ್ನು ಕಾಯುವವನು
ಕ್ಷಮೆ (1–191) – ಭೂಮಿ
ಕಾಕ (3–381) – ವಕ್ರ
ಕಿರುಕೂಳ (3–233) – ನೀಚ
ಕಿಸಲಯ (4–129) – ತಳಿರು
ಕುಂಭಿ (3–317) – ಆನೆ
ಕುಡ್ಯ (4–126) – ಗೋಡೆ
ಕುರಂಗಾಕ್ಷಿ (1–136) – ಹರಿಣಾಕ್ಷಿ

ಕುಸ್ತರಿಸು (3–171)	–	ಸಂತೈಸು
ಕೈವಾಡ (3–433)	–	ಕುಶಲಕೆತ್ತನೆ
ಗಾಳಿಗೂಳ (3–203)	–	ಸರ್ಪ
ಗೋಕರ್ಣರಾಜ (3–211)	–	ಆದಿಶೇಷ
ಘಸಣಿ (3–376)	–	ಘಾಸಿ
ಚಲನಾತ್ಮಭವ (1–89)	–	ವಾಯುಸಂಭವ, ಭೀಮ
ಜೋದ (3–325)	–	ಮಾವುತ
ಜೊನ್ನ (3–265)	–	ಬೆಳದಿಂಗಳು
ದಂದುಗ (1–83)	–	ತೊಂದರೆ
ದಶನ (4–160)	–	ದಂತ
ದಶಲಪನ (4–165)	–	ದಶಕಂಠ, ರಾವಣ
ದ್ರವಗಲ್ಲು (3–214)	–	ಚಂದ್ರಕಾಂತಶಿಲೆ
ಧ್ವಾಂತಾರಿ (4–55)	–	ಸೂರ್ಯ
ನಯಸರ (3–310)	–	ಇಂಪಾದ ಸ್ವರ
ನಿಟ್ಟೆಲುವು (3–262)	–	ಬೆನ್ನುಮೂಳೆ
ನಿಪ್ಪಸರ (3–372)	–	ರಭಸ
ನಿಶೀಥಿನಿ (4–4)	–	ರಾತ್ರಿ
ನೀರ್ನೇಜಕ (3–231)	–	ಅಗಸ
ಪಕ್ಕೆ (3–203)	–	ಹಾಸುಗೆ
ಪಡಿಗ (3–436)	–	ಸ್ಫಟಿಕ
ಪನ್ನತಿಕೆ (3–386)	–	ಪರಾಕ್ರಮ
ಪಾಕ (3–204)	–	ಮಗು
ಪುಟಭೇದನ (4–28)	–	ವಾದ್ಯವಿಶೇಷ
ಬಾಲಾರ್ಯಮ (3–445)	–	ಬಾಲಸೂರ್ಯ
ಬಿಡೆಯ (4–413)	–	ನಾಚಿಕೆ
ಬೀಡಿಕೆ (3–212)	–	ಬಿಡಾರ
ಬೀಯ (4–268)	–	ನಾಶ
ಬೋಡು (4–137)	–	ತಲೆ

ಮಾವಂತಿಗ (3–320) – ಮಾವುತ
ಮಿಸುನಿ (2–31) – ಬಂಗಾರ
ಮುಂಜಾಡಿಕೆ (3–386) – ಮುಂಭಾಗದ ವಸ್ತ್ರ
ಯಂತೃ (3–326) – ನಿಯಂತ್ರಕ
ಯಾತುಧಾನ (4–118) – ರಾಕ್ಷಸ
ರವಿಜೆ (3–172) – ಯಮುನಾನದಿ
ಲಳಿಗೆ (3–65) – ನಳಿಗೆ
ಲುಳಿತ (3–428) – ಹನಿಸಿದ
ವಂದಾರು (3–3–29) – ವಂದಿಸುವವನು
ವಿಭಾವರಿ (3–103) – ರಾತ್ರಿ
ವಿಯದ್ವಾಣಿ (4–269) – ಆಕಾಶವಾಣಿ
ಸೊಲ್ಮಡದಿಯಾಣ್ಮ (3–385) – ವಾಗ್ದೇವಿಯ ಗಂಡ, ಬ್ರಹ್ಮ
ವಿನತಜ (1–181) – ಗರುಡ
ವೇಷ್ಠಿಸು (3–301) – ಸುತ್ತುವರಿಯು
ಶಾಲೂರ (4–100) – ಕಪ್ಪೆ
ಸಸಿಮುಖಿ (3–254) – ಚಂದ್ರಮುಖಿ
ಹಸುಗೆ (1–8) – ಪಾಲು
ಹಿಮಾಂಶು (3–264) – ಚಂದ್ರ

* * * * *

ರಾಜ್ಯಪ್ರಶಸ್ತಿ ಪುರಸ್ಕೃತ
ಶಿರೂರು ಫಣಿಯಪ್ಪಯ್ಯ
(ಕಿರುಪರಿಚಯ)

ಜನನ : 06 ಜುಲೈ 1918

ನಿಧನ : 12 ಮಾರ್ಚ್ 2004

ತಂದೆ–ತಾಯಿ : ದೇವಪ್ಪಯ್ಯ ಮತ್ತು ಗೌರಮ್ಮ

ಹೆಂಡತಿ : ಗಿರಿಜಾ

ಮಕ್ಕಳು : ದೇವಪ್ಪಯ್ಯ, ಪರಮೇಶ್ವರಯ್ಯ, ಪ್ರಭಾಕರಯ್ಯ, ಉಮೇಶ, ರಮೇಶ (ಪುತ್ರರು) ಶಕುಂತಳಾ (ಪುತ್ರಿ)

ರಚಿಸಿದ ಯಕ್ಷಗಾನ ಪ್ರಸಂಗಗಳು: ಶ್ರೀಕೃಷ್ಣಗಾರುಡಿ, ಮಹೇಂದ್ರವಿಜಯ, ನಹುಷೋದ್ಭವ, ಮದಾಲಸಾ ಪರಿಣಯ, ವಾಜಿಗ್ರಹಣ, ಸಗರಾಶ್ವಮೇಧ, ಅಮೃತಾಪಹರಣ, ಶ್ವೇತಚಂದ್ರಿಕಾ, ವೀರವರ್ಮಕಾಳಗ, ನೀಲಧ್ವಜಕಾಳಗ, ಭೂಮಿಕಾಪರಿಣಯ, ಭ್ರಮರವೇಣಿಕಲ್ಯಾಣ, ಪೌಲೋಮಚರಿತ್ರೆ, ಸರ್ಪಾಧ್ವರ, ಅಬ್ಯಾಡಿ ಕ್ಷೇತ್ರಮಹಾತ್ಮೆ. (ಒಟ್ಟು 15 ಪ್ರಸಂಗಗಳು)

ಪ್ರಶಸ್ತಿ–ಪುರಸ್ಕಾರಗಳು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯಪ್ರಶಸ್ತಿ (2001),
ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಹಟ್ಟಿಯಂಗಡಿ.(1997)
ದಕ್ಷಿಣಕನ್ನಡ ಜಿಲ್ಲಾ ಕರಾವಳಿ ಉತ್ಸವ ಸನ್ಮಾನ, (2000).

ಹವ್ಯಾಸ : ಯಕ್ಷಗಾನ ಭಾಗವತಿಕೆ, ಮೃದಂಗ ಕಟ್ಟುವುದು, ಮೃದಂಗ ನುಡಿಸುವಿಕೆ, ನೃತ್ಯಶಿಕ್ಷಣ ನೀಡುವಿಕೆ, ಮಣ್ಣಿನ ಗಣಪತಿ ರಚನೆ, ಮದುವೆ ಮಂಟಪರಚನೆ ಇತ್ಯಾದಿ ಕೌಶಲ, ಗಿಡಮೂಲಿಕೆ ಔಷಧಿ ನೀಡಿಕೆ, ಜ್ಯೋತಿಷ್ಯ, ತಾಳೆಗರಿ ಓದುವುದು ಮತ್ತು ಯಕ್ಷಗಾನ ಪ್ರಸಂಗ ಸಂಗ್ರಹ.

* * * * *



ಶಿರೂರು ಫಣಿಯಪ್ಪಯ್ಯನವರ ಶ್ರೀ ಕೃಷ್ಣಗಾರುಡಿ ಒಟ್ಟು 203 ಪದ್ಯಗಳಿರುವ ಪ್ರತಿಭಾಪೂರ್ಣ ಪ್ರಸಂಗ. ವಿನೂತನ ಕಥಾಹಂದರ, ಸನ್ನಿವೇಶ ರಮ್ಯತೆ , ರಸವೈವಿಧ್ಯ, ಸಾಹಿತ್ಯ ಸೌಂದರ್ಯ, ಸುಲಲಿತವಾದ ಪದ್ಯಬಂಧಗಳು ಈ ಪ್ರಸಂಗದ ಮಹಿಮೆ. ಕವಿಯು ಸ್ವಯಂ ಭಾಗವತರಾದುದರಿಂದ ಪದ್ಯಗಳ ರಚನೆಯಲ್ಲಿ ಸಂಗೀತ ಸಾಹಿತ್ಯಗಳ ಸಮಾಮೇಲನ ಸಮುಚಿತವಾಗಿ ಮೂಡಿ ಬಂದಿದೆ.

ಜಾನಪದ ಲೋಕದ ಸಂಕೀರ್ಣಕಥಾ ವರ್ಗಕ್ಕೆ ಸೇರುವ ಮಹೇಂದ್ರವಿಜಯ ಹೊಸಮಾದರಿಯ ಪ್ರಸಂಗಗಳ ಕಕ್ಷೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯಕೃತಿ. ಪೂರ್ವಕವಿಗಳ ಪದ್ಯ ಬಂಧಗಳನ್ನೇ ಹೋಲುವ ಸುಂದರರಚನೆಗಳನ್ನು ಹೆಣೆಯುವಲ್ಲಿ ವಿಶೇಷ ಒಲವನ್ನು ತೋರುವ ಕವಿ ಹಟ್ಟಿಯಂಗಡಿ ರಾಮ ಭಟ್ಟ, ಮುದ್ದಣ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮುಲ್ಕಿ ರಾಮಕೃಷ್ಣಯ್ಯ ಮುಂತಾದವರ ಪ್ರಭಾವ, ಪ್ರೇರಣೆಗೆ ಒಳಗಾಗಿರುವುದು ಅಲ್ಲಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಹಟ್ಟಿಯಂಗಡಿ ರಾಮಭಟ್ಟರ ಬಿಲ್ಲಹಬ್ಬ ಕಂಸವಧೆ ಭಾಗವತ ಪುರಾಣವನ್ನು ಆಧರಿಸಿದ ಅತ್ಯುತ್ತಮ ಪ್ರಸಂಗ ಕೃತಿ.ಭಾಷಾ ಶೈಲಿ, ಛಂದೋಬಂಧ,ಕಾವ್ಯಮೌಲ್ಯಗಳ ದೃಷ್ಟಿಯಿಂದ ಇದನ್ನು ಕವಿಯ ಉತ್ಕೃಷ್ಟ ರಚನೆ ಎನ್ನಬೇಕು. ಅಪೂರ್ವವಾಗಿ ತಾರಾವಳಿ ವೃತ್ತ ದಂಡಕ ಎಂಬ 29 ಸಾಲುಗಳ ಛಂದೋಬಂಧವನ್ನು ಈ ಪ್ರಸಂಗದಲ್ಲಿ ಕಾಣಬಹುದು.

ರತ್ನಾಪುರ ರಾಮ ಬರೆದ ಮೂಲಕಾಸುರ ಕಾಳಗ ಪ್ರಸಂಗದಲ್ಲಿ ಕಾವ್ಯದ ಮನೋಹರತೆ ಗಮನಾರ್ಹ ವಾಗಿದೆ.ಹಲವಾರು ವಾರ್ಧಿಕ ಷಟ್ಪದಿಗಳು ಅನುಪ್ರಾಸ ವೈಭವದಿಂದ ಮನಸೆಳೆಯುತ್ತವೆ. ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿವೆ. ಕೆಲವು ಸೃಜನಶೀಲವಾದ ವಿನ್ಯಾಸಗಳು ರಂಗದಲ್ಲಿ ಚೇತೋಹಾರಿಯಾದ ಅನುಭವಕ್ಕೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಈ ನಾಲ್ಕು ಪ್ರಸಂಗಗಳ ಸಂಪುಟವು ಯಕ್ಷಗಾನ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ತುಂಬಾ ಸಹಕಾರಿಯಾಗಿದೆ.

–ಡಾ ಕಬ್ಬಿನಾಲೆ ವಸಂತ ಭಾರದ್ವಾಜ್ (ಮುನ್ನುಡಿಯಿಂದ)

ಫಣಿಗಿರಿ ಪ್ರತಿಷ್ಠಾನ
ಶಿರೂರು